
ಕವಿ "ಶುಕವಾಣಿ" ವಿರಚಿತ

ಸ್ವತಂತ್ರ ಭಾನು

(ಮಹಾತ್ಮ ಗಾಂಧಿ ಜೀವನ ದರ್ಶನ)

ಭೋಗ ಷಟ್ಪದೀ ಕಾವ್ಯ



A unique epic peom on Gandhiji in Bhoga Shatpadi

ವಿ.ಎಸ್. ರಾಮಕೃಷ್ಣ
'ವನಸುಮ'
ಕುಶಾಲನಗರ

"**Swathantra Bhanu**" *a unique epic poem on Gandhiji in Boga Shatpadi by* **V.S. RAMAKRISHNA, 'Vanasuma,' KUSHALNAGAR.**

ಮೊದಲ ಮುದ್ರಣ : 2002

ಬೆಲೆ : 50/-

ಮುದ್ರಣ : ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ
ಮಡಿಕೇರಿ - 571 201
☎: 28829/28382 Fax: 08272 - 28875
email : shakti_kf@vsnl.com

ಅರ್ಪಣೆ

ಸ್ವಾತಂತ್ರ್ಯ ಶಿಲ್ಪಿ,
ಸ್ವಾತಂತ್ರ್ಯ ಭಾನು
ರಾಷ್ಟ್ರಪಿತ
ಮಹಾತ್ಮ ಗಾಂಧೀಯವರ
ಚರಣ ಕಮಲಗಳಲ್ಲಿ
ಭಕ್ತಿಯಿಂದ ಅರ್ಪಿಸಲಾಗಿದೆ.

(ಲೇಖಕರು 'ಕ್ವಿಟ್ ಇಂಡಿಯ' ಚಳುವಳಿಯಲ್ಲಿ
ಭಾಗವಹಿಸಿ ಸೆರೆಮನೆ ಕಂಡ ನೆನಪಿಗಾಗಿ)

ಕುಶಾಲನಗರ
10.9.2001

ವಿ.ಎಸ್. ರಾಮಕೃಷ್ಣ
ವನಸುಮ

ನಿವೇದನ

ಲೋಕದಲ್ಲಿ ಧರ್ಮದ ಗ್ಲಾನಿಯುಂಟಾದಾಗ ತಾನೇ ಒಂದಲ್ಲ ಒಂದು ರೂಪದಲ್ಲಿ ಅವತರಿಸಿ ಧರ್ಮದ ಪುನರುತ್ಥಾನ ಎಸಗುತ್ತೇನೆ' ಎಂದು ಭಗವಂತನು ಗೀತೆಯಲ್ಲಿ ನುಡಿದ ಅಮರವಾಣಿ ಶಾಶ್ವತ ಮೌಲ್ಯದಿಂದ ಶೋಭಿಸುತ್ತಿದೆ. ಧರ್ಮದ ಮೆರಗಿನ ಹೊಂಗಿರಣದಿಂದ ವಿರಾಜಿಸುತ್ತಿರುವ 'ಸತ್ಯ' 'ಅಹಿಂಸೆ' 'ಶಾಂತಿ'ಯ ಮೌಲ್ಯಗಳೂ ಸನಾತನ ಶಕ್ತಿಗಳಾಗಿದ್ದು ವ್ಯಕ್ತಿ, ಸಮಾಜ, ರಾಷ್ಟ್ರಗಳನ್ನು ಚೇತನಾತ್ಮಕವಾದ ಪ್ರಬಲ ಘಟಕಗಳಾಗಿ ಬೆಳೆಸುವಲ್ಲಿ ಅನವರತವೂ ಸ್ಫೂರ್ತಿಯುತ ಚೇತನ ದ್ರವ್ಯಗಳನ್ನು ನೀಡುತ್ತಾ ಪ್ರಜ್ಞಾವಂತ ಸಮಾಜ ನಿರ್ಮಾಣಕ್ಕೆ ಕಟಿಬದ್ಧವಾಗಿರುತ್ತವೆ.

ಬ್ರಿಟಿಷರ 'ಸೂರ್ಯನೇ ಮುಳುಗದ' ಸಾಮ್ರಾಜ್ಯಾಂತರ್ಗವಾಗಿದ್ದ ಭಾರತದಲ್ಲಿ ಸತ್ಯ, 'ಅಹಿಂಸೆ,' 'ಶಾಂತಿಗಳ' ಶಾಶ್ವತ ಮೌಲ್ಯಗಳು ಶಿಥಿಲವಾಗುತ್ತಿದ್ದ ಕಾಲದಲ್ಲಿ ವಿಶ್ವ ಚೇತನ ಗರ್ಭದಿಂದ ಆವಿರ್ಭವಿಸಿ ಭಾರತವನ್ನು ಪರಾಕ್ರಮಣದಿಂದ ಮುಕ್ತಗೊಳಿಸಿ ಶಾಶ್ವತ ಮೌಲ್ಯಗಳ ವಿನೂತನ ಕಾಂತಿ ಮತ್ತೊಮ್ಮೆ ಬೆಳಗುವಂತೆ ವಿದ್ಯುತ್ ಪ್ರೇರಣೆ ನೀಡಿದ 'ಯುಗ ಪುರುಷ' 'ರಾಷ್ಟ್ರಪಿತ ' ಸತ್ಯಾನ್ವೇಷಕ' ಮಹಾತ್ಮ ಗಾಂಧಿಯವರು ಭಾರತ ಸ್ವತಂತ್ರ ಸ್ಥಾಪನೆಯ ಮೂಲಕ ನಭೋಮಂಡಲದ 'ಸ್ವತಂತ್ರ ಭಾನು'ವಾಗಿ ವಿರಾಜಿಸುತ್ತಿದ್ದಾರೆ.

ರಾಷ್ಟ್ರಪಿತಮಹಾತ್ಮಗಾಂಧಿಯವರ 'ಸತ್ಯಾನ್ವೇಷಣೆ' ರೋಮಾಂಚಕ ಕಥೆಯನ್ನು ಬಣ್ಣಿಸುವ ನಾನಾಕೃತಿಗಳು ಕನ್ನಡದಲ್ಲಿದ್ದರೂ ರಾಷ್ಟ್ರ ಪ್ರೇಮವನ್ನು ಉದ್ದೀಪನಗೊಳಿಸುವ ಕಾವ್ಯ ಗ್ರಂಥಗಳು ವಿರಳವಾಗಿವೆ. ಅರಕೆರೆಯ ಬಿ. ಬೊಮ್ಮರಸೇ ಗೌಡರು ಭಾಮಿನಿ ಷಟ್ಪದೀ ಛಂದಸ್ಸಿನಲ್ಲಿ ಬರೆದ 105 ಸಂಧಿಗಳುಳ್ಳ ಪ್ರೌಢ ಕಾವ್ಯ ನನ್ನ ಗಮನಕ್ಕೆ ಬಂದಿದೆ. ಪ್ರಸ್ತುತ ನಾನು ಬರೆದ 'ಸ್ವತಂತ್ರ ಭಾನು' ವೆನ್ನುವ ಈ ಗ್ರಂಥವು "ಭೋಗಷಟ್ಪದೀ" ಛಂದಸ್ಸಿನಲ್ಲಿದ್ದು ಸರಳ ಶೈಲಿಯಲ್ಲಿದೆ. ಈ ಗ್ರಂಥವು "ತಿರುಕನ ಕನಸು" ಎಂಬ ಕವನದಂತಿದೆ.

ಉದಾ:

ತಿರುಕನೊಬ್ಬನೂರಮುಂದೆ

ಮುರುಕುಧರ್ಮ ಶಾಲೆಯಲ್ಲಿ

ಯಿರುತಲೊಂದು ಕನಸಕಂಡ ಪರಿಯದೆಂತೆನೆ ||

'ಸ್ವತಂತ್ರ ಭಾನು' ಗ್ರಂಥಕ್ಕೆ ಭೋಧಪ್ರದ ಮುನ್ನುಡಿ ಬರೆದು ಕೊಟ್ಟು, ಗ್ರಂಥದ ಘನತೆಯನ್ನು ಹೆಚ್ಚಿಸಿದ "ಶಕ್ತಿ" ಪತ್ರಿಕೆಯ ಸಂಪಾದಕರೂ, ಸಾಹಿತಿಗಳೂ ಆದ ಶ್ರೀ ಜಿ. ರಾಜೇಂದ್ರರವರನ್ನು, "ಕೊಡಗು ಫ್ರಂಟ್" ಪತ್ರಿಕೆಯ ಸಂಪಾದಕರಾದ ಶ್ರೀ ಬಿ.ಜಿ. ಅನಂತಶಯನರವರನ್ನೂ, ಅಂದವಾಗಿ ಮುದ್ರಿಸಿ ಪ್ರಕಟಿಸಿದ "ಶಕ್ತಿ" ಮುದ್ರಣಾಲಯದ ಕಾರ್ಯಪ್ರವೃತ್ತ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿಯವರನ್ನೂ ಧನಸಹಾಯ ನೀಡಿ ಪ್ರೋತ್ಸಾಹಿಸಿದ ಬಂಧು ವರ್ಗದವರನ್ನೂ ಅಭಿಮಾನಪೂರ್ವಕವಾಗಿ ಅಭಿನಂದಿಸುತ್ತಾ ಈ ಕಾವ್ಯಕುಸುಮವನ್ನು ಕನ್ನಡ ಕಾವ್ಯ ರಸಿಕ ಹಸ್ತ ಕಮಲಗಳಲ್ಲಿ ಅರ್ಪಿಸುತ್ತಿದ್ದೇನೆ. ಲೋಪ ದೋಷಗಳನ್ನು ಕ್ಷಮಿಸಿ ನನ್ನ ಅವಗಾಹನೆಗೆ ತಂದರೆ ಪರಿಹರಿಸಿಕೊಳ್ಳಲು ಅನುಕೂಲವಾಗುವುದು.

'ವನಸುಮ'
ಬೈಚನ ಹಳ್ಳಿ
ಕೊಡಗು, ಕುಶಾಲನಗರ -571 234

ಇಂತೀ ನಮ್ರ ನಮನಗಳು,
ವಿ.ಎಸ್. ರಾಮಕೃಷ್ಣ

ಮುನ್ನುಡಿ

ಕನ್ನಡ ಸಾಹಿತ್ಯ ಲೋಕದಲ್ಲಿ ಗದ್ಯ ರೂಪದಲ್ಲಿ ಸಾಕಷ್ಟು ಬರಹಗಳು ಮೂಡಿ ಬರುತ್ತಿವೆ. ಇತ್ತೀಚೆಗೆ ಪದ್ಯ ರೂಪದಲ್ಲಿಯೂ ಹಲವು ಕೃತಿಗಳು ಪ್ರಕಟಗೊಳ್ಳುತ್ತಿವೆ. ಆದರೆ, ಕಾವ್ಯ ರೂಪದಲ್ಲಿ ಲಘು ಗುರುಗಳ ಜೋಡಣೆಯೊಂದಿಗೆ ಅರ್ಥ ಪ್ರಾಸಗಳ ಸಮ್ಮಿಲನದೊಂದಿಗೆ ಕೃತಿಗಳನ್ನು ರಚಿಸುವುದು ಅತ್ಯಂತ ಸಾಹಸೀ ಕಾರ್ಯವೇ ಆಗಿದೆ. ಈ ರೀತಿಯ ಕಾವ್ಯ ರಚನೆಗೆ ಅಂತಹ ಕೃತಿಕಾರರು ಸ್ವತಃ ಭಾಷಾ ಪ್ರಾವೀಣ್ಯತೆ ಸಾಧಿಸಿರಬೇಕು. ನಿರರ್ಗಳವಾಗಿ ಪದ ಜೋಡಣೆಗಳು ಅಸ್ಖಲಿತವಾಗಿ ಹೊರ ಹೊಮ್ಮುವಂತಹ ಸಾರ್ವಭೌಮತ್ವ ಹೊಂದಿರಬೇಕು. ಇಂತಹ ಸಾಹಿತ್ಯ ಅಗ್ರವರೇಣ್ಯರ ಸಾಲಿನಲ್ಲಿ ಕೊಡಗಿನ ಕುಶಾಲನಗರದ ಈ ಕೃತಿಕಾರರಾದ ಶ್ರೀ ವಿ.ಎಸ್. ರಾಮಕೃಷ್ಣ ಅವರು ಸೇರುತ್ತಾರೆ ಎನ್ನುವದು ಪ್ರಾಯೋಗಿಕವಾಗಿ ಒಪ್ಪತಕ್ಕಂತಹ ವಿಚಾರ.

ಸಾಹಿತ್ಯ ಕ್ಷೇತ್ರದಲ್ಲಿ ಅವರು ಅನೇಕ ಕೃತಿಗಳನ್ನು ರಚಿಸಿರಬಹುದು. ಆ ಪೈಕಿ ವಾರ್ಧಕ ಷಟ್ಪದಿಯಲ್ಲಿ ಈ ಹಿಂದೆ ರಚಿಸಿ ಪ್ರಕಟಿಸಿರುವ "ಶ್ರೀ ರಾಮಚರಿತ್ರಾಮೃತ" ಗ್ರಂಥ ಅತ್ಯುನ್ನತ ಕೃತಿ ಎನ್ನಬಹುದು. ಪಂಪ, ರನ್ನ, ಕುಮಾರವ್ಯಾಸರ ಶೈಲಿಯ ಅದ್ಭುತ ಕೌಶಲ್ಯ ಈ ಕೃತಿಯಲ್ಲಿ ಕಂಡು ಬಂದ ಅಂಶ. ಆ ಬಳಿಕ ಕೊಡವ ಭಾಷೆಯಲ್ಲಿ ಅವರು ಪ್ರಕಟಿಸಿರುವ ಭಾಮಿನಿ ಷಟ್ಪದಿ ಕಾವ್ಯಗಳು ಕೂಡಾ ಇಲ್ಲಿ ಉಲ್ಲೇಖಾರ್ಹ.

ಇದೀಗ ಭೋಗ ಷಟ್ಪದಿಯಲ್ಲಿ 'ಸ್ವತಂತ್ರ ಭಾನು' ಕೃತಿ ಪ್ರಕಟಗೊಳ್ಳುತ್ತಿದೆ. ಭಾರತದ ಪಿತಾಮಹ ಮಹಾತ್ಮಗಾಂಧಿ ಅವರು ನಡೆದು ಬಂದ ದಾರಿಯ ಕುರಿತು ನಮಗೆ ತಿಳಿದ ಮಟ್ಟಿಗೆ ಕಾವ್ಯ ರೂಪದಲ್ಲಿ ಕನ್ನಡದಲ್ಲಿ ಇದು ಪ್ರಪ್ರಥಮ ಕೃತಿ ಎನ್ನಬಹುದಾಗಿದೆ. ಸರ್ವರಿಗೂ ಅರ್ಥವಾಗುವ ಕನ್ನಡ ಪದಗಳ ಬಳಕೆಯೊಂದಿಗೆ ಗಾಂಧೀಜಿಯ ಜನನದಿಂದ ಪ್ರಾರಂಭಗೊಂಡು ರಾಜಘಾಟ್‌ನಲ್ಲಿ ಅವರ ಅಂತಿಮ ಯಾತ್ರೆಯವರೆಗೂ ಚಿತ್ರಣವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಲಾಗಿದೆ. ಭಾರತದ ಶಾಂತಿಧೂತನಾಗಿ ಸ್ವಾತಂತ್ರ್ಯ ಸಂಗ್ರಾಮದ ಅಹಿಂಸೆಯ ಕಹಳೆಯೂದಿದ ಹಾಗೂ ಈ ಉದ್ದಾಮ ಕಾರ್ಯದಲ್ಲಿ ಯಶಸ್ಸು ಸಾಧಿಸಿದ ಗಾಂಧೀಜಿಯವರ ಜೀವನ ಹಾಗೂ ದೇಶ ಸೇವೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು

ಹೊತ್ತು ಈ ಕಾವ್ಯ ಪ್ರಕಟಗೊಂಡಿದೆ. ಇಂತಹ ಸರಳ, ಅರ್ಥಪೂರ್ಣ ಕಾವ್ಯದ ಒಂದೊಂದು ಭಾಗವನ್ನು ಶಾಲೆಗಳಲ್ಲಿಯೂ ಕೂಡ ಮಕ್ಕಳಿಗೆ ರಾಗಪೂರ್ಣವಾಗಿ ಹೇಳಿಕೊಡುವ ವ್ಯವಸ್ಥೆಯನ್ನು ಸರಕಾರ ಹಾಗೂ ಶಿಕ್ಷಣ ಇಲಾಖೆ ಕೈಗೊಳ್ಳಬಹುದು ಎನ್ನುವದು ಕೂಡಾ ಇಲ್ಲಿ ಸಲಹಾತ್ಮಕವಾಗಿದೆ.

ಈ ಮುನ್ನುಡಿಯನ್ನು ಮುಕ್ತಾಯಗೊಳಿಸುವ ಮುನ್ನ ಕೃತಿಕಾರರಾದ ಶ್ರೀ ವಿ.ಎಸ್. ರಾಮಕೃಷ್ಣನವರು ವಯೋ ಪರಿಮಿತಿಯಲ್ಲಿ ನಿವೃತ್ತರಾಗಿದ್ದರೂ ಸಾಹಿತ್ಯ ಕೃಷಿಯಲ್ಲಿ ಇನ್ನು ತರುಣರು ಎನ್ನುವುದು ಸಮಂಜಸವಾಗುತ್ತದೆ. ಇವರು ಶತಾಯುಷಿಗಳಾಗಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಸೇವೆಯನ್ನು ಮುಂದುವರಿಸುವಂತಾಗಲಿ ಎಂದು ಭಾರತ ಮಾತೆಯನ್ನು ಅನನ್ಯ ಪ್ರಾರ್ಥಿಸೋಣ.

ಜಿ. ರಾಜೇಂದ್ರ
"ಶಕ್ತಿ" ಸಂಪಾದಕ

ಪರಿವಿಡಿ

ಸಂಖ್ಯೆ	ವಿಷಯ		ಪುಟ
ಅಧ್ಯಾಯ ೧			
೧.	ಜನನ - ಮಾತಾಪಿತರು	.....	೧
೨.	ಬಾಲ್ಯ	.....	೨
೩.	ಬಾಲ್ಯ ವಿವಾಹ	.....	೩
೪.	ಪ್ರೌಢ ಶಿಕ್ಷಣ	.....	೪
೫.	ದುರಂತ : ಪಿತನ ಮರಣ	.....	೬
೬.	ಧರ್ಮ ಪರಿಚಯ	.....	೭
೭.	ಇಂಗ್ಲೆಂಡಿಗೆ ಪಯಣ	.....	೮
೮.	ಲಂಡನ್ ನಗರ ಗಮನ	.....	೧೦
೯.	ಸಸ್ಯಾಹಾರಕ್ಕೆ ಒಲವು	.....	೧೧
೧೦.	ಆಹಾರ ವಿಚಾರದಲ್ಲಿ ಪ್ರಯೋಗಗಳು	.....	೧೩
೧೧.	ಬ್ರಹ್ಮಚರ್ಯ - ಗೃಹಸ್ಥಾಶ್ರಮ	.....	೧೫
೧೨.	ಧರ್ಮ ದರ್ಶನ	.....	೧೬
೧೩.	ಪ್ಯಾರಿಸ್ ದರ್ಶನ - ಬಾರ್ ಎ ಟ್ ಲಾ ಪದವಿ	.....	೧೯
೧೪.	ಮಾತೃ ಭೂಮಿಯಲ್ಲಿ	.....	೨೦
ಅಧ್ಯಾಯ ೨			
೧.	ಬದುಕಿನ ಭರದಲ್ಲಿ	.....	೨೨
೨.	ಪ್ರಥಮ ಖಟ್ಲೆ (ಮೊಕದ್ದಮೆ)	.....	೨೪
೩.	ನೆಟಾಲಿಗೆ ಪಯಣ	.....	೨೭
೪.	ಪ್ರಿಟೋರಿಯದ ಹಾದಿಯಲ್ಲಿ	.....	೨೯

೫. ಪ್ರಿಟೋರಿಯದಲ್ಲಿ ಅನುಭವಗಳು ೩೧
೬. ಭಾರತೀಯರ ಸ್ಥಿತಿಗತಿಗಳು ೩೨
೭. ಧಾರ್ಮಿಕ ಚಿಂತನೆ ೩೬
೮. ಮನುಜನಾಟ ದೇವಮಾಟ ೩೮
೯. ವರ್ಣ ದ್ವೇಷ ೪೦
೧೦. ಮೂರು ಪೌಂಡು ತೆರಿಗೆ ೪೨
೧೧. ಧರ್ಮಜಿಜ್ಞಾಸೆ ೪೪
೧೨. ಮರಳಿ ಮಾತೃ ಭೂಮಿಗೆ ೪೫

ಅಧ್ಯಾಯ ೩

೧. ಬೀಸಿದ ಬಿರುಗಾಳಿ ೪೮
೨. ಸತ್ವ ಪರೀಕ್ಷೆ ೪೯
೩. ಮಕ್ಕಳ ವಿದ್ಯಾಭ್ಯಾಸ - ಸೇವಾ ಧರ್ಮ ೫೧
೪. ಸರಳ ಜೀವನ ಉಚ್ಚಭಾವನ ೫೪
೫. ಮರಳಿ ಮಾತೃ ಭೂಮಿಗೆ ೫೬
೬. ಕಲ್ಕತ್ತದಲ್ಲಿ ಒಂದು ತಿಂಗಳು ೫೮
೭. ಕಾಶಿಯಲ್ಲಿ ೬೦
೮. ಮರಳಿ ಮುಂಬಯಿಗೆ ೬೧
೯. ಮತ್ತೆ ದಕ್ಷಿಣ ಆಫ್ರಿಕಾ ೬೨
೧೦. ನೆಲ ಜಲ ಚಿಕಿತ್ಸೆ ಪ್ರಯೋಗ ೬೪
೧೧. ಪಶ್ಚಾತ್ತಾಪ ೬೬
೧೨. ಇಂಡಿಯನ್ ಒಪೀನಿಯನ್ ೬೮
೧೩. ಫೀನಿಕ್ಸ್ ಆಶ್ರಮ ೭೦
೧೪. ಝೂಲೂದಂಗೆ (Zulu Rebellion) ೭೨
೧೫. ಗೃಹ ಸತ್ಯಾಗ್ರಹ ೭೪

೧೬. ಮೂಲ ಶಿಕ್ಷಣದ ನಾಂದಿ ೭೫
೧೭. ಜಾಗತಿಕ ಯುದ್ದ ಘೋಷ ೭೭

ಅಧ್ಯಾಯ ೪

೧. ಭಾರತದಲ್ಲಿ ೮೧
೨. ಕುಂಭಮೇಳ ೮೨
೩. ಸತ್ಯಾಗ್ರಹ ಆಶ್ರಮ ಸ್ಥಾಪನೆ ೮೪
೪. ಚಂಪಾರಣ್ಯ ಸತ್ಯಾಗ್ರಹ ೮೫
೫. ಸಬರ್ಮತಿ ಆಶ್ರಮ ೮೮
೬. ಖೇಡ ಸತ್ಯಾಗ್ರಹ ೯೦
೭. ಯುದ್ಧದಲ್ಲಿ ನೆರವು ೯೧
೮. ರೌಲತ್ ಏಕ್ಟ್ ೯೩
೯. ಯಂಗ್ ಇಂಡಿಯ- ನವ ಜೀವನ ೯೫
೧೦. ಖಾದಿ ಜನನ ೯೭

ಉತ್ತರ ಕಾಂಡ

೧. ಗಾಂಧೀ -ನೆಹರು ಯುಗ ೧೦೦
೨. ದ್ವಿತೀಯ ಜಾಗತಿಕ ಯುದ್ಧ ಮತ್ತು ವ್ಯಕ್ತಿಗತ ಸತ್ಯಾಗ್ರಹ ೧೦೪
೩. ಕ್ವಿಟ್ ಇಂಡಿಯ ಚಳುವಳಿ ೧೦೫
೪. ಸೇವಾ ಗ್ರಾಮ ೧೦೭
೫. ಭಾರತ ಸ್ವಾತಂತ್ರ್ಯ ೧೦೯
೬. ಯುಗ ಪ್ರಳಯ ೧೧೨
೭. ರಾಜಘಾಟ್ ೧೧೪

ಜೈಹಿಂದ್

ಸ್ವತಂತ್ರ ಭಾನು

(ಮಹಾತ್ಮ ಗಾಂಧಿ ಜೀವನ ದರ್ಶನ)

ಭೋಗಷಟ್ಪದಿ ಕಾವ್ಯ

ಅಧ್ಯಾಯ ೧

೧. ಜನನ ಮಾತಾಪಿತರು

ಬನಿಯ ವಂಶ ವನಧಿ ಪುತ್ರ
ವಿನುತ ಗಾಂಧಿ ವಂಶದೀಪ
ನಿನಿತರೊಳಗೆ ಉತ್ತಮಾಂಕ ವಿನಯ ಶೀಲನು||
ಘನ ದಿವಾನನವನು ರಾಜ್ಯ
ತನದಪೋರ ಬಂದರಿಂಗೆ
ಮನದ ಶಾಂತಿ ಸಿಗದೆ ತೊರೆದು ಬಂದ ಜನಘಡ ||೧||

ಓಟ ಗಾಂಧಿಯೆಡದೆ ಕೈಲಿ
ನೀಟ ಸಲಮು ಮಾಡೆ ನವಬ
ದಾಟಿಯಿಂದ ಕೇಳ್ದನದರ ಕಾರಣವನು||
ಭಾಟಿಯಾಯ್ತು ಬಲದ ಕೈಯು
ಮಾಟವಾದ ಪೋರಪುರಕೆ
ಸಾಟಿಯಾಯ್ತು ಯೆಡಥ ಕೈಯು ನಿನ್ನ ರಾಜ್ಯಕೆ ||೨||

ಓಟ ಗಾಂಧಿ ಸುತನು ಕರಮ
ಭೇಟನವನ ಪತ್ನಿ ಪುಥಳಿ
ಕೂಟದಿಂದ ಕೊನೆಯ ಪುತ್ರನವರ ಉದರಿದಿ||
ಸಾಟಿಯಿಲ್ಲದಿರುವ ಕುವರ
ಕೋಟಿ ಜನರ ಹೃದಯ ಮಧ್ಯೆ
ನಾಟಿ ಕೊಳುವ ದೇವತನಯ ಗಾಂಧಿ ನಾಮದಿ ||೩||

ಕರಮ ಚಂದ ಧರ್ಮನಿರತ
ಪರಮ ಗೀತೆಯೋದುತಿದ್ದ
ಭರಿತ ಭಕ್ತಿಭಾವದಿಂದ ಮಣಿವ ದೇವಗೆ||
ಪರಮ ಪಾತಿವ್ರತ್ಯ ವ್ರತವು
ನಿರುತ ಪೃಥಳಿ ಬಾಯಿಗಿರಲು
ಭರಿತ ಧರ್ಮಜೀವಿಯಾಗಿ ಬೆಳೆದ ಮೋಹನ ||೪||

ಗಾಂಧಿ ಜನನವೆರಡು ತೇದಿ
ಸಂದ ಮಾಸ ಅಕ್ಟೋಬಾರ
ಛಂದದಿಂದ ಹತ್ತು ಒಂಭತ್ತನೆಯ ಶತಕದಿ||
ಚಂದಬಾಲ ಬೆಳೆಯ ಶಾಲೆ
ಯಂದು ಸೇರಿ ಪ್ರಥಮ ಹಂತ
ದಿಂದ ವಿದ್ಯೆ ಪಡೆದು ಶೋಭೆಗೊಂಡನೆಂತೆನೆ ||೫||

೨. ಬಾಲ್ಯ

ರಾಜಕೋಟೆಗಂದು ತೆರಳಿ
ಸಾಜದಿಂದ ವಿದ್ಯೆ ಪಡೆದು
ಭೋಜಸುಪರನಾಗಿ ಬೆಳೆದ ಸತ್ಯಸಂಧನು ||
ತಾಜಿತನವ ದೇಕ ಮನಸು
ವ್ಯಾಜವಿಲ್ಲರನ್ಯರೊಡನೆ
ತೇಜದಿಂದ ಪಠ್ಯ ವಿಷಯದಲ್ಲೆ ಗಮನವು ||೬||

ಶಾಲೆಯಲ್ಲಿ ಕಲಿಯುತಿರಲು
ಬಾಲನಾಗ ಬರೆದ ಶಬ್ದ
ಕೇಳಿ 'ಕೆಟಲ್' ತಪ್ಪು ಬರೆಯ ನೋಡಿ ಬರೆಯಲು||
ಪೇಳೆ ಸನ್ನೆಯಿಂದ ಗುರುವು
ಕೀಳು 'ಕಾಪಿ' ಮಾಡೆನೆನುತ
ಬಾಲ ಧೈರ್ಯದಿಂದ ಹೇಳೆ ಗುರುವು ನೊಂದನು ||೭||

ಶ್ರವಣನೆಂಬ ಬಾಲ ಕಥೆಯ
ಶ್ರವಣೆ ಸಲ್ಕೆ ಗಾಂಧಿಗಾಯ್ತು
ಶ್ರವಣ ಪಿತೃ ಮಾತೃ ಭಕ್ತಿ ನಾಟ ಮನದೊಳು||
ಕವನ ಕವಿತ ನಾಟಕವನು
ಸವಿಯೆ ಪರಮ ಶ್ರವಣ ಕಥೆಯ
ಭುವಿಯಲೊಂದು ತತ್ವ ಕಲಿತ ತರಳ ಮೋಹನ ||೮||

ಸತ್ಯ ಸಂಧನಾಗಿ ಬೆಳೆದ
ಸತ್ಯ ಹರಿಶ್ ಚಂದ್ರ ಕಥೆಯ
ನುತ್ತಮಿಕೆಯ ನರಿತ ನಟಿಪ ನಾಟಕಾದಲಿ||
ಉತ್ತಮೋತ್ತವಾದ ಮೌಲ್ಯ
ಸತ್ವಗಳನು ಪಡೆದು ಬೆಳೆದ
ಸತ್ವಶಾಲಿ ಪ್ರೌಢ ವಿದ್ಯೆ ಪಡೆವ ಸಮಯದೆ ||೯||

೩. ಬಾಲ್ಯ ವಿವಾಹ

ಗಾಂಧಿದಾಯ್ತು ಬಾಲ್ಯದಲ್ಲೆ
ಬಂಧದೊಳಗೆ ಮದುವೆಗಂಟು
ಸಂದುದಿಲ್ಲ ಹತ್ತು ಮೂರು ಹದಿಯಹರೆಯವು||
ಬಂದು ಕೂಡಲಾಗ ಮದುವೆ
ಬಂಧನದೊಳು ಸತಿಯು ಪತಿಯು
ಹಿಂದು ಮುಂದು ನೋಡದಿರುವ ಬಾಲ್ಯ ಬಂಧದೆ ||೧೦||

ಪುಸ್ತಕಗಳನೋದಿ ಗಾಂಧಿ
ಶಿಸ್ತಿನಿಂದ ತಿಳಿದನಂದು
ವಸ್ತುವಲ್ಲ ಸತಿಯು ಜೀವ ನಿಜದ ಗೆಳತಿಯು|
ಸ್ವಸ್ತದಿಂದ ತಾನು ಸತಿಗೆ
ಅಸ್ತುವೆನುತ ನಲ್ಮೆ ತೋರೆ
ಉಸ್ತುವಾರಿ ನನ್ನದಿಹುದು ಸತಿಯ ಮೇಲೆಯೆ ||೧೧||

ಕ್ರಿ.ಶ. 1869ನೇ ಅಕ್ಟೋಬರ್ 2 ರಂದು ಪೋರ್‌ಬಂದರ್ (ಸುಧಾಮ ಪುರಿ) ನಲ್ಲಿ ಗಾಂಧೀಜಿಯವರ ಜನನ. 13ನೇ ವಯಸ್ಸಿನಲ್ಲಿ ಕಸ್ತೂರಿ ಬಾಯಿ ಗಾಂಧಿಯವರೊಡನೆ ವಿವಾಹ (ಕಸ್ತೂರ್ಬಾ)

ಕೇಳ ಬೇಕು ತನ್ನ ಮಾತು
ಹೇಳ ಬಾರದಾಕೆ ಪ್ರತಿಯ
ಪಾಲಿಸುತ್ತ ಪತಿಯದಾಜ್ಞೆ ಮೀರದಂದರಿ||
ಒಲ್ಲೆಸುತಲಿ ತನ್ನ ಮಾತ
ಪಾಲಿಸುತ್ತ ನಡೆಯಬೇಕು
ಪಾಲುಗಾರ್ತಿ ಹೋಗಬಾರದನ್ಯ ಜಾಗಕೆ ||೧೩||

ಓದಬಾರದಿರುವ ಪತ್ನಿ
ಯೋದಿ ಬರೆಯ ಬೇಕೆನುತ್ತ
ಬೋಧಿಸುವನು ಗಾಂಧಿಯಾಗಲೋದು ಬರೆಹವ ||
ಸಾಧನೇಯ ಫಲದೆ ಪತ್ನಿ
ಯೋದು ಬರೆಹ ಕಲಿಯುವಾಗ
ಮೋದಿಸಿದನು ಗಾಂಧಿ ತನ್ನ ಸಫಲ ಯತ್ನಕೆ ||೧೪||

ಮಕ್ಕಳಾಟ ಬಾಲ್ಯ ಮದುವೆ
ಚಿಕ್ಕತರಳ ಗಾಂಧಿ ಸತಿಯ
ಪಕ್ಕದಲ್ಲೆಯಿರಲು ಬಯಸಿ ವಿಫಲನಾದನು||
ಕಕ್ಕುಲಿತೆಯು ಚಿಕ್ಕವರಿಗೆ
ತಕ್ಕುದಲ್ಲ ವೆನುತ ಹಿರಿಯ
ಹಕ್ಕುದಾರ ರವಳ ಕರೆದು ಬೇರೆಗೊಳಿಪರು ||೧೫||

ಎಳೆಯ ಪತಿಯು ಸತಿಯು ಕೂಡಿ
ಕಳೆಯದವರು ದೀರ್ಘಕಾಲ
ಉಳಿದರವರು ದೂರದಲ್ಲಿ ಬಹಳ ದಿನದಲಿ||
ನಿಲಯ ಬಿಟ್ಟು ಗಾಂಧಿಯಾಂಗ್ಲ
ಕಳೆಯ ದೇಶಕಂದು ಗಮಿಸೆ
ತಿಳಿಯದವರ ಕೂಟ ಮರಳು ತೊಂಟಿಯಾದುದು ||೧೬||

೪. ಪ್ರೌಢ ಶಿಕ್ಷಣ

ಪ್ರೌಢ ಶಾಲೆ ಶಿಕ್ಷೆ ಕಾಲ
ವಡಗಿರೆಲ್ಕೆ ಗಾಂಧಿ ಮದುವೆ
ಬಿಡದೆ ಶಾಲೆ ಮುಂದುವರಿಸಿ ಪ್ರೌಢನಾದನು||
ಬಿಡದೆ ಬಂದ ಶಕ್ತಿ ಬಲವ
ಕಡೆಗು ಹೊತ್ತು ದೇಹ ದಾರ್ಢ್ಯ
ಪಡೆದು ಕೊಂಡ ಚೆಂಡಿನಾಟ ದೇಹ ಶಿಕ್ಷಣ ||೧೭||

ಸ್ನಾಯು ಬಲಿಕೆಯಲ್ಲಿ ವಿದ್ಯೆ
ಯಾಯದಲ್ಲಿ ಕಲಿತು ಗಾಂಧಿ
ಬಾಯಿಯಿಂದ ಸುಳ್ಳು ನುಡಿಯ ಹೇಸುತ್ತಿದ್ದನು॥
ಕೈಯ ಬರೆಹ ಚೊಕ್ಕವಾಗೆ
ಕಾಯ ಕರ್ಮ ಸೊಗಡು ಪಡೆದು
ನ್ಯಾಯ ವಿದ್ಯೆ ದೊರೆವುದೆನುತ ಲರಿತ ಗಾಂಧಿಯು ॥೧೮॥

ಆಂಗ್ಲ ಭಾಷೆ ಮಾಧ್ಯಮದಲಿ
ದಂಗು ಬಡಿದ ಭೂಮಿತಿಗಳ
ತುಂಗಗಣಿತವರಿಯೆ ಗಾಂಧಿ ಮೊದಲ ದಿನದಲಿ॥
ಭೃಂಗ ಮಧುವ ಹೀರುವಂತೆ
ವ್ಯಂಗ್ಯ ಬಿಟ್ಟು ಮುಂದೆಸಾಗೆ
ಹಂಗು ತೊರೆಯ ಲರಿತ ರೇಖ ಶಾಸ್ತ್ರಗಹನವ ॥೧೯॥

ಸಂಸ್ಕೃತದಲಿ ವಾಕ್ಯ ಕಲಿಯೆ
ಸಂಶ್ರಮದಲಿ ತೊಡಗಿ ಗಾಂಧಿ
ಸಂಶಯಗಳ ತಳೆದು ಪಾರ್ಸಿ ಪಾಠ ಕೊಲಿಯಲು॥
ವಂಶವೃಕ್ಷವರಿತ ಗುರುವು
ಸಂಸ್ಕೃತವನ್ನರಿವ ಮಹತ
ದಂಶವನ್ನು ತಿಳಿಸೆ ಗಾಂಧಿ ಮೋದಗೊಂಡನು ॥೨೦॥

ಹಿಂದು ಜನಕೆ ದೇವ ಭಾಷೆ
ಬಂದು ಕೂಡೆ ವಿದ್ಯ ಬಲದೆ
ಬಂಧು ರದಲಿ ಬೆಳೆವರೆಲ್ಲ ಬಾಲರೆನುತಲಿ॥
ಅಂದು ಗಾಂಧಿ ತಿಳಿದ ಮಹತು
ಸುಂದರವಹ ಮಾತೃಭಾಷೆ
ಯೊಂದು ಸೇರಲಾಂಗ್ಲ ದೇವ ಹಿಂದಿ ಭಾಷೆಯು ॥೨೧॥

ಎಲ್ಲ ಕಲಿತ ಬಾಲರೆಲ್ಲ
ಮಲ್ಲರಾಗಿ ಬೆಳೆವರೆನುತ
ಬಲ್ಲ ಗಾಂಧಿಯರಿತ ನೆಲ್ಲ ಭಾಷೆ ಮಹತುವ॥
ಸೊಲ್ಲಿಸುತ್ತ ಶಿಕ್ಷಣದಲಿ
ನಲ್ಲ ಭಾಷೆಯೆಲ ಕಲಿಸೆ
ಒಳ್ಳೆದಾಗುದವರ ಬಾಳು ಯೆನುತ ತಿಳಿದನು ॥೨೨॥

೫. ದುರಂತ-ಪಿತನ ಮರಣ

ಮಿತ್ರನೊಬ್ಬ, ಹೀನತನದೆ
ಸತ್ವ ಪಡೆಯಲಾಂಗ್ಲರಂತೆ
ತುತ್ತು ಮಾಂಸ ಮದ್ಯ ತಿನ್ನಬೇಕು ಯೆನುತಲಿ||
ಒತ್ತುವಾಸೆ ಮಾಡೆ ಗಾಂಧಿ
ಒತ್ತಿಬರುವ ಸತ್ವ ಬಲವ
ಒತ್ತೆಯಿಟ್ಟು, ಬದಿಗೆ ಕಲಿತ ಹೀನತನಗಳ ||೧೩||

ನದಿಯ ತೀರ ಜನತೆಯಿಂದ
ಬದಿಯ ನರಸಿ ಮಿತ್ರತಂದ
ಮದಿರೆ ಮಾಂಸ ತಿಂದ ಗಾಂಧಿಯಾತ್ಮ ಘಾತದೆ||
ಒದಗಿ ತವಗೆ ಹೀನ ತನವು
ಹುದುಗಿ ಸಿಟ್ಟು ಮಾತ ಪಿತರು
ಇದನು ತಿಳಿಯದಂತೆ ಗಾಂಧಿ ಹುಡುಗ ತನದಲಿ ||೧೪||

ಬಹಳ ದಿನಗಳಿಂತು ಕಳೆಯೆ
ಕಹಿಯ ವೂಟ ವುಂಡ ಗಾಂಧಿ
ಸಿಹಿಯ ಸವಿಯದಿರಲು ಮಾತೆ ಚಿಂತೆ ಗೊಂಡಳು||
ಬಹಳ ಕೆಡುಕ ಮಿತ್ರನಾಗೆ
ಸಹಿಸದಾಗಪಿರಸ ತಂದ
ಪಿಹಿತದಿಂದ ಬಾಳ್ವ ಗಾಂಧಿ ಮಡದಿ ಮಧ್ಯದಿ ||೧೫||

ಧೂಮಪಾನಕಾಶೆ ಪಡುತ
ಕಾಮಿಸುತ್ತ ಹೊಗೆಯ ಬತ್ತಿ
ನೇಮ ತೊರೆದು ಸೇದು ತಿದ್ದ ಬಿದ್ದ ಚೂರನು||
ಪ್ರೇಮಿಸಿರುವ ವಸ್ತು ದೊರೆಯೆ
ಹೇಮ ಚೂರ್ಣ ಬೇಕು ಯೆನುತ
ಹೋಮಗೈದು ನೀತಿ ನಡತೆ ಕದ್ದ ಹಣವನು ||೧೬||

ಎಲ್ಲ ಪಾಪ ಮೋಸವೆನುತ
ಮಲ್ಲಮನದೆ ತಿಳಿದು ಗಾಂಧಿ
ಸೊಲ್ಲಿಸಿದನು ಪಾಪಕೃತ್ಯ ಪಿತನೆ ಶೋಕದಿ ||
ಎಲ್ಲ ತಿಳಿದು ಕರಮುಚಂದ
ಕ್ಷುಲ್ಲ ತನವ ಕ್ಷಮಿಸಿ ಸುತಗೆ
ಒಳ್ಳೆತನವ ತಿಳಿಸೆ ಗಾಂಧಿ ಹರ್ಷವಾಂತನು ||೧೭||

ಶ್ರವಣನಂತೆ ಗಾಂಧಿನಿರುತ
ಬವಣೆ ಪಡುವ ಪಿತನ ಸೇವೆ
ದಿವಸರಾತ್ರಿ ಮಾಡುತ್ತಿದ್ದ ಕುಪಿತನಾಗದೆ ||
ಸವೆಯ ಕಾಲ ಸತಿಯ ಸನಿಹ
ಪವನ ನಂತೆ ದಾವಿಸುತ್ತ
ಸವಿಯುತಿದ್ದ ಸಂಗ ಸುಖವ ನಮಿತ ಮೋದದೆ ||೨೮||

ಗಾಂಧಿಗಾಯ್ತು ಶೋಕ ತಾಪ
ವಂದು ಪತ್ನಿ ಪಡೆದ ಶಿಶುವು
ಸಂದಿರಲ್ಕೆ ದೈವವಶಕೆ ನೊಂದ ಗಾಂಧಿಯು||
ಹಿಂದು ಮುಂದು ಯೋಚಿಸದಿಹ
ಹಿಂದು ಬಾಲ್ಯ ವಿವಹಕಂದು
ಗಾಂಧಿ ಜರೆದ ಹೀನ ಪರಿಯ ಜನ ಸಮಾಜದ ||೨೯||

೬. ಧರ್ಮ ಪರಿಚಯ

ವೈಷ್ಣವಾಂಶ ಗಾಂಧಿಮನೆಯು
ವಿಷ್ಣು ಪೂಜೆ ಹಬ್ಬದಿನವು
ನಿಷ್ಠೆಯಿಂದ ಗಾಂಧಿ ತಿಳಿದ ಧರ್ಮಮೂಲವ||
ಕಷ್ಟಪಟ್ಟು ಜಾತ್ರೆಗೆಂದು
ಜ್ಯೇಷ್ಠರೊಡನೆ ಹೋಗುತಿದ್ದ
ಅಷ್ಟು ಜನರ ಒಳಿತ ಹಳಿತ ನೋಡಿ ಜಾತ್ರೆಯ ||೩೦||

ಮೆಚ್ಚದಿದ್ದ ಗಾಂಧಿ ತರಳ
ಅಚ್ಚು ಮೆಚ್ಚು ರಂಭದಾದಿ
ಮೆಚ್ಚಿ ಗಾಂಧಿ ಗೊರೆದಳಾಗ ರಾಮನಾಮದ||
ಹೆಚ್ಚು ಮಹಿಮೆ ಯರಿತ ಗಾಂಧಿ
ಬೆಚ್ಚುತಿದ್ದ ದೆವ್ವ ಭೂತ
ಸಚ್ಚರಿತ್ರ ರಾಮ ನಾಮ ಮಹಿಮೆಯಿಂದಲಿ ||೩೧||

ಭೀತಿ ತೊರೆದು ಸುಖಿಸುತ್ತಿದ್ದ
ಖ್ಯಾತ ನಾಗ ರಾಮ ರಕ್ಷೆ
ನೀತಿ ಮಂತ್ರ ಕಲಿತು ನಿತ್ಯ ಪಠಿಸುತ್ತಿದ್ದನು||
ಸಾತಿಶಯದ ರಾಮ ಕಥನ
ನೀತಿಸಾರವೋದ ಕೇಳಿ
ನೀತಿವಂತ ನರಿತ ತುಳಸಿರಾಮ ಕಾವ್ಯವ ||೩೨||

ಭಕ್ತಿ ಶರಧಿಯಲ್ಲಿ ಮಿಂದು
ಉಕ್ತಿಯಿಂದ ರಾಮಚರಿತ
ಸೂಕ್ತಿಯನ್ನು ಕೇಳಿ ಭಾಗವತದ ಮಹಿಮೆಯ||
ಭಕ್ತ ಗಾಂಧಿ ಹಿಂದು ಧರ್ಮ
ಯುಕ್ತ ಪಂಥ ಮರ್ಮತಿಳಿದು
ಶಕ್ತಿಯಿಂದ ನರಿತ ನನ್ಯ ಧರ್ಮ ಸಮತೆಯ ||೧೩||

ಜೈನ ಧರ್ಮ ಸಾರತಿಳಿದ
ನನ್ಯ ಧರ್ಮ ಕ್ರಿಸ್ತ ಧರ್ಮ
ವನ್ನು ಸಹಿಸದಾದ ರೀತಿ ನೀತಿ ದೇಷಕೆ||
ಇನ್ನು ಶಾಲೆ ಸನಿಹದಲ್ಲಿ
ದಿನ್ನೆ ಮೇಲೆ ನಿಂತು ಪಾದ್ರಿ
ತನ್ನ ಧರ್ಮ ಮೇಲ್ಮೆ ಮೆರೆದು ಹಳಿವನನ್ಯರ ||೧೪||

ಕೇಳುತವನು ಸಹಿಸದಾದೆ
ತಾಳವಾಗಲೋರ್ವ ಹಿಂದು
ಪೇಳಿದಂತೆ ಕ್ರ್ಯಸ್ತ ಧರ್ಮ ಕಾದಬಲಿ ಪಶು||
ತಾಳಿ ಗೋವು ಮಾಂಸ ತಿಂದ
ಮೇಳವಿಸಿತು ಮದ್ಯ ಪಾನ
ಕಾಳು ಮಾಡುತವನ ಹೇಟು ಬೂಟು ಟೈಗಳು ||೧೫||

ಇದನು ನೋಡಿ ಗಾಂಧಿ ಹೇಸಿ
ವದನ ಕಿರಿದು ಮಾಡಿಕೊಂಡು
ಸದಯ ಕಲಿತ ಸಹನೆ ಹಲವು ಶಾಸ್ತ್ರವೋದುತ ||
ಮೃದುತನದಲಿ ಮನುಃ ಸ್ಮೃತಿಯ
ಉದಿತ ಮನದಿಯೋದಿ ಸತ್ಯ
ಸದಮಳಾಂತ ನೀತಿ ಮಹಿಮೆ ಯರಿತು ಕೊಂಡನು ||೧೬||

೭. ಇಂಗ್ಲೆಂಡಿಗೆ ಪಯಣ ಸಿದ್ಧತೆ

ಪ್ರೌಢಶಾಲೆ ವಿದ್ಯೆ ಮುಗಿಸಿ
ಮಾಡಿಮನವ ನುಚ್ಚ ಪದಕೆ
ನೋಡಿ ಭಾವನಗರ ಕಾಲೇಜ್ ಸೇರ್ದ ಗಾಂಧಿಯು||
ಆಡಿನೋಡಲಲ್ಲಿ ಕಲಿಯೆ
ಕಾಡು ತಿರಲು ಕಠಿಣ ಶಿಸ್ತು
ಪ್ರೌಢ ಗಾಂಧಿ ತೊರೆದು ಬಂದನಲ್ಲಿ ಕಲಿಕೆಯ ||೧೭||

ದಾವೆಯೆಂಬ ಹಿರಿಯನಾಗ
ಭಾವದಿಂದ ನುಡಿದರಾಜ
ಠೀವಿ ಪದವೆ ದಿವನ ಗಿರಿಯ ಗಳಿಸಿಕೊಳ್ಳಲು||
ಧಾವಿಸುತ್ತ ಲಾಂಗ್ಲದೇಶ
ದೂರ್ವಿಯಲ್ಲಿ ನೀತಿ ಶಾಸ್ತ್ರ
ಸಾರ್ವ ಪದವಿ ಪಡೆಯೆ ಮುಂದೆ ಭಾಗ್ಯವಪ್ಪುದು ||೩೮||

ಮಾತೆ ಯೊಪ್ಪದಿರಲಿ ಕಾಗ
ಕಾತರತೆಯ ನೋಡು ತವಳ
ಮಾತಿನಿಂದ ತೃಪ್ತಿಗೊಳಿಸಿ ದೃಢದನಿರ್ಣಯ ||
ಮಾತೆಗೆಂದ ರನ್ಯರಂತೆ
ಸೋತು ಮದ್ಯ ಮಾಂಸ ತೊಡೆನು
ಕಾತರತೆಯ ತೋರಲಾರೆ ನನ್ನ ನಾರಿಗೆ ||೪೦||

ಎಂದ ಮಾತಿಗೊಪ್ಪಿ ಮಾತೆ
ಕಂದನನ್ನು ಹರಸಿ ಕಳಿಸೆ
ಹಿಂದು ಮುಂದು ನೋಡಿ ಹೊರಟ ಗಾಂಧಿ ಮುಂಬಯಿ||
ಅಂದು ಮಡದಿ ಮತ್ತೆ ಶಿಶುವ
ಹಿಂದೆ ಬಿಟ್ಟು ಮುಂದೆ ನಡೆದ
ಬಂದು ಮುಂಬ ದೇವಿ ನಗರದಲ್ಲಿ ಚಿಂತಿಸೆ ||೪೧||

ತಿಳಿದ ಗಾಂಧಿ ಮಳೆಯ ಕಾಲ
ಸುಳಿಯುತಿಹುದು ಶರಧಿ ಮೇಲೆ
ಬಲದ ಗಾಳಿ ಪಯಣ ಕಠಿಣವೆಂಬುದರಿಯುತ||
ಕಲಕು ಮನದೆ ತಲ್ಲಣಿಸಲು
ಕುಲದ ಜನರು ವೊಡ್ಡೆಯಡ್ಡಿ
ಜಲದ ಮೇಲೆ ಯಾಂಗ್ಲದೇಶ ಪಯಣ ಮಾಡಲು ||೪೨||

ಜಾತಿ ಧರ್ಮ ನೀತಿ ಪೋಗಿ
ಭೀತಿ ಬಹುದು ದುರ್ವ್ಯಸನದಿ
ನೀತಿವಂತನಾಗಿ ಬಾಳೆ ತೊಡಕ ದಪ್ಪುದು ||
ನೀತ ನೀನು ಹೋಗ ದಿರೆನೆ
ಖ್ಯಾತ ನವರ ಮಾತ ಕೇಳ
ದಾತನಾಗಿ ಛಲವಹಿಡದೆ ಮುಂದೆನುಗ್ಗಲು ||೪೩||

ಕುಲದ ಜನರು ಮುಳಿದ ರಾಗ
ಛಲವ ಬಿಡನು ಗಾಂಧಿ ತರುಣ
ಹೊಲಿದು ಸಕಲ ವೃತುಪಸಹಿತ ಸಿದ್ಧನಾಗಲು ||
ಒಲಿದು ಹಿರಿಯ ಮಿತ್ರನೊಬ್ಬ
ಸುಲಭವಲ್ಲಿ ಸಿಕ್ಕನಾಗ
ಫಲವು ತರವೆ ಸಜ್ಜುಗೊಂಡ ಹಡಗು ಪಯಣಕೆ ||೪೪||

೬. ಲಂಡನ್ ನಗರ ಗಮನ

ಹಡಗಿನಲ್ಲಿ ಗಾಂಧಿ ಪಯಣ
ಕಡೆಗು ಬಂತು ಮುದದಿ ಬಂತು
ಸುಮಧುರಾರ ನಾಂಗ್ಲ ಭಾಷೆ ಸರಸದಿಂದಲಿ||
ಕೂಡುತಾಡು ತೆಲ್ಲರೊಡನೆ
ನೀಡಿ ಮೈತ್ರಿ ಕಲೆತು ನಲಿದು
ನೋಡು ನೀನು ನಾಚಿಕೊಳ್ಳೆ, ಫಲವದೇನಿದೆ? ||೪೫||

ಎಂದು ಗಾಂಧಿ ಗೊರೆದ ಮಿತ್ರ
ಮುಂದೆ ಗಾಂಧಿ ಕಲೆಯು ತುಣದೆ
ತಿಂದ ವಸ್ತು ಮಾಂಸ ಭರಿತವೆನುವ ಶಂಕೆಯು||
ಹೊಂದು ತೊಂಟಿಯಾಗಿ ಕುಳಿತು
ಒಂದೆ ಮನ ದಲ್ಲುಣ್ಣುತಿದ್ದ
ಅರಿದು ಮಾತೆ ಗೊರೆದ ಭಾಷೆ ಸಿದ್ಧವೆನುತಲಿ ||೪೬||

ಪಯಣ ಮೇಲೆ ಪಯಣ ಬೆಳೆಸಿ
ನಯದ ತರುಣ ಸೌತ್ ಹೇಂಪ್ಟನ್*
ನಿಯತಿಯಿಂದ ತಲಪುತಲ್ಲಿ ಬೀಡ ಬಿಟ್ಟನು||
ಪಯಣ ಕಾಲದಲ್ಲಿ ಕಪ್ಪು
ನಯದಲುಡುಪ ಧರಿಸಿಬಂದ
ಪಯಣದಲ್ಲಿ ಮತ್ತೆ ಬಿಳಿಯ ವಸನಧರಿಸಿದ ||೪೭||

---

*ಮಿತ್ರನ ಹೆಸರು ಜುನಾಘಡದ ವಕೀಲ ತ್ರಿಯಂಬಕ ರಾಯ್ ಗಾಂಧೀಜೀ ಹಡಗು ಪ್ರಯಾಣದ ದಿವಸ 4ನೇ ಸೆಪ್ಟಂಬರ್ 1887

* South Hampton

ಮೆಹತ ನಿಂಗೆ ಕಾರು ಕಳಿಸೆ
ಸಹನೆಯಿಂದ ಬರಲು ಗಾಂಧಿ
ವಿಹಿತದಿಂದ ಮಾತು ಮುಗಿಸಿ ನಗುತಲಿರುತಿರೆ||
ಅಹಿತವೆಂದು ತಿಳಿಯದಾಗ
ಮೆಹತ ಹೇಟ ತೆಗೆದು ಸವರೆ
ಸಹಿತ ತುಪಳ ಕೊಡಕು ಗೊಳ್ಳೆ ಮೆಹತ ಕನಲಿದ ||೪೮||

ಅನ್ಯರೊಡವೆ ತೊಡಲು ಬೇಡ
ಶೂನ್ಯ ಪ್ರಶ್ನೆ ಕೇಳ ಬೇಡ
ಭಿನ್ನದನಿಯ ಮಾತು ಬೇಡ 'ಸಾರ್' ಬೇಡವೊ||
ಖಿನ್ನತೆಯದು 'ಸಾರ್' ಯೆನಲು
ಮಾನ್ಯರನ್ನು ಸೇವಿಸುತಿಹ
ನಿಮ್ಮ ಜನರು ಕರೆವ ಮಾತು 'ಸಾರ್'ಯೆಂಬುದು ||೪೯||

ಸಿಂಧಿ ಮಿತ್ರ ದೊರೆಯಲಾಗ
ಸಂದರವರು ವಸತಿಗೃಹಕೆ
ಹೊಂದ ದವಗೆ ಯಡಿಗೆ ಯೂಟ ಕಷ್ಟದಿಂದಲಿ||
ತಿಂದು ಸಸ್ಯ ಜನ್ಯ ತಿನಸು
ಅಂದು ಆಂಗ್ಲ ಜನರ ಕೂಡೆ
ಹಿಂದುವೊಬ್ಬ ಬೆರೆಯೆ ಕಷ್ಟಪಡು ತಲಿದ್ದನು ||೫೦||

೯. ಸಸ್ಯಾಹಾರಕ್ಕೆ ಒಲವು

ವಸತಿಗೃಹದ ಕಷ್ಟ ತಿಳಿದು
ಬಸವಳಿಯುತ ತ್ರಾಸ ಪಡಲು
ಒಸಗೆ ಪೇಳೆ ಮೆಹತನೊಯ್ದು ನಾಂಗ್ಲ ಗೃಹದಲಿ||
ವಸತಿಯನ್ನು ಗೊತ್ತುಪಡಿಸೆ
ಮಸಲೆ ಮಾಂಸ ತಿನ್ನದಾತ
ಕಸಿವಿಸಿಯಲಿ ನೊಂದ ಗಾಂಧಿ ಯಾಂಗ್ಲ ಗೃಹದಲಿ ||೫೧||

ಓಟ್ಸ್ ಗೋಧಿ ಗಂಜಿ ಬೆಳಗೆ
ಸಾಟಿಯಾದ ಭೋಜ್ಯವಸ್ತು
ಊಟಗೋಧಿ ಹಿಟ್ಟು 'ಬ್ರೆಡ್ಡು' 'ಜಾಮಿ'ನೊಂದಿಗೆ ||
ಅಟ್ಟ ಬಸಳೆ ಪಲ್ಯ ರೊಟ್ಟಿ
ಇಷ್ಟ ತಿನಲು ತೃಪ್ತಿ ಸಿಗದೆ
ಕಷ್ಟಪಡುವ ರೀತಿ ನೋಡುತಾಂಗ್ಲಮಿತ್ರರು ||೫೨||

ನೋಡು ಗಾಂಧಿ ಮಾಂಸ ತಿನಲು
ಮಾಡಬಹುದು ರುಚಿಯ ದೂಟ
ನೋಡು ತಾಂಗ್ಲರೆಲ್ಲ ಜೀವಿಸಿರುವ ಪರಿಯನು||
ಆಡಿರುವಿ ಮಾತೆಗಾಣೆ
ಹೇಡಿಯಂತೆ ಗೊಡ್ಡು ಮಾತ
ಮೂಢ ತನದೆ ಪಾಲಿಸುತ್ತ ಕೆಡಲು ಬೇಡವೊ ||೩೩||

ತೊರೆಯಲಾರ ಗಾಂಧಿ ಶಪಥ
ಹಿರಿಯ ಲಂಡನ್ ನಗರದಲ್ಲಿ
ಬಿರುಸಿ ನಿಂದಲರಸಿ ಕಂಡ ಸಸ್ಯ ಜನ್ಯದ ||
ಮೆರೆವ ಭೋಜ್ಯ ಶಾಲೆಯೊಂದ
ಹರುಷದಿಂದ ಲುಂಡು ತಿಂದು
ಇರುತ ಮಾತೆ ಗೊರೆದ ಮಾತಿನಂತೆ ತಪ್ಪದೆ ||೩೪||

ಬರಹಗಾರ 'ಸಾಲ್ಟ್' ಬರೆದ
ಹಿರಿಯ ಗ್ರಂಥ ಸಸ್ಯ ಭೋಜ್ಯ
ವರಿತುಕೊಂಡು ವೋದೆ ಪಡೆದ ನತುಲ ಸಂತಸ||
ನಿರುತಸರಳ ಭೋಜ್ಯ ವಸ್ತು
ದೊರೆತು ಭುಜಿಸುತಿರಲು ಹಲವು
ತರದ ಶಾಸ್ತ್ರ ಗ್ರಂಥದಿಂದ ಖಾದ್ಯ ಶಾಸ್ತ್ರದ ||೩೫||

ತತ್ವ ಜ್ಞಾನಿ ಯೇಸುವಂತೆ
ನಿತ್ಯ ಸಸ್ಯ ಲಬ್ಧವಸ್ತು
ವರ್ತಿಯಿಂದ ಭುಜಿಸಿ ತತ್ವ ಶಾಸ್ತ್ರ ಶರಧಿಯ||
ಮತ್ತೆ ಮಥಿಸಿ ಮನುಜ ಗಣಕೆ
ಉತ್ತಮದಲಿ ಧರ್ಮ ಸುಧೆಯ
ನಿತ್ತರೆಂದು ತಿಳಿದ ಗಾಂಧಿ ಹರ್ಷತಾಳಿದ ||೩೬||

ಓದಿ ಹಲವು ಭೋಜ್ಯ ವಸ್ತು
ಖಾದ್ಯ ಗ್ರಂಥಗಳಲಿ ತಿಳಿದು
ಸಾಧಿಸಲ್ಕೆ ಸಬಳ ನುಂಗಬಹುದುಯೆನ್ನುತ||
ಮೋದದಿಂದ ಲರಿತನಾತ
ಸಾಧ್ಯವಹುದು ರೋಗರಹಿತ
ಶುದ್ಧ ಜೀವ ಪೋಷಣಾಂಶ ಸಹಿತ ವಸ್ತುವ ||೩೭||

ಮಿತ್ರನೆಂದ ಸೂಚನೆಗಳ
ಮತ್ತೆ ಮತ್ತೆ ತೊರೆದು ಗಾಂಧಿ
ಸತ್ಯ ಶೋಧದಲ್ಲಿ ಜಯವಗಳಿಸಿ ಶಾಶ್ವತ ||
ಉತ್ತಮ ವಹ ಭೋಜ್ಯ ಭುಜಿಸಿ
ಸತ್ವ ಶಾಲಿಯೆನಿಸಿಕೊಂಡ
ಮತ್ತೆ ತೋರ್ದ ನಾಂಗ್ಲ ರುಡಿಗೆ ತೊಡಿಗೆ ಮೋಹವ ||೫೮||

ಸೂಟು ಬೂಟು ಹೇಟು ತೊಟ್ಟು
ಧಾಟಿನೋಡಿ ದರ್ಪಣದಲಿ
ಮೀಟು ತಿದ್ದ ತಲೆಯ ಕೇಶ ಹೊಂದಿಕೊಳ್ಳಲು||
ಸಾಟಿಯೆನಲಿ ಕಾಂಗ್ಲರಂತೆ
ಮಾಟವಾಗಿ ನೃತ್ಯ ಕಲಿತ
ಮೀಟು ತಿದ್ದ ತಂತಿ ವಾದ್ಯ ರವಕೆ ಹೊಂದಲು ||೫೯||

ಫ್ರೆಂಚ್ ಭಾಷೆ ಕಲಿತ ಗಾಂಧಿ
ಅಂಚಿನಲ್ಲಿ ಫ್ರಾನ್ಸ್ಯಿರಲು
ಮಿಂಚು ತಿರುವ ಆಂಗ್ಲ ದೇಶ ಸಭ್ಯತನದಲಿ||
ಫ್ರೆಂಚ್ ಭಾಷೆ ಕೂಟವಿರಲು
ಹೊಂಚು ಹಾಕು ತಾಂಗ್ಲರಂತೆ
ಮಿಂಚಿ ಮೆರೆಯ ಬಹುದೆನುತ್ತ ಗಾಂಧಿ ತಿಳಿದನು ||೬೦||

ಮಾತುಗಾರಿಕೆಯಲಿ ಕಲೆಯು
ನೂತನದಲಿ 'ಫಿಡ್ಲ್' ಕಲೆಯು
ಗೀತಗಾನದಂತೆ ನಟಿಪ ನೃತ್ಯ ಕಲೆಗಳು||
ಆತುರದಲಿ ಗಾಂಧಿ ಕಲಿತ
ಏತಕೆಲ್ಲ ಕಲೆಯು ತನಗೆ
ಮಾತೃ ದೇಶದಲ್ಲಿ ಎಲ್ಲ ಕಲಿಯ ಬಹುದಿದ ||೬೧||

೧೦. ಆಹಾರ ವಿಚಾರದಲ್ಲಿ ಪ್ರಯೋಗಗಳು

ಹಣದ ವೆಚ್ಚ ಕೆಲ್ಲ ಕಠಿಣ
ಎಣಿಕೆಯಿಟ್ಟು ದುಂದು ವೆಚ್ಚ
ಕೆಣಿಸದಂತೆ ತಡೆಯ ಹಿಡಿದು ನಿಟ್ಟಿನಿಂದಲಿ||
ಅಣಿಯಗೊಳಿಸಿ ಹೊಸನಿವಾಸ
ಉಣಲು ವುಡಲು ಕಡಮೆ ವೆಚ್ಚ
ಪಣವ ತೊಟ್ಟು ಗಾಂಧಿ ಹೊಸತು ಬಾಳ ನಡೆಸಿದ ||೬೨||

ಪದವಿ ಪಡೆಯಲಾರೆ ವಿಫಲ
ವದಕೆ ಲಂಡನ್ ಮೆಟ್ರಿಕ್‌ಪಡೆಯ
ಲೊದಗಿಸುತ್ತ ಸನ್ನಹಗಳ ಮುದದಿನಡೆದನು
ಅದಕೆ ಲಾಟಿನ್ ಫ್ರೆಂಚ್ ಭಾಷೆ
ಮುದಕೆ ರಸಾಯನದ ಶಾಸ್ತ್ರ
ವಿದಿತದಲ್ಲಿ ಶಾಖ ಬೆಳಕು ಭಾಗವಾಯ್ತನು ||೬೩||

ಕಠಿಣ ವೋದು ಮಿತದಬಾಳು
ವಿಠಲ ಭಕುತಿ ಹೃದಯದಲ್ಲಿ
ಶಠನಿ ಶಠತೆ ಸರಳ ಬದುಕು ಹಿರಿಯಯೋಚನೆ||
ಊಟ ಪಾನ ಸರಳ ಗೊಳಿಸಿ
ಕಾಟಕಾರಿ ಕಾಫಿ ಚಹವ
ದೀಟ ತನದಿತೊರೆದು ಕೊಕ್ಕೊ ಕುಡಿಯ ತೊಡಗಿದ ||೬೪||

ಮೊದಲು ಸರಳ ಊಟದೊಡನೆ
ಒದಗ ಲಂಡ ಕುಡಿಯುತ್ತಿದ್ದ
ಅದುವೆ ಶಾಸ್ತ್ರವಚನಕೆಲ್ಲ ಪ್ರತಿ ನಿರೋಧವು||
ಇದನು ತಿಳಿದು ಗಾಂಧಿ ತೊರೆದ
ಹೃದಯ ವಾಣಿಯರಿತು ಮುಂದೆ
ವಿಧದ ಪರಿಯ ಶೋಧನೆಗಳ ನಡಿಸಿ ಭುಜಿಸುವ ||೬೫||

ಮೀನು ಮೊಟ್ಟೆ ತಿಂಬ ಜನರು
ಏನಿದೆಲ್ಲ ಸಹಿತ ಮಾಂಸ
ಸಾನುರಾಗದಿಂದ ತಿಂಬ ಜನರು ಯಿರುವರು ||
ಧ್ಯಾನಿ ಜನರು ಕ್ಷೀರ ಜನ್ಯ
ಪಾನವಸ್ತುಗಳನು ತೊರೆದು
ಊನವಿಲ್ಲದಿರುವ ಸಸ್ಯ ಜನ್ಯ ಭೋಜ್ಯವ ||೬೬||

ಶೋಧ ನಡಸೆ ಖಾದ್ಯ ಶಾಸ್ತ್ರ
ವೋದಿಸುತ್ತ ಸಂಘ ತೆರೆದ
ಆದರದಕೆ ಯೆಡ್ವಿನ್ಆರ್ನಾಲ್ಡ್ ಫೀಲ್ಡ್ ಸದಯರು||
ಆದುದಲ್ಲಿ ಖಾದ್ಯ ಜನ್ಯ
ಭೇದದಲ್ಲಿ ಪ್ರಾಣಿ ಜನ್ಯ
ಶೋಧನೆಗಳು ನಡೆಯುತ್ತಿದ್ದು ಕೆಲವು ದಿವಸಕೆ ||೬೭||

---

* *Pure vegetarians, Lacto Vegetarians Lacto-ovo Vegetarians etc.*
* *Books read by Gandhiji : The Ethics of Diet by Mr. Howard etc.*

ಸಂಘ ಕುಸಿದು ಬಿದ್ದು ಹೋಯ್ತು
ಸಂಘ ಸಭೆಯ ಕೂಟದಲ್ಲಿ
ಸಂಗಡಿಗರ ಮುಂದೆ ಮಾತನಾಡಲಾರದೆ
ಸಂಘ ಕಂಪದಿಂದ ನಲುಗಿ
ವಿಂಗಡಿಸಿದ ಭಾಷಣವನು
ಹಂಗು ತೊರೆದು ಬಿತ್ತರಿಸದೆ ತೊಳಲಿ ಬಳಲಿದ ||೬೮||

ಸಭೆಯ ಮಾತುಗಾರರಿಂಗೆ
ಅಭಯವಿತ್ತು ಗಾಂಧಿ ನುಡಿದ
ವಿಭವ ಮಾತು ಕಲೆಯ ವಶಕೆ ತೆಗೆದು ಕೊಳ್ಳಲು ||
ಶುಭದ ಪೂರ್ವ ಸಿದ್ದಬೇಕು
ಸಭೆಯ ಮಾತು ಉದ್ದವಿರದೆ
ಉಭಯರಿಂಗೆ ಹಿತವಸಾರಿ ಮನವಸೆಳೆಯಲು ||೬೯||

೧೧. ಬ್ರಹ್ಮಚರ್ಯ ಗೃಹಸ್ಥಾಶ್ರಮ

ಬಾಲ್ಯದಲ್ಲಿ ಮದುವೆಯಾದ
ಮೌಲ್ಯವರಿತ ಗಾಂಧಿಯಾಂಗ್ಲ
ಮೌಲ್ಯದಲ್ಲಿ ಸಿಲುಕಿ ನಲುಗಿ ತೊಳಲಿ ಬಳಲಿದ ||
ಅಲ್ಲಿ ತರುಣ ತರುಣಿ ಪ್ರೇಮ
ಸಲ್ಲಪಗಳ ಮಾಡುತಿರಲು
ನಿಲ್ಲದವರು ಪ್ರೇರಿಸಿದರು ತರುಣ ಗಾಂಧಿಯ ||೭೦||

ವಾಸವಿದ್ದ ಗೃಹದಲೊಮ್ಮೆ
ಬೀಸುತ್ತಿದ್ದ ಪ್ರೇಮ ಪಾಶ
ಕಾಸೆಪಡದ ಗಾಂಧಿಗಾಯ್ತು ಬಲೆಯ ಪಾಶವು||
ಆಸೆಯಿಂದ ಕರೆಯಲೋರ್ವ
ಭಾಸುರಾಂಗಿ ಯಾಕೆಯೊಡನೆ
ಮೋಸದಿಂದ ತೆರಳುತಾಗ ಘಾಸಿಗೊಂಡನು

ಉಪಾಹಾರ ಗೃಹದಲೋರ್ವ
ನೈಪುಗಾರ್ತಿ ಮಹಿಳೆಯಾಗ
ವೈಪರೀತ್ಯದಿಂದ ಗಾಂಧಿಯೊಡನೆ ಸಲಿಗೆಯ||
ತೋರ್ಪಡಿಸುತಲೆಂದಳವಗೆ
ಇರ್ಪಳಿಲ್ಲಿ ಬಾಲೆಯವಳ
ನೊಪ್ಪುವಂತೆ ವರಿಸೆ ನಿನಗೆ ಮೋದವಪ್ಪುದು ||೭೨||

ಎಂದಮಾತ ಕೇಳಿಗಾಂಧಿ
ಹಿಂದು ಮುಂದು ನೋಡಿನುಡಿದ
ಹಿಂದೆ ಮಾತೃಭೂಮಿಯಲ್ಲೆ ಮದುವೆಯಾಗಿದೆ ||
ಹಿಂದು ಜನರ ಬಾಲ್ಯಮದುವೆ
ಯಿಂದ ಬಂದಿ ನಾನೆನಲ್ಕೆ
ಅಂದು ಆಂಗ್ಲ ಮಹಿಳೆ ತಿಳಿಯೆ ಸತ್ಯದಂಶವ ||೭೩||

೧೨ ಧರ್ಮ ದರ್ಶನ

ಪ್ರಥಮ ವರ್ಷ ಕಳೆಯುತಿರಲು
ಕಥೆಯು ಸಾಗಲಾಗರೀರ್ವ
ಭ್ರಾತೃಥಿ ಯಾಸಫಿಯತಜ್ಞರಾಂಗ್ಲಮಿತ್ರರು
ಅತಿಯ ನೇಹದಿಂದ ಪೇಳ್ದು
ಮಥಿಸಿರುವಿಯಗೀತ ಶಾಸ್ತ್ರ
ವ್ಯಥೆಯ ಬಿಟ್ಟು ಹೇಳೆನಲ್ಕೆ ಗಾಂಧಿನಾಚಿದ ||೭೪||

ಗೀತೆ ನಾನು ಓದಲಿಲ್ಲ
ಮಾತು ಕೊಡುವೆ ನಿಮ್ಮ ಜತೆಗೆ
ನೀತಿ ಶಾಸ್ತ್ರ ಗೀತೆ ಮಥನ ಮಾಡಿಮುಗಿಸುವೆ||
ಮಿತ್ರರಿಬ್ಬರಾಗ ನುಡಿದ
ಗೀತೆಯಿಹುದು ಸಂಸ್ಕೃತದಲಿ
ಖ್ಯಾತ *ನಾರ್ನಾಲ್ಡ್ ಗೀತೆಯಿಹುದು ಆಂಗ್ಲ ಭಾಷೆಲಿ ||೭೫||

ಓದಿರುವೆವು ಮೂಲದಲ್ಲಿ
ಓದ ಬೆಕು ನಿನ್ನ ಜತೆಗೆ
ಸಾಧಿಸುತಲಿಗೀತಸುಧೆಯ ಪಾನಗೈಯಲು||
ಬೋಧೆಯಹುದು ತತ್ವ ಶರಧಿ
ಓದಿ ಮುಗಿಸಿ ಸಾರ್ಥಕಥೆಯ
ನಾದರಿಸುತಲಿ ಪಡೆಯ ವೇಳ್ಕುವೆಂದು ನುಡಿದರು ||೭೬||

ಎಡ್ವಿನ್ ಆರ್ನಾಲ್ಡರ ಆಂಗ್ಲ ಭಾಷಾ ರೂಪಾಂತರ ಭಗವದ್ಗೀತೆ.

ಮೂಲದಲ್ಲಿ ಗೀತೆಯೋದೆ
ಹೇಳಲೇನು ವೈಭವವನು
ತಾಳಿಹರ್ಷ ಓದಲೆರಡ ನೇಯಯೋಗದಿ||
ಬಾಳ ಸಂಗವಿರಲು ವಸ್ತು
ಹೇಳಿಬಹುದು ವಸ್ತು ಮೋಹ
ಮೇಳ ಮೋಹದಿಂದ ಕಾಮ ಕ್ರೋಧವಧಿಕವು * ||೭೭||

ಕ್ರೋಧದಿಂದ ಬುದ್ಧಿನಾಶ
ಬುದ್ಧಿನಾಶ ಮತಿವಿನಾಶ
ವಿದ್ಯೆ ಕಲಿತ ಫಲವು ಕೆಡುಗು ಸರ್ವನಾಶದಿ||
ಓದಲಿದನು ಗಾಂಧಿಗಾಯ್ತು
ವೇದ ಜ್ಞಾನ ದಾಳ ತಿಳಿವ
ನೋಡಬೇಕು ಗೀತಶಾಸ್ತ್ರ ಮಥಿಸುತರ್ಥವ ||೭೮||

ಸಾದಿಸುತಲಿ ತಪದಿ ಸಿದ್ಧಿ
ಈ ಧರೆಯೊಳು ದಿವ್ಯ ಬಾಳ
ಕಾದಿರಿಸಲು ಬೇಕೆನುತ್ತ ಗಾಂಧಿ ನಿರ್ಧರ||
ಓದಿ ಗೀತೆ ತರ್ಜುಮೆಗಳ
ಭೇದ ತೊರೆದು ತಿಳಿದ ನಾರ್ನಲ್ಡ್
ಸಾಧಿಸುತ್ತ ಬರೆದ ಆಂಗ್ಲ ಭಾಷೆ ತರ್ಜುಮೆ ||೭೯||

ಸರ್ವಶ್ರೇಷ್ಠವೆಂದು ಮನದಿ
ನಿರ್ವಚಿಸುತ ಗೀತದು ಧದಿ
ನಿರ್ವಿಕಾರದಿಂದ ಮಥಿಸಲಿಕ್ಕೆ ನಿರ್ಣಯ||
ಪರ್ವಿಕೊಳುತಲೊದಿ ಮುಂದೆ
ಬ್ಲಾವಟಸ್ಕಿ** ಬರೆದ ಕೃತಿಯ
ದಿವ್ಯ ಭಾವದಿಂದಲೋದಿ ಹಿಂದುಧರ್ಮದ ||೮೦||

ರಾಜಕೋಟೆಯನುಭವದಲಿ
ವ್ಯಾಜದಿಂದ ಕ್ರೈಸ್ತ ಧರ್ಮ
ಸಾಜದನ್ಯ ಧರ್ಮಗಳನು ಹಳಿದಪರಿಯನು||

---

* *ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ಸ್ಮೃತಿಭ್ರಂಶಾ ಬುದ್ಧಿನಾಶೋ ಬುದ್ಧಿನಾಶತ್ ಪ್ರಣಶ್ಯತಿ//*

** Madame Blavatsky's Book: *Key to Theosophy*

ನೈಜವಾಗಿ ತಿಳಿದು ತೊರೆದು
ತ್ಯಾಜ್ಯ ಮಾಂಸಮದಿರೆ ತೊರೆದು
ಈ ಜಗತ್ತಿನಲ್ಲಿಯರಿತ ನೈಜಧರ್ಮವ ||೮೧||

ಕ್ರೈಸ್ತಮಿತ್ರ ಭೇಟಿಯಾಗಿ
ಸ್ವಸ್ತಿವಚನ ಬೈಬಲ್ ಕೊಟ್ಟ
ಉಸ್ತುವಾರಿ ಪಠಿಸುತೋದಿ ಹೊಸತು ಭಾಗವ* ||
ಆಸ್ಥೆಯಿಂದ ನರಿತ ನಿಜವ
ವಸ್ತುವೊಂದೆ ಗೀತೆ ಬೈಬಲ್
ಅಸ್ತುವೆನುತ 'ಪರ್ವತೋಪದೇಶ'* ವೋದಿದ ||೮೨||

ಕೆಟ್ಟತನವನೆದುರಿಸದಿರು
ಬಿಟ್ಟರೊಂದು ಕೆನ್ನೆಗೇಟು
ಸಿಟ್ಟಿಗೆದ್ದು ಹೊಡೆಯಬೇಡ ಕೆನ್ನೆ ತೋರಿಸು||
ಉಟ್ಟಬಟ್ಟೆ ಕದ್ದವಂಗೆ
ಕೊಟ್ಟು ಬಿಡನಿ ಶಾಲ ನೆನುತ
ದಿಟ್ಟತನದಲೊರೆದ ನುಡಿಗೆ ಗಾಂಧಿ ಮೆಚ್ಚಿದ ||೮೩

ಧರ್ಮಸಾರ ಓದಲಾಗಿ
ಕರ್ಮಸಾರವರಿತ ಗಾಂಧಿ
ಮರ್ಮದಿಂದ ತೊರೆದನಾಸ್ತಿಕತ್ವವಾದವ||
ಅಮ್ಮ ಅನ್ನಿ* ಬರೆದ ಗ್ರಂಥ
ವೊಮ್ಮೆವೋದಿ ನಾಸ್ತಿ ಕತೆಯ
ಕರ್ಮಕಾಂಡವರಿತ ಗಾಂಧಿ ನಿರ್ಮಲಾಂಗನು ||೮೪

ಶಾಖಹಾರ ಸಭೆಗೆ ತೆರಳಿ
ಶಕ್ತಿಯಿಂದ ಪೋರ್ಟ್ಸ್‌ಮೌತ್
ನೌಕನೆಲೆಯ ಊರಿನಲ್ಲಿ ಪಾಲುಗೊಳ್ಳುತ||
ಏಕ ಮನದಿ ಭುಜಿಸಿ ಮತ್ತೆ
ಬೇಕುಯೆನಲು ಬ್ರಿಡ್ಜ ನಾಡಿ
ಸಾಕುಯೆಂದು ನುಡಿಯುತೆದ್ದ ಗಾಂಧಿ ಹೇಸುತ ||೮೫

---

* New Testament
* Sermon on the mount
* Annie Besants Book : How I become a Theosophist

೧೩. ಪ್ಯಾರಿಸ್ ಪ್ರದರ್ಶನ : ಲಂಡನ್ ಬಾರ್-ಎಟ್-ಲಾ

ಪ್ಯಾರಿಸಿನಲಿ ನಡೆವ ವಸ್ತು
ಭಾರಿ ಪ್ರದರ್ಶನವ ಮೇಣು
ಊರು ನಗರ ನೋಡೆ ಫ್ರಾನ್ಸ್ ಹೊರಟ ಗಾಂಧಿಯು॥
ಊರಿನಲ್ಲಿ ಚಿತ್ರ ಮಯದ
ನೇರ ಸಾಸಿರಡಿಯ ಗೋಪು
ರೇರಿನೋಡಿ ವಿಸ್ಮಯದೊಳು ಚಕಿತನಾದನು ॥೮೬॥

ಫ್ರಾನ್ಸ್ ರಾಜಧಾನಿಯಲ್ಲಿ
ವಿಸ್ಮಯಚ್ಚರಿಯಲಿ ಹೊಂದಿ
ಸುಸ್ಮಿತದಲಿ ಕಟ್ಟುತಿರುವ ಭಾರಿ ಚರ್ಚಿಯ ॥
ಸ್ವಸ್ಥರಚನೆ ನೋಡಿ ದೈವ
ಆಸ್ಥೆಯಿಂದ ಮಹತು ಸಾಧ್ಯ
ವಿಸ್ತರವಿದಹುದುಯೆನುತ್ತ ಗಾಂಧಿ ತಿಳಿದನು ॥೮೭॥

ಐಫೆಲ್ ಗೋಪ್ರವರ್ಣನೆಯಲಿ
ತಾಪವುಕ್ಕಿ ಬರುತಲಿತ್ತು
ಶಾಪದಿಂದ ಧೂಮಪಾನ ಮತ್ತಗುತಲಿ ॥
ಪಾಪಬುದ್ಧಿಯುಳ್ಳ ಜನರು
ಐಫೆಲ್ ಗೋಪ್ರ ರಚಿಸಿರುವದ
ವೈಪರೀತ್ಯ ತಿಳಿದು ಗಾಂಧಿಗಾಯ್ತು ದಿಗ್ಭ್ರಮೆ ॥೮೮॥

ಬಾರ್‌ಪಾಸ್ ಮಾಡೆಗಾಂಧಿ
ಊರಿನಿಂದ ಆಂಗ್ಲದೇಶ
ಸಾರಿಬಂದು ಸೇರ್ದಬಾರ್ ವಿದ್ಯ ಸಂಸ್ಥೆಗೆ॥
ನೇರ ಮೂರು ವರ್ಷದವಧಿ
ಭಾರಿ ವಿದ್ಯೆ ನೀತಿ ಶಾಸ್ತ್ರ
ಸೇರುತಿತ್ತು ಭೋಜನಗಳು 'ಬಾರ್' ಕಲಿಯಲು ॥೮೯॥

(He was called to the bar on 10-6-1891 and enrolled in the High Court on 11-6-1891)

ಗಾಂಧೀಜೀ ಓದಿದ ಪುಸ್ತಕಗಳು: Brooms Common Law, Snell's Equity, Tudors Leading Cases, William's Real Property, Mayhes Hindu Law etc.

ಬಾರ್ = ಬಾರ್ ಎಟ್ ಲಾ
ಶೋಧ = ಪರೀಕ್ಷೆ

** Roman Law*
** ಸರಳ ಶಾಸ್ತ್ರ = Common Law*

ನಾಲ್ಕು ಬಾರಿ ಶೋಧವಿತ್ತು
ಸಿಲ್ಕುಯಿರದೆ ಪಾಸುಯಿತ್ತು
ಕಲ್ಕೆಯೆಲ್ಲ ಸುಲಭವಿತ್ತು ಸುಲಭ ಪ್ರಶ್ನೆಯು||
ನಿಲ್ಕೆರೋಮ್ ನೀತಿ ಶಾಸ್ತ್ರ
ಸಲ್ಕೆಯಿಂದ ಸರಳ ಶಾಸ್ತ್ರ
ಕಲ್ಕೆಯಿತ್ತು ಓದಿಕಲಿತ ನೀತಿ ಶಾಸ್ತ್ರವ ||೯೦||

ಎಲ್ಲ ಶಾಸ್ತ್ರದಲ್ಲಿ ಪಾಸು
ಮಲ್ಲ ತನದಿ ಗಾಂಧಿ ಮಾಡಿ
ಉಲ್ಲಸಿತನು ಪಡೆದ ಪಿರಿದು ಬಾರ್‌ಪದವಿಯ||
ಬಲ್ಲ ನೀತಿ ಶಾಸ್ತ್ರ ಬಿರುದು
ಸಲ್ಲಲಿತದಿ ಪಡೆದುಕೋರ್ಟಿ
ನಲ್ಲಿ ಲಾಯರೆಂದು ಸೇರ್ದ ಗಾಂಧಿ ಮೋಹನ ||೯೧||

೧೪. ಮಾತೃಭೂಮಿಯಲ್ಲಿ

ಲಾಯರಾಗಿ ಗಾಂಧಿ ಬರಲು
ಸ್ವಾಯ ಭೂಮಿಯಲ್ಲಿ ವೃತ್ತಿ
ಧ್ಯೇಯ ಸಾಧನೆಯನು ಮಾಡೆ ಕಠಿಣ ತೋರ್ದುದು||
ಬಾಯಿಯಿಂದ ಲೋದಿ ಕಲಿತ
ನ್ಯಾಯ ಶಾಸ್ತ್ರ ಧೋರಣೆಯಲಿ
ಬೇಯದಿರಲು ನೊಂದ ಗಾಂಧಿ ನಿಸ್ಸಹಾಯದಿ ||೯೨||

ಹಿಂದು -ಇಸ್ಲಾಂ ಮತದ ನೀತಿ
ಒಂದಸರಿಯದಿರಲು ನೊಂದ
ಬಂಧು ಫಿರೋಜಶಾಮೆಹ್ತ ಕೋರ್ಟಿನಲ್ಲಿ ಗುಡುಗುವ
ಸಿಂಧುರವವ ಕೇಳಿದಿಗಿಲು
ಬಂದುನೊಂದು ಗಾಂಧಿ ನಲುಗೆ
ಹಿಂದು ದೇಶದಲ್ಲಿ ವೃತ್ತಿ ಕಠಿಣವೆನ್ನುತ ||೯೩||

---

* *Frederie Pincutt. * Hindu & Muslim Law*
* *ಸಿಪಾಯಿ ದಂಗೆ 1857*
* *Physiognomy= ಮುಖ ಲಕ್ಷಣ ಶಾಸ್ತ್ರ*

ದಾದಭಾಯಿಯವರ ಕಂಡ
ಸಾಧಿಸುತ್ತಲಂಡನಿನಲಿ
ಆದರವರ ಕೂಡೆ ಮಾತನಾಡಲಾರದೆ||
ಭೇದ ಮರೆತು ಫ್ರೆಡರಿ(ಕ್) ಪಿನ್ಕಟ್
ಸಾಧ್ಯಲಾಯರನ್ನು ಕಂಡು
ವೇದನೆಯನು ಪೇಳಲವರು ಪೊರೆದ ಮಾರ್ಗವ ||೯೪||

ಭಾರತೀಯ ಚರಿತೆಯೋದು
ಧೀರ ಸಿಪಯಿ ದಂಗೆಯೋದು
ಕಾರಣದಲಿ ಮನುಜ ಪ್ರಕೃತಿ ತಿಳಿಯಲೋದೆಲೊ||
ನೇರವಾಗಿ ಫಿಜಿಯನೋಮಿ
ಸಾರ ಶಾಸ್ತ್ರವೋದಿ ಮನುಜ
ನಾರುಯನುಕಲರಿತು ದೃಢದ ಮನವ ತಳೆಯಲೋ ||೯೫||

ಓದಿ ತಿಳಿದ ಗಾಂಧಿ ಧೀರ
ನೋದೆ ಶಾಸ್ತ್ರ ಧೈರ್ಯಬರದು
ಬಾಧೆ ಬಾರದಿರಲು ವೃತ್ತಿಯಲ್ಲಿ ನಿಸ್ಪೃಹ||
ಶೋಧಬೇಕು ಸತ್ಯ ವಚನ
ಹಾದಿ ಬೇಕು ಶುದ್ದ ನಡೆಯು
ಹೃದಯ ಶ್ರದ್ದೆ ನಿಪುಣ ತನವು ವೃತ್ತಿಯೇಳ್ಗೆಗೆ ||೯೬||

ಶೋಭೆಯೆಂದು ತಿಳಿದು ಗಾಂಧಿ
ಲಾಭ ಹಾದಿಯರಿತು ಕೊಂಡು
ವೈಭವದಲಿ ಮೆರೆವ ಮುಂಬೈ ನಗರ ಕೈದಿದ ||
ಶೋಭಯಾತ್ರೆ ಮುಗಿದು ಗಾಂಧಿ
ಉಭಯ ಕುಲಕೆ ಮನುಜ ಕುಲಕೆ
ಶುಭವ ತರಲು ತವಕಗೊಂಡು ಮಾತೃ ದೇಶದಿ ||೯೭||

ಅದ್ಯಾಯ ೨

೧. ಬದುಕಿನಭರದಲ್ಲಿ

ಅರಬಿ ಶರಧಿ ಗಡುಸುಯಿತ್ತು
ಭರದ ಬೀಸುಗಾಳಿಯಿತ್ತು
ಶರಧಿಯಾನ ಹಡಗಿನಲ್ಲಿ ಮಹಡಿಯೇರುತ||
ಸರಳ ಓಟ್ಸ್ ಗಂಜಿ ಕುಡಿದು
ಮರೆಯ ದಂತೆ ಮಾತೃದೇಶ
ತರುಣ ಗಾಂಧಿ ಬಂದ ಮುಂಬೈ ನಗರಕಾಗಲೆ ||೯೮||

ಅಣ್ಣ ಬಂದು ಗಾಂಧಿಗೊಮ್ಮೆ
ಕಣ್ಣುಗಳಲಿ ನೀರು ತುಂಬಿ
ಸ್ವರ್ಣ ಪುಥಳಿ ಮಾತೆ ಮಡಿದ ಬಣ್ಣ ತಿಲುಹಲು||
ಕರ್ಣವನ್ನು ನಂಬದಾದ
ಪರ್ಣದಂತೆ ನಲುಗು ತಿದ್ದ
ಕಣ್ಣು ತುಂಬ ನೋಡಿ ಮಣಿಯಲಾಶೆ ವಿಫಲವೋ ||೯೯||

ನೆನೆದು ಗಾಂಧಿ ಮರುಗುತ್ತಿದ್ದ
ಎನಿತೋ ಮಾತೆ ಶೋಕ ಸಹಿಸಿ
ಅನಿಬರೊಡನೆ ನಡೆದು ಮಿತ್ರರನ್ನು ಸಂಧಿಸಿ||
ಇನೀತು ಜನರ ನೋಡುತಿರಲು
ವಿನುತರಾಯ ಚಂದಗುರುವ
ನನಿತರೊಲಗೆ ನೋಡಿಯರಿತ ಜ್ಞಾನ ಶರಧಿಯ ||೧೦೦||

ಟಾಲ್‌ಸ್ಟಾಯ್* ಪುಸ್ತಕದಲಿ
ಕಲಿತ ದೇವನಿರುವ ನಿನ್ನ
ಬಲದ ಹೃದಯ ಮಧ್ಯದಲ್ಲಿಯೆನುವ ತತ್ವವ||
ನೆಲೆಯ ನರಿತ ರಸ್ಕಿನ್ ಬರೆದ
ಕಲೆಯ ಗ್ರಂಥದಿಂದ ಸರ್ವ
ರುಳಿವು ಉದಯವಿಹುದು ನಲುಮೆಯೊಲಮೆ ಬಾಳಲಿ ||೧೦೧||

---

* *Lavator's and Shemmelpennieks Books on Physiognomy*

ರಾಜಕೋಟೆಯಲ್ಲಿ ಯೊಡನೆ
ಸಾಜ ಪಂಕ್ತಿ ಭೋಜನದಲಿ
ನೈಜ ತನದಿ ಸಹಜನದಲಿ ಕೂಡಿ ಭುಜಿಸುತ॥
ಪೂಜ್ಯನಿರಲು ವೈರಿ ಜವರು
ವ್ಯಾಜ್ಯ ಹೂಡಿ ಜಾತಿ ಭ್ರಷ್ಟ
ತ್ಯಾಜ್ಯನಿವನು ಯೆನಲು ಗಾಂಧಿ ಮೌನತಾಳಿದ ॥೧೦೨॥

ಪತ್ನಿಯೊಡನೆ ಗಾಂಧಿ ಸಹನೆ
ಯರ್ತಿ ಬಿಟ್ಟು ಕೆಲಸಮಯದಿ
ವರ್ತಿಸುತಲಿ ಮುನಿಸಿನಿಂದ ತವರಿನೂರಿಗೆ ॥
ಸುತ್ತವರಿಯೆ ಕಳಿಸುತ್ತಿದ್ದ
ಮತ್ತೆ ಹತ್ರ ಕರೆಸುತಿದ್ದ
ಒತ್ತುವಾಸೆಯಿಂದಲೋದ ಬರೆಹ ಕಲಿಸಲು ॥೧೦೩॥

ತನ್ನ ತರಳ ನಾಲ್ಕು ವರ್ಷ
ಚೆನ್ನನಿಂಗೆ ವಿದ್ಯೆ ಕಲಿಸು
ತಿನ್ನು ಉಳಿದ ಬಾಲರೆಲ್ಲ ದೇಹ ಶಿಕ್ಷಣ॥
ಅನ್ಯವಿಲ್ಲದಂತೆ ನೀಡಿ
ಮಾನ್ಯ ಗಾಂಧಿ ಬಾಲರೊಡನೆ
ಭಿನ್ನ ಭಾವವಿಲ್ಲದಂತೆ ಬೆರೆತು ಮೆರೆಯುವ ॥೧೦೪॥

ತಿನಸು ತಿಂಡಿಯಲ್ಲಿ ಹೊಸತು
ಎನಿಸೆ ಗಾಂಧಿ ಓಟ್ಸ್ ಗಂಜಿ
ಯನಿತು ತಿಂದು 'ಕೋಕೊ' ಕುಡಿವ ಮನೆಯ ಭೋಜ್ಯದಿ॥
ಅನಿತರಲ್ಲಿ ತೆರಳಿ ಮುಂಬೈ
ಘನದನಗರದಲ್ಲಿ ನೆಲೆಸಿ
ಮನಕೆ ಬರದ ಅಡಿಗೆಯುಂಡು ದಣಿಯುತಿದ್ದನು ॥೧೦೫॥

ಅಡಿಗೆಗಾಗಿ ಭಟ್ಟನೊಬ್ಬ
ಉಡುವ ಉಡಿಗ ಹಸ್ಯ ಪಶುಚಿ
ಒಡಲ ಹೊರೆಯೆ ಬಂದು ಸೇರ್ದನಡಿಗೆ ಕೆಲಸಕೆ॥
ಬಿಡದೆ ಗಾಂಧಿಯವಗೆ ವಿದ್ಯೆ
ಮೂಡಿ ಸುತ್ತ ತಿಳಿವು ತಂದ
ಪ್ರೌಢನಾದ ನಡಿಗೆ ಭಟ್ಟ ಕೆಲವು ದಿನದಲಿ ॥೧೦೬॥

---

* *Ruskins : Unto this last*
* *Tolstoy: The Kingdom of God is within you*

೨. ಪ್ರಥಮ ಖಟ್ಲೆ (ಮೊಕದ್ದಮೆ)

ಮುಂಬಯೀಯ ನಗರದಲ್ಲಿ
ಇಂಬಿನಿಂದ ಭಾರತೀಯ*
ತುಂಬು ನ್ಯಾಯ ಶಾಸ್ತ್ರ ಪಠಿಸಿ ಮೊದಗೊಂಡನು
ತುಂಬ ಮಿತ್ರ ವೀರಚಂದ
ನೆಂಬವನೊಡಗೂಡಿ ಮುದದಿ
ತುಂಬ ಖಾದ್ಯ ಶಾಸ್ತ್ರದಲ್ಲಿ ಶೋಧ ನಡೆಸಿದ ||೧೦೭||

ಭಾರತೀಯ ನೀತಿ ಶಾಸ್ತ್ರ
ಏರ ಕಠಿಣವಿತ್ತು ಮತ್ತೆ
ಪೌರನೀತಿ* ವಿಧಿಯ ಶಾಸ್ತ್ರ ಜಟಿಲವಿದ್ದಿತು||
ಶೂರರೆಲ್ಲ ಲಾಯರುಗಳ
ಭಾರಿ ಜ್ಞಾನ ನಿಧಿಯ ವಿವರ
ಪಾರಿ ಶುದ್ಧ ಗಾಂಧಿ ಗೊರೆದ ಪಲವು ತೆರದಲಿ ||೧೦೮||

ಫಿರೋಜಶಾ ಶಕ್ತಿಯುತನ
ಕರದ ತುದಿಲಿ ಸಾಕ್ಷ್ಯ ವಿಧಿಯು*
ವೀರಬದ್ರುದೀನ ತರ್ಕದಲ್ಲಿ ನಿಪುಣನು||
ತರುಣ ಗಾಂಧಿಯಿದನು ಕೇಳಿ
ಭರಿತ ದಿಗಿಲು ಪಡೆಯುತಿದ್ದ
ಹೊರಗೆ ನಾಮ ಪಲಕವಿತ್ತು ವಕಿಲ ವೃತ್ತಿಯ ||೧೦೯||

ನಿರುತ ವೃತ್ತಿಗಾಗಿ ದುಡಿಮೆ
ಭರದಿ ನಡೆಯುತಿತ್ತು ಒಳಗೆ
ಇರದೆ ಪಠಿಸಿ ಸಾಕ್ಷ್ಯ ಶಾಸ್ತ್ರ ತಿಳಿದು ಕೊಂಡನು||
ಸಾರ ಹಿಂದು ನ್ಯಾಯ ಶಾಸ್ತ್ರ*
ನೇರ ಓದಿ ತಿಳಿದುಕೊಂಡ
ಸಾರಿ ಕೋರ್ಟ್‌ವಾದ ಮಾಡಲಂಜುತಿದ್ದನು ||೧೧೦||

---

* *Indian Law*
* *Civil Proceedure Code*

ಪ್ರಥಮ ಕೇಸು ಮಾಮಿ ಬಾಯಿ
ಕಥನ ಸುಲಭ ಸರಣಿಯಿತ್ತು
ವ್ಯಥಿಸಿ ಗಾಂಧಿ ಎದ್ದು ನಿಂತ ವಾದ ಮಾಡಲು||
ಶಿಥಿಲಗೊಂಡು ಕೈಯು ಕಾಲು
ಪಥದಿ ನಡುಗಿ ಸೊರಗಿ ಗಂಟ್ಲು
ಹಿತದಿವಾದ ಮಾಡದಾದ ಗಾಂಧಿ ಕೋರ್ಟಲಿ ||೧೧೧||

ಅಂದಿನಿಂದ ಕೋರ್ಟಿನಲ್ಲಿ
ಒಂದು ವಾದ ಮಾಡದಾದ
ಬಂದು ಬಿಟ್ಟ ಮನೆಗೆ ವಿಫಲ ಮನದೆ ನೋಯುತ||
ಮುಂದೆಯೇನುಯೆಂಬ ಪ್ರಶ್ನೆ
ಅಂದು ಮಾಡಲಾಗ ಗಾಂಧಿ
ಅಂದಿನಿಂದ ಲರ್ಜಿ ಬರೆದು ಕೊಡಲು ತೊಡಗಿದ ||೧೧೨||

ಕೋರ್ಟಿಗಂತು ಹೋಗುತಿದ್ದ
ಹರ್ಟೆಗಲ್ಲಿ ಯಾರುಯಿಲ್ಲ
ಒಟ್ಟಿನಲ್ಲಿ ಕಾಲಕಳೆದು ಮರಳುತಿದ್ದನು||
ಇಷ್ಟು ದಿವಸ ಮುಂಬಯಿಯಲಿ
ಕಷ್ಟದಿಂದ ಕಳೆದು ಕಾಲ
ವ್ಯಷ್ಟಿಜೀವ ಸಹಿಸದಾಗ ತೊರೆದ ಮುಂಬಯಿ ||೧೧೩||

ಎಲ್ಲದಿನದಿ ನಡೆದು ಹೊಗಿ
ಒಳ್ಳೆ ಶೀಲ ದಾರ್ಢ್ಯಗಳಿಸಿ
ಮಲ್ಲತನದೆ ರೋಗ ರಹಿತ ದೇಹ ಪಡೆಯುತ||
ಕಲ್ಲಿನಂತ ಮನವ ತಳೆದು
ಎಲ್ಲರಿಗೆ ಸುಬುದ್ಧಿಯೊರೆದು
ಬಲ್ಲಗಾಂಧಿ ಕ್ಷೇಮ ಪೂರ್ಣದಾಯು ಪಡೆದನು ||೧೧೪||

ಜೀವನದಿಯ ಮುಂದುವರಿಸೆ
ಯಾವ ಕೆಲಸ ಹುಡುಕಲೆಂದು
ಸೋವುತಿದ್ದ ಗಾಂಧಿಯಾಗ ಶಿಕ್ಷಕೋದ್ಯಮ||
ಕಾವು ದೆನುತಲರ್ಜಿ ಹಾಕಿ
ತೀವ್ರ ಸಕ್ತಿಯಿಂದ ತೆರಳಿ
ನೋವು ತಳೆದು ಮರಳಿ ಬಂದ ಪದವಿಯಿಲ್ಲದೆ ||೧೧೫||

ಸಾಕ್ಷ್ಯವಿಧಿ: *Evidence Act*   * *(Mayhe's Hindu Law)*

ಮುಂಬಯಿಯನು ತೊರೆದು ಗಾಂಧಿ
ಉಂಬದಾರಿ ಹುಡುಕಿ ಕೊಂಡು
ಇಂಬುದೋರದಿರಲು ಬಂದ ರಾಜಕೋಟೆಗೆ॥
ತುಂಬಿಸಲ್ಕೆ ಅರ್ಜಿ ಮನವಿ
ಕಂಬಿ ಹೊಡೆದು ನಿಂತಿರಲ್ಕೆ
ಲಂಬಿಸುತ್ತ ಜೀವನವನು ಕಳೆಯುತಿದ್ದನು ||೧೧೬||

ಅಣ್ಣನೆಂದ ಮಾತಿಗೊಪ್ಪಿ
ಅಣ್ಣನಿಗೆ ಹಿತವ ಮಾಡೆ
ಸಣ್ಣತನವ ತೊರೆಯುತಾಂಗ್ಲ ಪ್ರಾಧಿಕಾರಿಗೆ ||
ಜಾಣ್ಮೆಯಿಂದ ತೆರಳುತಲ್ಲಿ
ಅಣ್ಣನಿಂಗೆ ರಕ್ಷೆಕೋರೆ
ಕಣ್ಣು ಮುಚ್ಚು ತಾಂಗ್ಲನವನ ಬೈದುಕಳಿಸಿದ ||೧೧೭||

ಆಂಗ್ಲ ಸಾಹೇ(ಬ್) ದರ್ಪತೋರೆ
ಭಂಗವಾಯ್ತು ಗಾಂಧಿಯಾಶೆ
ಏಂಗಡಿಸುತ ನೀತಿನಿಯುವ ತಿಳಿಪರಿಲ್ಲದೆ ||
ಕಂಗಲಾಗಿ ಗಾಂಧಿ ಮುಂದೆ
ಹಿಂಗು ಧೈರ್ಯ ವಿಫಲ ಮನದಿ
ವ್ಯಂಗ್ಯ ಸಹಿಸಲಾರದಲ್ಲಿ ನಡೆದ ಮುಂದಕೆ ||೧೧೮||

ಇಂತು ಬಾಳು ಬಳಲು ತಿರಲು
ಬಂತುವೊಂದು ರಸದ ನಿಮಿಷ
ನಿಂತು ಕೀರ್ತಿಪಡೆದ ದಾದ ನಬ್ದುಲ್ ಸಂಸ್ಥೆಯು॥
ಆಂತು ದಕ್ಷಿಣಾಫ್ರಿಕದಲಿ
ಸಂಸ್ಥೆಯಲ್ಲಿ ಕೆಲಸವಿಹುದು
ಶಾಂತ ಮನದ ಯುವಕ ನೀನು ಬಹುದುಯಿಲ್ಲಿಗೆ ||೧೧೯||

ಇಲ್ಲಿ ಬಿಳಿಯರಿಹರು ವಿಪುಲ
ಇಲ್ಲಿಯಾಂಗ್ಲ ಭಾಷೆ ಬಳಿಕೆ
ಬಲ್ಲ ನೀನುಯಿಲ್ಲಿ ಗೈದಿ ಹೊಸದು ಜೀವನ॥
ವೆಲ್ಲನಲಿಯ ಬಹುದುಯೆಂದು
ಸೊಲ್ಲಿಸಿರುವ ಲಿಖಿತ ನೋಡಿ
ಮಲ್ಲಗಾಂಧಿ ನೆನೆದ ಕ್ಷೇಮ ಬದುಕ ಚಿಂತನೆ ||೧೨೦||

ಹೋಗಿ ಬರುವ ಕರ್ಚ ಸಂಸ್ಥೆ
ತಾಗಿಕೊಂಡು ವೇತನವನು
ಕೈಗೆ ಕೊಡುವುದೆಂಬ ವಿಷಯ ತಿಳಿದು ಗಾಂಧಿಯು||
ಹಾಗೆ ಮಾಡಲೆಂದು ಹೊರಟು
ಹೋಗಿ ಬರುವೆನೆಂದು ಹೇಳಿ
ಬೇಗ ಶರಧಿದಾಂಟಲೆಂದು ಮನವಗೈದನು ||೧೨೦||

೩. ನೆಟಾಲಿಗೆ ಪಯಣ

ಮಾತೆ ಮಡಿದ ಮೇಲೆ ಮಮತೆ
ಏತರದ್ದುಯೆಂದು ತಿಳಿಯೆ
ನೀತಿವಂತೆ ಪತ್ನಿ ಮುಖವು ಮುಂದೆ ಸುಳಿವುದು||
ಅರ್ತಿಯಿಂದ ಮತ್ತದೊಂದು
ಪ್ರೀತ ಶಿಶುವು ಜನಿಸಿಯಿತ್ತು
ಇತ್ತ ಪತ್ನಿ ಪುತ್ರ ಪ್ರೇಮ ಬಂಧನಂಗಳ ||೧೨೨||

ಅಷ್ಟುಕಾಲ ತೊರೆದ ಗಾಂಧಿ
ಇಷ್ಟವಾದ ಪಥಗೆ ಹೊರಟು
ಸ್ಪಷ್ಟ ದಾರಿ ಹಿಡಿದು ಮುಂಬೈ ನೌಕ ನೆಲೆಯಲಿ||
ಕಷ್ಟಪಟ್ಟು 'ಸೀಟು' ಪಡೆದು
ದೃಷ್ಟಿಯಿಟ್ಟು ಶರಧಿ ರಭಸ
ಅಷ್ಟು ದಿನದ ಪಯಣ ಸಾಗಿ ಮುಂದುವರಿಯುತ ||೧೨೩||

ಹಡಗಿನಲ್ಲಿ 'ಚೆಸ್' ಕಲಿತು
ನುಡಿದ ತೆರದಿ ನಡೆದು ಗಾಂಧಿ
ಬಿಡದೆ ಹಡಗು 'ಲಾಮು'* ಬಂದ್ರು ತಲಪಿ ಮುಂದಕೆ
ಅಡಿಯನಿಡುತ ಮೊಂಬ್ಸಾ,ಪುರದೆ
ಹಿಡಿದು ನಿಂತಿರಲ್ಕೆ ಹಡಗು
ಬಿಡದೆ ಪುರವ ನೋಡ ಹೊರಟ ಪದುಲ ಗಾಂಧಿಯು ||೧೨೪||

ಕಾಮಮೋಹ ಕಲ್ಲಿ ನೆಲೆಯು
ಸೀಮೆಯಿರಲು ಗಾಂಧಿ ಕಠಿಣ
ಧೀಮ ಮನದಿಗೆದ್ದ ಕಾಮ ಮೋಹಪಾಶವ
ಸೀಮೆ ವೃಕ್ಷ ರಾಜಿಯಿಂದ
ಕಾಮಿಸಿರುವ ಫಲಗಳಿಂದ
ನೇಮದಿಂದ ರಂಜಿಸುತಿರೆ ಝೂಂಝು ಬಾರಲಿ ||೧೨೫||

ಮೊಜಾಂ ಬಿಕ್ * ನಗರ ಮುಂದೆ
ನಿಜದ ನಟಾಲ್ ನಗರ ಮುಂದೆ
ಸ್ವಜನ ರಹಿತ ನಗರದಾಫ್ರಿಕಾದ ದೇಶದಿ||
ವಿಜಯಶೀಲ ದರ್ಬನಗರ
ಸುಜನ ನಬ್ಬುಲ್ ಶೇಥರಾಗ
ವಿಜಯ ಗಾಂಧಿ ಬರವ ಕಾದು ನೋಡುತ್ತಿದ್ದರು ||೧೨೬||

ದರ್ಬನಗರದಲ್ಲಿಯಿಳಿದು
ನಿಬ್ಬೆರಗಿನ ಗಾಂಧಿ ನೋಡೆ
ಇಬ್ಬದಿಯಲಿ ಜನಗಳೆಲ್ಲ ಭಾರತೀಯರ ||
ದುರ್ಬಿದೃಷ್ಟಿಯಿಂದ ನೋಡಿ
ಸಬ್ಬಯಕೆಯ ತಳೆಯದಿರಲು
ಅಬ್ದುಲ್ ಸೇಥ್ ಬಂದು ಕಂಡಧೀರ ಗಾಂಧಿಯ ||೧೨೭||

ಪೇಟ ಧರಿಸಿ ಫ್ರಾಕ್ ಕೋಟ
ನೀಟನುಡುಪು ತೊಟ್ಟು ಗಾಂಧಿ
ಭೇಟಿ ಮಾಡಿ ಸೇಥನನ್ನು ನಡೆದ ಠಾಣೆಗೆ ||
ಕೋರ್ಟಿನಲ್ಲಿ ಪೇಟ ತೆಗೆಯೆ
ಅಟ್ಟಹಾಸ ತೋರೆ ಭೂಪ
ಕಟ್ಟಕಡೆಗು ತೆಗೆಯೆನೆಂದ ಗಾಂಧಿ ದಿಟ್ಟನೆ ||೧೨೮||

ಇಸ್ಲಾಂ ಧರ್ಮದವನು ಸೇಥ್
ಅಸಲಿ ಧರ್ಮ ತಿಳಿಯುತ್ತಿದ್ದ
ಹೊಸಬ ಗಾಂಧಿಯಾತನಿಂದ ಮುಸಲ ಧರ್ಮದ||
ಬಸಗೆಯನ್ನು ತಿಳಿದುಕೊಂಡ
ಅಸಮ ಭಾರತೇಯರಲ್ಲಿ
ಬಸವಳಿಯುತ 'ಕೂಲಿ' ನಾಮದಿಂದ ತೊಳಲುತ ||೧೨೯||

Gandhiji Sailed to S. Africa on April 1893.

* *ಮೊಂಬ್ಸ = ಮೊಂಬಾಸ ಬಂದರು*

* *ದರ್ಬ = ಡರ್ಬಾನ್*

* *Moxambique* * *Zan Ziba*

ತಮಿಳರನ್ನು 'ಸಾಮಿ' ಯೆಂದು
ದಮನಗೊಳಿಪ ಜನರು ಕರೆದು
ದುಮನ ಗೊಳಿಸಿ ನೋವು ಗೊಳಿಪ ಹೀನ ಪರಿಯನು||
ಸಮತೆಗಾಗಿ ದುಡಿವ ಗಾಂಧಿ
ಗಮನಿಸುತ್ತ ಚಿಂತೆ ತಳೆದ
ಸುಮತಿ ಬಿಡದ ಗಾಂಧಿಯನ್ನು ಜನತೆ ಮೆಚ್ಚಲು ||೧೩೦||

೪. ಪ್ರಿಟೋರಿಯಾದ ಹಾದಿಯಲ್ಲಿ

ಸೇಥ್ ಕೇಸಿಗಾಗಿ ಕಲಿತು
ನೂತನದಲ್ಲಿ 'ಬುಕ್*' ಶಾಸ್ತ್ರ
ನೀತಿಯಿಂದ ಪ್ರಥಮ ದರ್ಜೆ ರೈಲುಯಾನಕೆ||
ಆತುರದಲ್ಲಿ ಹತ್ತುತಿರಲು
ಧೂರ್ತ ಬಿಳಿಯ ಪ್ರಾಧಿಕಾರಿ
ನೀತಗೆಂದ ಇಳಿಯೊ ಕರಿಯ ಪ್ರಥಮ ದರ್ಜೆಗೆ || ೧೩೧||

ಸಲ್ಲತಕ್ಕನಲ್ಲ ನೀನಿ
ಇಲ್ಲಿ ಭಾರತೀಯರೆಲ್ಲ
ನಿಲ್ಲಬಾರದಿದುವೆ ಬಿಳಿಯ ಜನರ ರಾಜ್ಯವು ||
ಇಲ್ಲದಿರಲು ನೂಕಿಸುವೆನು
ಎಲ್ಲ ಸರಂಜಾಮಸಹಿತ
ಒಲ್ಲೆನೆನಲು ಸೈನ್ಯದವನು ತಳ್ಳೆ ಹೊರಗಡೆ ||೧೩೨||

ಚಲಿತ ಮನದೆ ಗಾಂಧಿ ರೈಲ
ನುಳಿದು ಹೊರಗೆ ಬಂದು ಛಳಿಯ
ಥಳವ ಸಹಿಸಿ ನಡುಗಿ ಬಿಡದೆ ಪಯಣವೆಸಗಲು||
ಕಳೆಯೆ ವೇಳ ಮುಂದೆ ಬರುವ
ಥಳದ ರೈಲು ಬರಲು ಹತ್ತಿ
ನಿಲದೆ ಬಂದ ಗಾಂಧಿ ಚಾರ್ಲ್ಸ್‌ಟೌನವಲಯಕೆ ||೧೩೩||

**ಬುಕ್* ಶಾಸ್ತ್ರ= Book Keeping*

ಮುಂದೆ 'ಕೋಚ್' ನಲ್ಲಿ ಪಯಣ
ಅಂದು 'ಸೀಟಿ'ಗಾಗಿ ಕದನ
ಬಂದ ಬಿಳಿಯ ಟೋಪಿಯವನು ಗಾಂಧಿಯವರಿಗೆ||
ಹಂದೆಯಂತೆ ಹೊಡೆದ ಬಡಿದ
ಬಂದುವೆಲ್ಲ ಸಹಿಸಿ ಗಾಂಧಿ
ಮುಂದೆ ಬಂದ ಜೊಹಾನೀಸ ಬರ್ಗ್‌ನಗರಕೆ ||೧೩೪||

ವಸತಿ ಗೃಹವು ಬಿಳಿಯ ಜನಕೆ
ಒಸಗೆಯಾಗಿರಲ್ಕೆ ಗಾಂಧಿ
ಬಸವಳಿಯುತ ಬಂದು ಸೇರ್ದ ಭಾರತೀಯರ ||
ವಸತಿ ಗೃಹದಿನಿಂದ ದಿನಕೆ
ಪಸರಿಸಿರಿವ ರೈಲುಯಾನ
ಜಸದಿ ಕೊಂಡ ಪ್ರಥಮ ದರ್ಜೆ ಟಿಕೇಟೊಂದನು ||೧೩೫||

ಟಿಕೆಟ್ ನೋಡಿ ಬೂಟಿನವನು
ವಿಕಟ ಹಾಸ್ಯದಿಂದ ನುಡಿದ
ಪ್ರಕಟವಾದ ಪ್ರಥಮ ದರ್ಜೆ ಬಿಳಿಯ ಜನರಿಗೆ ||
ಶಕುತರಲ್ಲ 'ಕೂಲಿ' ಜನರು
ಸಕಟಿನಲ್ಲಿ ಬಿಳಿಯರೊಡನೆ
ನಿಕಟವರ್ತಿಯಾಗಿ ಕೂರ ಬಾರದೆನುತಲಿ ||೧೩೬||

ಸೆಟೆದು ನುಡಿಯೆ ಭ್ರಮೆಯ ತೊರೆದು
ತುಟಿಯ ಬಿಚ್ಚಿ ಪಕ್ಕ ಕುಳಿತ
ದಿಟದ ಆಂಗ್ಲನೆಂದ ಗಾಂಧಿ ಪ್ರಥಮ ದರ್ಜೆಯ ||
ಚೀಟಿ ಹೊಂದಿ ಪಯಣಿಸುತಿಹ
ಸಟೆಯಿದಲ್ಲ ಮಾತು ಅವನ
ಧಿಟದಿ ತಳ್ಳ ಬೇಡವೆನಲಿಕಾತ ಹಳಿದನು ||೧೩೭||

'ಕೂಲಿ' ಜನರ ಕೂಡೆ ನಿನಗೆ
ಮೇಳವಿಸುತಿರೆ ಮೈತ್ರಿ ನಿನ್ನ
ಓಳಿಗೆಯಲಿಯಾತ ತೆರಳೆನಾನ ನಿಂದ್ಯನು||
ಕೇಳುತಿದನು ಗಾಂಧಿಕುಳಿತ
ಬಾಳು ಬದುಕ ರೀತಿಯರಿತು
ಏಳುಗಂಟೆ ಪಯಣದಲ್ಲಿ ಪ್ರೀತನಗರಿಗೆ* ||೧೩೮||

೫. ಪ್ರಿಯಟೋರಿಯದಲ್ಲಿ ಅನುಭವಗಳು

ಪ್ರೀತನಗರಿಯಲ್ಲಿ ಜನದ
ರೀತಿನೀತಿ ಗೊತ್ತು ಗುರಿಯ
ನಾತತಿಳಿಯದಿದ್ದ ಗುರುತನರಿಯದಿದ್ದನು॥
ನೀತಿಯುಳ್ಳ ಹೊಸಬನನ್ನು
ಪ್ರೀತಿಯಿಂದ ನೋಡಿ ನೀಗ್ರೊ
ಮಿತ್ರನೊಬ್ಬ ಕರೆದು ತಂದ ವಸತಿವಾಸಕೆ ॥೧೩೯॥

ಮೊಕ್ತಿ *ಯಾರ ಬೇಕರನನು
ಯುಕ್ತಿಯಿಂದ ಕಂಡು ಪತ್ರ
ಸೂಕ್ತಿಯಿಂದ ನೀಡಲಾಗ ಬೇಕರ್ ನುಡಿದನು॥
ಯುಕ್ತ ನಿನಗೆ ಮರಳಿಯೊಂದು
ತಕ್ಕ ವಸತಿ ಗೃಹವತೋರ್ವೆ
ಯುಕ್ತವರಿತು ನೋಡು ನನ್ನನುಚಿತ ಕಾಲದಿ ॥೧೪೦॥

ಬೇಕರ್ ಕ್ರೈಸ್ತ ಪಾದ್ರಿಯಾತ
ನೇಕಗುರಿಯು ಕ್ರೈಸ್ತ ಧರ್ಮ
ಶಾಕಹಾರಿ ಗಾಂಧಿ ಗಾತ ಯೇಸುಕ್ರಿಸ್ತನ॥
ಶೋಕ ರಹಿತ ತತ್ತ್ವವೊರೆದ
ಸಾಕೆನಲ್ಕೆ ಬೈಬ್ಲ್ ಓದೆ
ಏಕ ನಿಷ್ಠೆಯಿಂದಲೆನಲು ಗಾಂಧಿ ಗ್ರಹಿಸಿದ ॥ ೧೪೧॥

ಹಿಂದು ಕ್ರೈಸ್ತ ಮುಸಲಮಾನ
ಚಂದ ಧರ್ಮವೆಲ್ಲ ದೇವ
ನಂದವನ್ನು ಹೊಗಳುತಿರಲು ದೇವನೋರ್ವನು॥
ಮಂದಿ ಹಲವು ನಾಮದಿಂದ
ವಂದ್ಯನನ್ನು ನುತಿಸುತಿರಲು
ಹಿಂದು ಧರ್ಮದಂತರಾಲ ಮೊದಲು ತಿಳಿವೆನು ॥೧೪೨॥

---

* *ಪ್ರೀತನಗರಿ = ಪ್ರಿಟೋರಿಯ*

* *ಮೊಕ್ತಿಯಾರ = Attorney*

ಬಾರ್ಕರ್ ಕೋರೆಗಾಂಧಿ ತೆರಳು
ತಕ್ಕರೆಯಲಿಯಲ್ಲರೊಡನೆ
ತಕ್ಕರೀತಿಯಲ್ಲಿ ಕುಳಿತು ದೇವದೇವನ॥
ಒಕ್ಕೊರಳಿನ ನುತಿಯಗೈದು
ಶಕ್ತನೇಸುವೆಂದು ಪೇಳ್ದ
ಯುಕ್ತ ಕ್ರೈಸ್ತ ಮಾತಕೇಳಿದಿಗಿಲು ಗೊಂಡನು ॥೧೪೩॥

ಹಲವು ಗ್ರಂಥ ಪರಿಚಯಗಳು
ಹಲವು ಕ್ರೈಸ್ತ ಮಿತ್ರರೊಡನೆ
ಸಲಿಗೆ ಮೈತ್ರಿ ಮುಂದುವರಿಯೆ ಪಾಪರಾಶಿಯ॥
ತೊಳೆದು ಶಾಂತಿ ಮನವ ತಾಳೆ
ಸಲಿಗೆಯಿಂದ ಯೇಸು ಕ್ರಿಸ್ತ
ನೊಲುಮೆ ಪಡೆಯೆ ಮೋಕ್ಷ ಸಿದ್ಧವೆಂದು ಪೇಳಲು ॥೧೪೪॥

ಮಿತ್ರನೊಬ್ಬ ಮನೆಗೆ ಕರೆದು
ಅರ್ತಿಯಿಂದ ನೋಡಿ ಗಾಂಧಿ
ಕತ್ತಿನಲ್ಲಿ ಶೋಭಿಸುತಿಹ ತುಳಸಿ ಮಣಿಯನು॥
ಕಿತ್ತು ಬಿಸುಡುವಂಥ ಭ್ರಮೆಯು
ಸತ್ಯವಲ್ಲ ನಿನ್ನ ಮಣಿಯ
ಹೊತ್ತು ನೀನು ಬಳಲ ಬೇಡ ಕ್ರೈಸ್ತನೊಬ್ಬನೆ ॥೧೪೫॥

ಪೊರೆಯುವಾತನೆಂದು ನುಡಿಯೆ
ಇರಲುಬಹುದು ವಿಷ್ಣುಧರ್ಮ
ಪರಮ ಚಿಹ್ನೆ ತೊಟ್ಟಿಹೆ ನಾ ತುಳಿಸಿ ಮಣಿಯನು॥
ಹರಿದು ಬಿಸುಡಲಾರೆ ಶ್ರದ್ಧೆ
ನಿರುತವೊಂದೆ ಧರ್ಮವೆನಲಿ
ಕೊರೆಯುವಾತಕ್ರುದ್ಧನಾದ ಗಾಂಧಿವಾದಕೆ ॥೧೪೬॥

೬. ಭಾರತೀಯರ ಸ್ಥಿತಿಗತಿಗಳು

ಪ್ರೀತನಗರಿಯಲ್ಲಿಯಿದ್ದ
ಭೀತ ಭಾರತೀಯರೆಲ್ಲ
ಸೋತು ಸುಣ್ಣವಾಗಿಯಿರುವ ಪರಿಯ ಪರಿಕಿಸಿ॥
ಖ್ಯಾತ ಗಾಂಧಿಯೊಂದು ಸಭೆಯ
ನಾತು ರದಲಿ ಕರೆದವರ್ಗೆ
ನೀತಿ, ಸತ್ಯ, ಶುಚಿಯ ಪರಿಯ ಬೋಧಿಸುತ್ತಲಿ ॥೧೪೭॥

ವಣಿಕ ವೃತ್ತಿ ಸತ್ಯ ರಹಿತ
ನಣುವಿ ನಷ್ಟುಯಿಲ್ಲ ಮಿಥ್ಯ
ಎಣಿಕೆ ನೋಡೆ ಸತ್ಯಧರ್ಮ ಬರಧು ಸನಿಹಕೆ||
ದಣಿವ ಮಾತಗಾಂಧಿ ನೆನೆದು
ಬಣಕೆ ನುಡಿದ ಸತ್ಯರಹಿತ
ವಣಿಕ ವೃತ್ತಿ ನಿಂದ್ಯ ಧರ್ಮ ಪರಮ ಸಾಧನ ||೧೪೮||

ದೇಹ ಶುಚಿಯುವಲಯ ಶುಚಿಯು
ನೇಹದಿಂದ ಭಾರತೀಯ
ಸಾಹಸಿಗರು ವೊಂದು ಗೂಡಿ ಬಾಳ್ವ ಪರಿಯನು||
ಮೋಹತೊಳೆದು ಬಾಳ್ವ ರೀತಿ
ಸೋಹಿ ಕ್ಷೇಮ ಶಾಂತಿ ಪ್ರೀತಿ
ದ್ರೋಹ ಕುಹಕಗಳನು ದೂರವಿರಿಸಿ ಬಾಳುವ ||೧೪೯||

ಪರಿಯ ನೆಲ್ಲ ಸಭೆಗೆ ಹೇಳಿ
ನೆರೆಯ ಕೂಡೆ ಬಾಳ್ವೆ ಸುಲಭ
ವರಿತು ಕೊಳಲಿ ಕಾಂಗ್ಲ ಭಾಷೆ ಕಲಿವಗತ್ಯವ||
ಬರೆದು ಸಾರಿ ಮಿತ್ರರಿಂಗೆ
ಅರಿತು ಆಂಗ್ಲ ಭಾಷೆ ಕಲಿಸಿ
ಗುರುವು ತಾಣದಿಂದ ಮೆರೆದ ಹಿರಿಯ ಗಾಂಧಿಯು ||೧೫೦||

ಸರುವಯತ್ನ ಮಾಡಿ ಗಾಂಧಿ
ಧರಿಸು ತೊಳ್ಳೆಯುಡುಪು ತೊಟ್ಟ
ಕರಿಯರಿಂಗೆ ಪ್ರಥಮ ದರ್ಜೆ ಟಿಕ್ಕೆಟ್ ಕೊಡಿಸುವ ||
ನುರಿತನಿಯಮ ಜಾರಿಯಲ್ಲಿ
ಬರುವ ತೆರದಿ ನೋಡಿಕೊಂಡ
ಅರಿತ ಜನರುಯಿರುವ ತಾಣ ದುರಿತ ದೂರವು ||೧೫೧||

ಟ್ರಾನ್ಸ್‌ವಾಲ್ ಪ್ರಾಂತ್ಯದಲ್ಲಿ
ಹಿಂಸೆ ಪಡುವ ಭಾರತೀಯ
ವಂಶ ದವರ ದುಸ್ಥಿತಿಗಳ ನರಿತ ಗಾಂಧಿಯು ||
ಸಂಸದೀಯ ನಿಯಮದಂತೆ
ಅಂಶ ದಂಡತೆತ್ತು ಕರಿಯ
ವಂಶದವರು ಟ್ರಾನ್ಸ್ ವಾಲ್ ಹೊಗುವ ನಿಯಮವು ||೧೫೨||

ಜಾಗಪಡೆಯೆ ಮನೆಯ ಕಟ್ಟೆ
ತ್ಯಾಗಿ 'ಕೂಲಿ' ಭಾರತೀಯ
ಹೇಗು ಕಷ್ಟಪಡುವ 'ಓಟು' ಕೊಡುವ ಹಕ್ಕನು ||
ಆಗು ಮಾಡಿ ಕೊಳ್ಳಲಾರ
ಭೋಗರಹಿತನವನು ರಾತ್ರಿ
ಹೋಗಲಾರ ಕಾಲುದಾರಿ ನಡೆಯೆ ದೋಷವು ||೧೫೩||

ಭಟರ ದರ್ಪದೊಳಗೆ ಸಿಲುಕಿ
ಕಟಕಟನೆ ಹಲ್ಲು ಕಿರಿದು
ದಿಟದಿ ನೋವನುಂಡು ಸಹಿಪ ಬಿಳಿಯ ರಾಜ್ಯದಿ||
ಸೆಟೆದುಗಾಂಧಿ ರಾತ್ರಿಯಲ್ಲಿ
ಪುಟನೆಗೆಯುತ ಕಾಲುದಾರಿ
ತಟದಿ ಸಾಗುತಿರಲು ಭಟನುಪಿಡಿದು ಥಳಿಸುತ ||೧೫೪||

ಒದ್ದು ಗಾಂಧಿಯನ್ನು ಬೀದಿ
ಗದ್ದಿದಾಗ ಕ್ಷಮಿಸಿ ಗಾಂಧಿ
ಸಿದ್ಧನಾದ 'ಕೂಲಿ' ಜನರ ಕಷ್ಟವರಿಯಲು||
ಇದ್ದ ತನ್ನ ಸ್ವಾಭಿಮಾನ
ಹೊದ್ದಿ ಭಾರತೀಯ ನಿಲ್ಲಿ
ಯೆದ್ದು ಬಾಳಲಾರ ಕೂಲಿಯಂತೆ ಜೀವಿಸಿ ||೧೫೫||

ಪ್ರೀತ ನಗರಿಯಲ್ಲಿ ವರ್ಷ
ನೀತಿಯಿಂದ ಕಳೆದು ಲೋಕ
ಸಾರ್ಥ ಕೆಲಸ ಮಾಡೆ ಕಲಿತ ಗಾಂಧಿ ಧೀರನು||
ನೀತಿ ಶಾಸ್ತ್ರ ಕರ್ಮಮರ್ಮ
ಸಾತಿಶಯದ ಲರಿತು ಕೊಂಡು
ಭೀತಿ ತೊರೆದು ವಾದ ಮಾಡೆ ಧೈರ್ಯ ತಳೆದನು ||೧೫೬||

ಅಬ್ದುಲ್ ಕೇಸ್ ಜಟಿಲವಿತ್ತು
ತಬ್ಬಿಲಾಗಿ ತಿಳಿಯಲಿತ್ತು
ಶಬ್ದವಿಲ್ಲದಂತೆ ಕಲಿತ ಗಾಂಧಿ ಖಟ್ಲೆಯ
ಶುಭ್ರ ತರ್ಜಮಾನದಿಂದ
ಇಬ್ಬದಿಯಲಿ ಆಂಗ್ಲ ರೂಪ
ಪರ್ಬುವಂತೆ ಗುಜರ ಭಾಷೆಯಿಂದ ಮೂಲದ ||೧೫೭||

---

*ಭಾರತೀಯರು ಟ್ರಾನ್ಸ್‌ವಾಲ್ ಪ್ರವೇಶಿಸಲು 3 ಪೌಂಡ್ ಶುಲ್ಕ ತೆರಬೇಕಾಗಿದ್ದಿತು.

ಕರ್ಚುವೆಚ್ಚವಿಡುವ ಬಗೆಯ*
ನೆಚ್ಚಿನಂದ ಕಲಿತು ಗಾಂಧಿ
ಅಚ್ಚತನದಿ ಕಕ್ಷಿಗಾರರಿಂಗೆ ಒಳಿತನು||
ನೆಚ್ಚಿನಿಂದ ಬಗೆಯಲಾಶೆ
ಯಿಚ್ಛೆಯಿಂದ ಖಟ್ಲೆವಿವರ
ಸ್ವಚ್ಛವಾಗಿ ಗಾಂಧಿ ತಿಳಿದ ನಾದಿ ಮೂಲದೆ ||೧೫೮||

ವಿಷಯ ವರಿತ ಸತ್ಯ ತಿಳಿದು
ವಿಷದ ಗೊಳಿಸಿ ನ್ಯಾಯ ಶಾಸ್ತ್ರ
ನಿಷಕವೆಲ್ಲ ಹಸ್ತ ಮಲಕವೆಂಬುದರಿಯುತ||
ನಿಶಿತವಾಗಿ ತಿಳಿದು ಗಾಂಧಿ
ವಿಷಯ ಖಟ್ಲೆ ಮುಂದುವರಿಯೆ
ವಿಷಮಿಸುವುದು ಫಲವು ಹಾದಿ ರೋಧಿಯುಭಯರೆ ||೧೫೯||

ಕಾಲಕರ್ಚು ಬಹಳ ಬೇಕು
ಸೋಲುವವನು ತೆರಲುಬೇಕು
ಹೇಳಲಿಕ್ಕೆ ಸಾಧ್ಯವಿಲ್ಲಸೋಲುಗೆಲುವನು||
ಏಳಿಗೆಯನು ನೆನೆದು ಗಾಂಧಿ
ಮೇಳವಿಸಿದ ಖಟ್ಲೆ ಬಿಡಿಸೆ
ಆಳ ತಿಳಿದ ಮಧ್ಯವರ್ತಿಯನ್ನು ನೇಮಿಸಿ ||೧೬೦||

ಉಭಯ ಕಡೆಯ ಹೇಳಿಕೆಗಳ
ಸಭಯ ರೀತಿಯಲ್ಲಿ ತಿಳಿದು
ಅಭಯವಿತ್ತ ಮಧ್ಯವರ್ತಿದಾದ ಸಂಸ್ಥೆಗೆ||
ತ್ಯಾಬ ಶೇಟನೊಪ್ಪಿಕೊಂಡ
ಶುಭದಿ ಖಟ್ಲೆ ಮಾತಿನಿಂದ
ವಿಭವಗೊಳಿಸಿ ಗಾಂಧಿ ಮೆರೆದ ಲೋಕಮೂರಲಿ ||೧೬೧||

ಹೃದಯವಂತರಿಗೆ ಖಟ್ಲೆ
ಒದಗೆ ಹೃದಯವರಿಯು ತುಭಯ
ಸದುಗೆಯಿಂದ ಬಿಡಿಸಬಹುದು ಜಟಿಲ ಖಟ್ಲೆಯ||
ಇದಕೆ ಖರ್ಚು ಕಾಲ ಕಡಮೆ
ಮೃದುಳ ಹೃದಯ ಮಾತು ಸಾಕು
ಅದುವೆ ರೀತಿ ದಾರಿಯೆಂದು ತಿಳಿದ ಗಾಂಧಿಯು ||೧೬೨||

೭. ಧಾರ್ಮಿಕ ಚಿಂತನೆ

ಬೇಕರೆಂಬ ಕ್ರೈಸ್ತ ಪಾದ್ರಿ
ನೂಕಿ ಕರೆದ ಗಾಂಧಿಯನ್ನು
ಏಕ ನಿಷ್ಠೆ ಕ್ರೈಸ್ತನಿಂಗೆ ಮೋಕ್ಷ ತರುವುದು ||
ಸಾಕು ಮಾಡು ತನ್ನ ಧರ್ಮ
ಲೋಕಮೋಕ್ಷಕಾಗಿ ಶಿಲುಬೆ
ಗೇಕ ಮನದೊಳೇರ್ದ ಯೇಸುವನ್ನು ನಂಬಲು ||೧೬೩||

ಪಾಪಹೋಗಿ ಪುಣ್ಯ ಬಂದು
ಪಾಪಗ್ರಸ್ತ ಪಾಪಿ ಜನಕೆ
ತಾಪಗ್ರಸ್ತ ನರಕಕೊಟ್ಟು ಪುಣ್ಯ ಜನರಿಗೆ ||
ಔಪಚಾರ ದೇವರಾಜ್ಯ
ಸೌಪಚಾರದಿಂದ ಕೊಡುವೆ
ತಾಪಕಳೆಯೆ ಕ್ರೈಸ್ತ ಧರ್ಮ ಪಡೆದು ಸುಖಿಸೆಲೊ ||೧೬೪||

ಎಂದ ಮಾತ ಕೇಳಿ ಗಾಂಧಿ
ಹಿಂದು ಮುಂದು ಯೋಚಿಸುತ್ತ
ಬಂದ ಖಚಿತ ನಿರ್ಣಯಕ್ಕೆ ಆತ್ಮವಾಣಿಯ||
ಮುಂದೆ ಬರದರನ್ಯ ಧರ್ಮ
ಇಂದು ಯೇಸು ದೇವ ಪುತ್ರ
ಯೆಂದ ರಖಿಲ ಮನುಜರೆಲ್ಲ ದೇವ ಪುತ್ರರು ||೧೬೫||

ಜಗದ ಪಾಪ ಕಳೆಯೆ ಯೇಸು
ನೊಗದ ಭಾರ ಶಿಲುಬೆ ಭುಜದಿ
ಅಗಲ ದೇಹ ವಮರವಾದ ಲೋಕವಂದ್ಯನು||
ಮಿಗುವ ಪಾಪಕಳೆವುದೆಂತು
ಬಗೆಬಗೆಯಲಿ ಮನುಜಕುಲಕೆ
ಹೊಗುವ ದಾರಿಯೇನು ಸಗ್ಗ ಸುಲಭ ಸಾಧ್ಯವೆ ||೧೬೬||

---

*Oteyb Sheth = ಪ್ರತಿವಾದಿ

ಶೇಖ್ ಹೇಳುತಿದ್ದ ಮುಸಲ
ಖ್ಯಾತಿಯನ್ನು ಕೇಳಿ ಗಾಂಧಿ
ನೀತಿಯಿಂದ ಲೋದಿ ತಿಳಿದ ನಿಸ್ಲಂ ಧರ್ಮವ ||
ಜಾತಿ ಪಂಥ ಬಹಳವಿರುವ
ಜಾತಿದಳಿತ ವರ್ಗದವರ
ಮಾತಿನಿಂದ ಕೃತಿಗಳಿಂದ ದೂರವಿಡುತಿಹ ||೧೬೭||

ಹಿಂದು ಧರ್ಮದಲ್ಲಿ ದೋಷ
ಹಿಂದಿನಿಂದ ಬಂದಿಹುದನು
ನಿಂದು ಗಾಂಧಿ ನೋಡಿ ಧರ್ಮಮಥನವೆಸಗಿದ||
ಅಂದು ಹಿತವ ಪೇಳ್ದ ರಾಯ
ಚಂದಭಾಯಿ ಹಿಂದು ಧರ್ಮ
ವೃಂದ ಶಾಸ್ತ್ರಗಳನು ಮಥಿಸಿ ನೋಡುವಿನುತನೆ ||೧೬೮||

ಆತ್ಮ ತತ್ವದಲ್ಲಿ ಹಿಂದು
ಸತ್ವಶಾಲಿ ದರ್ಮವಹುದು
ಆತ್ಮವಿದ್ಯೆ ಯೋಗ ಕಲಿಕೆ ಪ್ರಥಮ ಪಂಕ್ತಿಯು||
ಹೊತ್ತ ದೇಹ ನಶ್ವರತೆಯ
ಮತ್ತೆ 'ಆತ್ಮ' ಶಾಶ್ವತತೆಯ
ಬಿತ್ತರಿಸುವ ತತ್ವವೆಲ್ಲ ಹಿಂದುಧರ್ಮದಿ ||೧೬೯||

ಇಹುದು ವಿನುತ ಗಾಂಧಿ ತಿಳಿದು
ಬಹಳ ಶಾಸ್ತ್ರ ಗ್ರಂಥವೋದಿ
ಮಹಿಮೆಯರಿತು ವೇದ ಶಾಸ್ತ್ರ ತತ್ವ ಗ್ರಂಥವ||
ಅಹುದುಯೆನುತ ಕೊರಾನ್ ಬೈಬ್ಲ್
ಮಹತು ಗ್ರಂಥವೆಲ್ಲ ವೋದಿ
ಮಹಿಯ ಧರ್ಮಸಾರ ತಿಳಿದ ಗಾಂಧಿ ಮಹಿಮನು ||೧೭೦||

ಧರ್ಮ ಹಲವು ದೇವನೊಬ್ಬ
ಮರ್ಮ ವರಿತ ಗಾಂಧಿ ಮನುಜ
ಧರ್ಮವೊಂದೆ ದೇವಸುತರು ಮನುಜರೆಲ್ಲರು||
ಕರ್ಮ ನಿಷ್ಠೆಯಿಂದ ಭಕ್ತಿ
ಪೊರ್ಮಿಬರುತ ಜ್ಞಾನ ಸುಧೆಯ
ನಿರ್ಮಲಾಂತಃಕರಣ ವೊಂದೇ ಧರ್ಮಸಾರವು ||೧೭೧||

೮. ಮನುಜನಾಟ ದೇವಮಾಟ

ಕೇಸು ಮುಗಿದು ಗಾಂಧಿ ಹೊರಡೆ
ಆಶೆಪಡುತ ಮಾತೃದೇಶ
ಈಶನಾಟ ಬೇರೆಯಿತ್ತು ದೈವ ಕೃಪೆಯಲಿ ||
ದೇಶಬಿಟ್ಟು, ಹೋಗುವವಗೆ
ತೋಷದಿಂದ ಜನವಿದಾಯ
ಭೇಷೆನುತ್ತ ಕೊಡುವ ವೇಳೆ ದೇವರಾಟವು ||೧೭೨||

ಬೇರೆಯಿತ್ತು ಆಫ್ರಿಕದಲಿ
ದಾರಿತೋರದಿರುವ ಕರಿಯ
ಭಾರತೀಯರಿಂಗೆ 'ವೋಟ್' ಹಕ್ಕು ಕೊಡದಿಹ ||
ಕ್ರೂರ ಶಾಸ್ತಿ ಜಾರಿ ಬರುವ
ದಾರುಣವನು ನೋಡಿ ಗಾಂಧಿ
ಕಾರಣವನು ತಿಳಿದು ಮಿತ್ರರೊಡನೆ ಯೋಚಿಸಿ ||೧೭೩||

ಭಾರತೀಯ ಜನಕೆ ಮುಂದೆ
ದಾರಿತೋರಿ 'ಮತ'ದ ಹಕ್ಕು
ಸಾರಿ ಕೊಡಿಸುವಂಥ ನಿರ್ಧರಾಂಗ ತತ್ವವ ||
ಭಾರಿಜನದ ಮುಂದೆಯಿಡುತ
ನೇರನಂಗೀಕಾರ ಪಡೆದ
ಶೂರನಿಂಗೆಯೊಕ್ಕೊರಳಿನ ಭಾರಿ ಬೆಂಬಲ ||೧೭೪||

ಮಹಾತ್ಮ ಗಾಂಧಿಯವರು ಆಕಾಲದಲ್ಲಿ ಓದಿದ ಧಾರ್ಮಿಕ ಗ್ರಂಥಗಳು

ಇಸ್ಲಾಂ ಧರ್ಮ	*ಕ್ರಿಶ್ಚಿಯನ್ ಧರ್ಮ*	*ಹಿಂದೂ ಧರ್ಮ*
ಕೊರಾನ್	*1. The Perfect way by Edward Maitland*	*ಪಂಚೀಕರಣ*
	2. The New interpretation of Bible	*ಮಣಿ ರತ್ನಮಾಲ*
	The Kingdom of Heaven is within you	*ಮುಮುಕ್ಷು ಪ್ರಕರಣ (ಯೋಗ ವಾಸಿಷ್ಠ)*
		ಷಡ್ದರ್ಶನ ಸಮುಚ್ಚಯ
		ಇತ್ಯಾದಿ

ಎಲ್ಲ ದೊರೆಯ ಮಾತೃದೇಶ
ಕಿಲ್ಲ ಬೇಗ ಪಯಣವೆಂದು
ಮಲ್ಲಗಾಂಧಿ ನಿರ್ಧರಿಸುತ ಹಿಂದು ಮುಂದಿನ||
ಬಲ್ಲ ನಿಯಮಗಳನು ಪಠಿಸು
ತೆಲರೊಲುಮೆ ಬಲುಮೆ ಪಡೆದು
ಸಲ್ಲಲಿತದ ಶಾಂತಿಸಮರಕನುವ ಕಲ್ಪಿಸೆ ||೧೭೫||

ಸಭೆಯ ನಡೆಸಿ ಬಗೆದು ಮುದದಿ
ಉಭಯರೆಲ್ಲ ಕುಳಿತು ಕಲೆತು
ಶುಭದ ನಿರ್ಧರಂಗಳನ್ನು ತೆಗೆದುಕೊಳ್ಳುತ||
ವಿಭವದಿಂದ ಗಾಂಧಿ ಬರೆದ
ಅಭಯ ದರ್ಜಿಯನ್ನು ಬಿಡದೆ
ಸೊಬಗಿನಿಂದ ಮೇಲು ಸಭೆಗೆ ಕಳಿಸಿಕೊಟ್ಟರು ||೧೭೬||

ನೋಡಿ ಕೆಲರುಗುಸುಗುಸೆಂದು
ಮಾಡಿ ನಕಲಿ ನಕ್ಕು ತುಕ್ಕಿ
ಬೇಡವೆಂದು ತೊರೆದು ಮತದ ದಾನ ಶಾಸನ||
ಆಡಿಪಾಸು ಮಾಡಿಬಿಟ್ಟು
ಬೇಡಿಬಂದ 'ಕೂಲಿ' ಜನಕೆ
ಬೇಡ ಮತದ ಹಕ್ಕುಯೆಂದು ನೀಡಿ ನಿರ್ಣಯ ||೧೭೭||

ಆದರೇನು ಗಾಂಧಿ ದುಡಿದ
ಭೇದಭಾವವಳಿಪ ಕಾರ್ಯ
ಸಾಧಿಸಿತ್ತು ವಲವಗಾಂಧಿ ನೀತಿವಂತಗೆ||
ಬಾಧೆ ಪಡದೆ ನಿಲ್ಲಿ ನೀವು
ಆದ ತನುಮನದ ಸಹಾಯ
ಮೋದದಿಂದ ಕೊಡುವೆವೆನುತಲಭಯವಿತ್ತರು ||೧೭೮||

ಗಾಂಧಿಯನ್ನು ಆರಿಸಲ್ಕೆ
ಅಂದು ಗಾಂಧಿವೊಪ್ಪ ತದಕೆ
ಅಂದವಾದ ವಸತಿ ಹುಡುಕಿನಟ್ಟದೇಶದಿ||
ದೊಂದುಗೂಡಿ ಬಂದು ಜನರು
ನಿಂದುವೊಲುಮೆ ತೋರಿಕೊಟ್ಟ
ವಂದನೀಯ ನೀತಿಯಿಂದ ಸಿದ್ಧಗೊಂಡರು ||೧೭೯||

೯. ವರ್ಣ ದ್ವೇಷ

ನ್ಯಾಯ ದೇವಿತ್ರಾಸು ಹಿಡಿದು
ಗೇಯದಿಂದನಿಂತ ಕುರುಡಿ
ಕಾಯಸೋಡಿ ನ್ಯಾಯ ಪೇಳಬಾರದೆನ್ನುವ॥
ಧ್ಯೇಯ ಪ್ರಕಟಿಸುತ್ತಲಿವಳು
ನ್ಯಾಯ ಪೀಠ ಚಿಹ್ನೆಯಾಗಿ
ಕಾಯುತಿಹಳು ನಿರುತ ಸಾಧು ಜನರ ನಿವಹವ ||೧೮೦||

ಆದೊಡೇನುವರ್ಣ ಭೇದ
ಬಾದಿಸುತ್ತಲಿರುವ ಜನರ
ಸೋದರತೆಯ ಬಾಳ್ವೆಯೆಂತುಯೆಂದು ಹಲುಬುತ॥
ಆದುದಾಗಲೆನುತ ಲುಚ್ಚ
ಮಾದ ಕೋರ್ಟಿನಲ್ಲಿ ಯರ್ಜಿ
ಸೀದಕೊಟ್ಟ ನಿಪುಣ ಗಾಂಧಿ ವಕಿಲ ವೃತ್ತಿಗೆ ||೧೮೧||

ಸಕಲ ಪತ್ರ ದಾಖ್ಲೆಸಹಿತ
ವಕಿಲವೃತ್ತಿಗಾಗಿ ಮನವಿ
ನಿಖಿಲವಂದ್ಯಗಾಂಧಿಸಲಿಸಿ ನೋಡುತಿದ್ದನು॥
ವಕಿಲ ಸಂಘ ಗಾಂಧಿಯಿತ್ತ
ಯುಕುತ ಮನವಿಯನ್ನು ನೋಡಿ
ನಿಖರ *ಮೂಲಕಾಂಗ್ಲ ಪತ್ರವಿಲ್ಲವೆನುತಲಿ ||೧೮೨||

ತಡೆಯ ಹಿಡಿಯೆ ಗಾಂಧಿ ತೆರಳು
ತೊಡೆದು ತರುತನಿಖರಪತ್ರ
ಬಿಡದ ಲುಚ್ಚ ನ್ಯಾಯ ನಿಲಯದಲ್ಲಿ ಯರ್ಜಿಯ॥
ಕಡೆಗು ಸಲಿಸೆ ನ್ಯಾಯಧೀಶ
ತಡವರಿಸದೆ ನೋಡುತೆಲ್ಲ
ತೊಡಗಿ ಲಾಯರಾಗಿ ಕೆಲಸ ಕನುವ ಕೊಟ್ಟನು ||೧೮೩||

ಲಾಯರಾಗಿವಚನ ತೊಟ್ಟು
ನ್ಯಾಯಶಾಸ್ತ್ರವರಿತ ಗಾಂಧಿ
ದ್ಯೇಯವಾದಿಯಾಗಿ ಮೆರೆದ ನ್ಯಾಯ ಮೂರ್ತಿಯ ॥
ಶ್ರೇಯ ನೀತಿಗಾಗಿ ತೆಗೆದ
ಶ್ರೀಯ ತಲೆಯ ಪೇಟವನ್ನು
ಲಾಯರಾಗಿ ಕೋರ್ಟು ನಿಯಮ ಪಾಲನೇಯೊಳು ||೧೮೪||

** Original English Certificate*

ಸಾರ್ವಜನಿಕ ಕ್ಷೇತ್ರದಲ್ಲಿ
ಪರ್ವಿಹಾನಿಗೊಳಿಸುತಿರುವ
ಸರ್ವನಿಯಮಗಳನು ಮುರಿದು ಭರತ ಜನರಿಗೆ||
ಊರ್ವಿಯಲ್ಲಿ ಸಮದ ಹಕ್ಕು
ನಿರ್ವಹಿಸಲು ಯೋಚಿಸುತ್ತ
ಸರ್ವ ಮಿತ್ರರೊಡನೆ ಸೇರಿ ಸಂಸ್ಥೆ ರೂಪಿಸಿ ||೧೮೫||

ನಟಲ ಭಾರತೀಯ ಕಾಂಗ್ರೆಸ್
ಸೆಟೆದುನಿಲಲು ಸಂಸ್ಥೆಯಾಗಿ
ಮಿಟುಕೆ ವೆಚ್ಚಕಾಗಿಯಲ್ಲಿ ಚಂದತೆತ್ತರು||
ದಿಟದೆಪೌಂಡುಚಂದ ಸಲಿಸಿ
ಜಟಿಲವಲ್ಲದಂತೆ ನೀತಿ
ಪುಟದ ಸಂವಿಧಾನರಚಿಸಿ ಸಂಘ ಶಕ್ತಿಗೆ ||೧೮೬||

ಹೊಸದು ರೂಪಕೊಟ್ಟು ಮುದದಿ
ಮಸೆದು ಶಕ್ತಿಯುಕ್ತಿಯೆಲ್ಲಿ
ಅಸಮವೀರಗಾಂಧಿ ದುಡಿದ ಕಾರ್ಯದರ್ಶಿಯ||
ಪೊಸದು ಕೆಲಸದಲ್ಲಿ ದಾಖ್ಲೆ
ಕಾಸುಹಣಕೆಯಿಟ್ಟು ನಿಖರ
ದೇಶಿಜನರ ಕಷ್ಟ ಸುಖವ ಹಾಸು ಹೊಣೆಸುತ ||೧೮೭||

ಯುವಕರೆಲ್ಲರೊಂದು ಗೂಡಿ
ಸವೆಯುತಿದ್ದ ಕಾಲವನ್ನು
ನವನವೀನ ರಚನ ಕಾರ್ಯದಲ್ಲಿ ಸವೆಯಲು||
ತವಕದಿಂದ ಲನುವು ದೊರೆಯೆ
ಯುವಕ ಗಾಂಧಿ ಮನವಿ ರಚಿಸಿ
ನಿವಹಕೆಲ್ಲ ಹಂಚಿಕೊಟ್ಟು ಭಾರತೀಯರ ||೧೮೮||

ವಕಿಲ ವೃತ್ತಿ ನಡೆಯುತಿತ್ತು
ನಿಕಟ ಕಾಂಗ್ರೆ(ಸ್) ನಡೆಯುತಿತ್ತು
ವಿಕಟ ರೂಪದಿಂದ ಬಂದ ತಮಿಳನೋರ್ವನು||
ಅಕಟ ಹಲ್ಲುಮುರಿದು ರಕ್ತ
ಒಕಟುತಿತ್ತು ಬಟ್ಟೆ ಚಿಂದಿ
ಪ್ರಕಟಗೊಂಡ ತಲೆಯಲರಿವೆ ಕೈಯಲಿದ್ದಿತು ||೧೮೯||

ಒಪ್ಪಿ ಬರೆದು ಕೊಟ್ಟು ಬಂದ
ಕಪ್ಪು ಕೂಲಿ ಬಿಳಿಯ ಧನಿಯ
ಉಪ್ಪಿಗಾಗಿ ದುಡಿಯುತಿದ್ದ ಸುಬ್ರಮಣ್ಯನು||
ತಪ್ಪಿ ದೊರೆಯು ಸಿಟ್ಟುಗೊಂಡು
ದರ್ಪದಿಂದ ಹೊಡೆಯಲಾತ
ಶೂರ್ಪ ಹಲ್ಲು ಮುರಿದು ರಕ್ತ ಸುರಿಸುತಿದ್ದನು ||೯೦||

ಗಾಂಧಿ ಬಳಿಗೆ ಬರಲು ನೋಡಿ
ಗಂಧ ತಿಳಿದ ಗಾಂಧಿ ಬಿಳಿಯ
ನಿಂದ ಪಡೆದ ಗಾಯ ರಕ್ತ ಹಲ್ಲಮುರಿತವ||
ನೊಂದು ವೈದ್ಯನಲ್ಲಿ ಗವನ
ಬೆಂದ ಹೃದಯದಿಂದಲ್ಯೊಯ್ದು
ಚಂದ ಮದ್ದು ಕೊಡಿಸಿ ಪಡೆದ ದೃಡದ ಪತ್ರವ ||೯೧||

ಕೋರ್ಟಿಗೊಯ್ಯೆ ನ್ಯಾಯ ಮೂರ್ತಿ
ಬಟ್ಟೆ ಹಲ್ಲು ಪತ್ರ ನೋಡಿ
ಅಟ್ಟಿ ದನಿಗೆ ಕರೆಯ ಕಳಿಸಿಕೇಸ್ವಿಚಾರಿಸಿ||
ಒಟ್ಟಿನಲ್ಲಿ ಶಿಕ್ಷೆ ಕೊಟ್ಟ
ದಿಟ್ಟನಿಂಗೆ ಶಾಸ್ತಿಯಾಯ್ತು
ಕೆಟ್ಟನಿಂದ ಕೂಲಿ ಬೇರೆಯೊಬ್ಬ ದನಿಯಲಿ ||೯೨||

ಗಾಂಧಿತೋರ್ದ ನ್ಯಾಯನಿಷ್ಠೆ
ಯಿಂದ ಕೂಲಿಗಾಗಲೊಲುಮೆ
ಬಂದಿತೆಲ್ಲ ಪತ್ರಿಕೆಯಲಿ ಸುದ್ದಿ ಹಬ್ಬಿತು||
ಗಾಂಧಿ ಕೂಲಿ ಜನರ ಭಾಗ್ಯ
ಬಂಧುವೆಂದು ಜನತೆ ಹೊಗಳಿ
ಸಾಂದ್ರ ಸತ್ಯವಾದಿಯನ್ನು ಜಗಕೆ ತೋರಿತು ||೯೩||

೧೦. ಮೂರು ಪೌಂಡು ತೆರಿಗೆ

ಬಿಳಿಯ ಜನರು ಕಬ್ಬು ಬೆಳಸಿ
ಬಳಸಿಕೊಳಲು ಕೂಲಿ ಜನರ
ಒಳಗೆ ಕರೆಸಿಕೊಂಡು ನಿಲಿಸಿ ದುಡಿಸುತಿದ್ದರು||
ಕಳೆಯಲೈದು ವರ್ಷವವರು
ನೆಲಸಬಹುದುನಟಲದಲ್ಲಿ
ಒಲಿಸಿ ಹಲವು ಶರತಿನಿಂದ ಕರೆದು ತಂದಿಹೆ ||೯೪||

ಹಿಂದು ದೇಶ ಜನರು ದುಡಿದು
ಹೊಂದು ತಾಸ್ತಿ ಮನೆಯ ಕಟ್ಟು
ತಂದ ಕೃಷಿಯ ಮಾಡಿ ಬೆಳೆಸಿ ಕಾಯಿ ಪಲ್ಯವ||
ವೃಂದ ಸಹಿತ ವಾಸಿಸುತಿರೆ
ಬಂದರಲ್ಲಿ ಭಾರತೀಯ
ಮಂದಿ ವಣಿಕ ಧನಿಕರೆಲ್ಲ ಸೊಬಗ ಕಾಣಲು ||೧೯೫||

ಪ್ರಗತಿ ನೋಡಿ ಸಹಿಸದಾಗ
ಬಗೆಯ ಹಾನಿ ತೆರಿಗೆ ಹೊರಿಸಿ
ಮಗುಳು ಭಾರತೀಯರಿಂಗೆ 'ಓಟು' ಹಕ್ಕನು||
ತೆಗೆದು ಹಾಕಿ ಶಾಸನವನು
ಬಿಗಿದು ಮಾಡಿ ಹೊಟೆಕಿಚ್ಚ
ಸಿಗಿದು ತೋರಿಸುತ್ತ ಮೆರೆದ ಬಿಳಿಯರಾಳಿಕೆ ||೧೯೬||

ಬಡವ ಭಾರತೀಯರೆಲ್ಲ
ಒಡಲಿಗಾಗಿ ದುಡಿಯುತಿದ್ದು
ಬಿಡದೆ ಬಂದಲಾಬದಿಂದ ತೃಪ್ತಿ ಪಡೆವರು||
ದುಡಿಮೆಯೊಂದೆಯವರ ಬದುಕು
ಸಡಿಲ ಶುಚಿಯು ಸುತ್ತುಮುತ್ತು
ಪಡೆದ ಧರ್ಮ ಬೇರೆಯೆನಲಿಕಾಳ್ವರರಸರು ||೧೯೭||

ವಿಷದ ಬೀಜ ಬಿತ್ತಲಾಗಿ
ಅಸಮ ಕೂಲಿ ಜನರ ಮೇಲೆ
ಕಸುನಿನಿಂದ ಮೂರು ಪೌಂಡು ತೆರಿಗೆ ಹೇರುತ ||
ಅಸ್ತುವೆನೆದ ಭಾರತೀಯ
ರಾಸ್ತಿಯಿಂದ ಬಿಡಿಸಿ ಮಾತ್ರ
ದೇಶಕೀಗ ತೆರಳಿಯೆಂದು ಕಳಿಸುತಿದ್ದರು ||೧೯೮||

ಸತ್ಯವಾದಿ ಗಾಂಧಿ ಮಾರ್ಗ
ದುತ್ತ ಮಿಕೆಯ ಫಲದಿಸೆಣಸೆ
ಹತ್ತು ವರ್ಷಕಳೆದ ಮೇಲೆ ಮೂರು ಪೌಂಡಿನ||
ಕತ್ತು ಹಿಡಿವ ತೆರಿಗೆ ಹೋಯ್ತು
ಸತ್ಯಕಿಹುದೆ ಸೋಲು ಕೊನೆಗೆ
ಮಿಥ್ಯಸೋತು ಸತ್ಯಗೆದ್ದ ನೀತಿ ಸಮರದಿ ||೧೯೯||

೧೧. ಧರ್ಮ ಜಿಜ್ಞಾಸೆ

ಕ್ರೈಸ್ತಮಿತ್ರರೊಲುಮೆಯಿತ್ತು
ಸ್ವಸ್ತಿ ಹಿಂದು ಧರ್ಮದೊಸಗೆ
ಮಸ್ತಕದಲಿ ತುಂಬಿಯಿತ್ತು ಮುಸಲಧರ್ಮದ॥
ಶಿಸ್ತು ಶೀಲ ಮೂಡಿಯಿತ್ತು
ವಿಸ್ತರದರಿ ಪಾರ್ಸಿ ಧರ್ಮ
ದಸ್ತುವೆನಲು ಸರ್ವಧರ್ಮತಿರುಳ ತಿಳಿದನು ॥೨೦೦॥

ವಿಶ್ವ ಧರ್ಮದಾಳ ತಿಳಿದು
ಸುಶ್ರುತಿಗಳ ಮರ್ಮ ತಿಳಿದು
ವಿಸ್ತೃತದಲಿ ಯೋಗ ಮಾರ್ಗದಷ್ಟ ಹೃದಯವ॥
ಉಸ್ತುವಾರಿಯಿಂದ ತಿಳಿದು
ವಿಸ್ತರದಲಿ ಬೌದ್ಧಧರ್ಮ
ವಸ್ತುವನ್ನು ಮಥಿಸಿ ತುಲನೆ ಮಾಡಿ ನೋಡಿದ ॥ ೨೦೧॥

ಮಿತ್ರನೊಬ್ಬನಿಂದ ಚರ್ಚು
ಹತ್ತಿ ಪ್ರಾರ್ಥನೆಯಲಿ ಸೇರು
ತುತ್ತಮಿಕೆಯ ನರಿತು ಕೊಂಡ ಧರ್ಮ ತತ್ವವ॥
ಮತ್ತೆವೋದಿ ಟಾಲ್‌ಸ್ಟಾಯಿ
ಬಿತ್ತರದಲಿ ಸೂಪನಿಷದ
ತತ್ವವೆಲ್ಲಿ ತಿಳಿದ ಗಾಂಧಿ ಮನುಜ ಧರ್ಮವ ॥೨೦೨॥

ಚಿಕ್ಕಮನೆಯ ಮಾಡಿಕೊಂಡು
ಚೊಕ್ಕ ಬಾಳ ನಡೆಸುತಿರಲು
ಸಿಕ್ಕಿ ತೊಂದು ಕಹಿಯು ಗಾಂಧಿ ದಿಗಿಲುಗೊಳ್ಳದೆ॥
ಉಕ್ಕಿ ಬಂದ ವೇಗ ತಡೆದು
ಸೊಕ್ಕಿ ಬಂದ ಕಾಮುಕರಿಗೆ
ತಕ್ಕ ಪಾಠ ಕಲಿಸಿ ಗಾಂಧಿ ಮೆರೆದು ನಿಂತನು ॥೨೦೩॥

೧೨. ಮರಳಿ ಮಾತೃ ಭೂಮಿಗೆ

ಮೂರು ವರ್ಷದಲ್ಲಿ ಗಾಂಧಿ
ಸೇರುತಲ್ಲಿ ಜನರ ಕಷ್ಟ
ಪಾರುಮಾಡಿ ಭಾರತಕ್ಕೆ ಹೊರಟವಿಭವದಿ||
ನೀರಮೇಲೆ ಹಡಗು ಪಯಣ
ಸಾರುತಿರಲು ಗಾಂಧಿ ಕಲಿತ
ನೋರಣದಲಿ ತಮಿಳು 'ಉರ್ದು' ತೆಲುಗು ಭಾಷೆಯ ||೨೦೪||

ಇಪ್ಪತೊಂದು ದಿನದ ಪಯಣ
ಉಪ್ಪು ನೀರ ಮೇಲೆ ತೊಡಗಿ
ಕ್ಷಿಪ್ರದಿಂದ ಕಾಳಿಘಾಟ್‌ನಗರ * ಸೇರುತ ||
ಒಪ್ಪಿ ರೈಲು ಪಯಣದಲ್ಲಿ
ಬಪ್ಪ ಭರದಿಗಾಂಧಿ ಮುಂದೆ
ಸ್ವಪ್ನ ಲೋಕದಿವ್ಯ ಗಂಗಯಮುನ ಸಂಗಮ ||೨೦೫||

ಸಾರಸತ್ವ ದೇವಿಯಲ್ಲಿ
ಸೇರಿಯಾಗೆ ಸುಪ್ರಯಾಗ
ಭಾರತೀಯರಲ್ಲಿ ಮಿಂದು ಪುಣ್ಯ ಪಡೆವರು||
ಮೀರಿ ಭಕ್ತಿ ಗಾಂಧಿ ಮುಳುಗಿ
ಆರ್ಯ ಧರ್ಮ ಪಾಲನೆಯಲಿ
ತೋರಿ ಭಕ್ತಿ ಧನ್ಯನಾದ ಶ್ರೀತ್ರಿವೇಣಿಲಿ ||೨೦೬||

ಮುಂಬದೇವಿನಗರಕ್ಕಾಗಿ
ತುಂಬುಹೃದಯ ಬಂದ ನಿಜದ
ಲಿಂಬುದೋರ್ವ ಮಾತೃಭೂಮಿ ರಾಜಕೋಟೆಗೆ||
ಲಂಬಿಸದೆಯ ಕಾಲವನ್ನು
ಹಂಬಲಿಸುತಲಾಫ್ರಿಕದಲಿ
ತುಂಬಬೇನೆ ಪಡುವ ಭಾರತೀಯ ಜನರಿಗೆ ||೨೦೭||

---

* ಕಲ್ಕತ್ತ

ಅಂದು ನೆರವು ನೀಡಲಿಕ್ಕೆ
ಚಂದದಿಂದ ಬರೆದು ವಿಷಯ
ಒಂದುಗೂಡಿಸುತ್ತ ಕಿರಿಯ ಪುಸ್ತಿಕೇಯನು||
ಅಂದು ಹಸಿರಿನಾವರಣದಿ
ನಿಂದು ಮುದ್ರಿಸುತ್ತ ಜನಕೆ
ವೃಂದಸೋವ ನರಿಸಿ ಮೆರೆದ ಗಾಂಧಿ ತವಕದಿ ||೨೦೮||

ಪ್ಲೇಗು ರೋಗ ಮುಂಬಯಿಯಲಿ
ಹೇಗೋ ಕಾಣಿಸುತ್ತ ಜನರ
ವೇಗದಿಂದಯಾತನೆಯಲಿ ನರಳಿಸುತ್ತಿರೆ ||
ಬೇಗ ಜನಸಹಾಯ ಪಡೆದು
ಹೋಗಿ ಮನೆಗೆ ಮನೆಗೆ ಪೂರ್ತ
ತ್ಯಾಗವೀರ ಬೋಧಿಸಿದನು ಶುಚಿಯ ಮಹಿಮೆಯ ||೨೦೯||

ಬ್ರಿಟಿಷರೆನುವ ರಾಷ್ಟ್ರಗೀತೆ
ಪುಟಿದು ಗಾಂಧಿ ಹಾಡುತಿದ್ದ
ಕುಟುಕಿ ಬರುವ ಹಿಂಸತತ್ವ ಸಹಿಸದಾದನು||
ಘಟನೆಯೊದಗಲಾಗ ರಾಣಿ
ವಿಕ್ಟೋರಿಯಳ ವಜ್ರ ಹಬ್ಬ
ದಿಟದಿ ಗಾಂಧಿಯುತ್ಸವದಲಿ ಪಾಲುಗೊಂಡನು ||೨೧೦||

ಮುಂಬಯೀಯ ನಗರದಲ್ಲಿ
ತುಂಬಿ ಕೀರ್ತಿವಂತ ಜನರ
ನಿಂಬಿನಿಂದ ನೋಡಿ ತಿಳಿದ ನೀತಿ ಗೂಢವ||
ತುಂಬ ತಿಳಿದ ಮೆಹತ ತ್ಯಾಬ್ಜಿ
ಬಿಂಬಿಸಲ್ಕೆ ಸಕಲ ಶಾಸ್ತ್ರ
ನಂಬು ನಿಧಿಯ ದಾಂಟಿ ಬಂದ ಗಾಂಧಿ ನೋಡುತ ||೨೧೧||

ಮೇರು ಸದೃಶ ಮೆಹರತರವು
ತೋರುತಿರಲು ಲೋಕಮಾನ್ಯ
ಭಾರಿ ಸಾಗರಕ್ಕೆ ಸದೃಶ ಗೋಖಲೇಜಿಯು||
ಭೂರಿಗಂಗವಾಹದಂತೆ
ಮೇರೆಯರಿತು ಗಾಂಧಿಯವರ
*ಸಾರಿಪುಣ್ಯ ನಗರಿಯಲ್ಲಿ ಭೇಟಿಯಾಗುತ ||೨೧೨||

---

* *ಪುಣ್ಯನಗರಿ =ಪುಣೆ*

ಬಾಲಸುಬ್ರಹ್ಮಣ್ಯ ಘಟನೆ
ಲಾಲಿಸಲ್ಕೆ ಚೆನ್ನೈಜನರು
ಓಲೈಸುತಲಿ ಬಂದರಾಗ ಗಾಂಧಿ ವಚನವ॥
ಕೇಳಿ ಮುಗ್ಧರಾದರೆಲ್ಲ
ಹೇಳಿ ಪತ್ರಕರ್ತರಿಂಗೆ
ಬಾಳ ಕಹಿಯ ಸಿಹಿಯ ತಿಳಿಸಿ ಗಾಂಧಿ ಮೆರೆದನು ॥೨೧೩॥

*ಚೆನ್ನೈಯಿಂದ *ಕಾಳಿಘಾಟು
ಅನ್ನೆಗಲ್ಲಿ ಗಾಂಧಿ ಪ್ರಮುಖ
ಸನ್ನುತರನು ನೋಡಿ ತಿಳಿದು ಶ್ರೀ ಸುರೇಂದ್ರರ॥
ಭಿನ್ನ`ಮತವ ತಿಳಿದು ವಾರ್ತ
ದುನ್ನತೀಯ ಕರ್ತರನ್ನು
ಮುನ್ನ ನೋಡಿ ವಿಷಯ ತಿಳಿಸುತಿರಲು ಬಂದುದು ॥೨೧೪॥

ಆಫ್ರಿಕಾದ ತಂತಿವಾರ್ತೆ
ಕ್ಷಿಪ್ರದಿಂದ ಹೊರಟುಬಹುದು
ಇಪ್ಪುದಿಲ್ಲಿ ತುರ್ತು ಕೆಲಸ ತಡವ ಮಾಡದೆ॥
ಬಪ್ಪುದೆನಲು ಗಾಂಧಿ ಮುಂಬೈ
ಗೊಪ್ಪಿ ಬಂದು ಸತಿಯಸುತರ
ನೊಪ್ಪಿಸುತ್ತ ರೆಲ್ಲಗೂಡಿಜಹಜಹತ್ತುತ ॥೨೧೫॥

[*ಮದ್ರಾಸ್ *ಕಲ್ಕತ್ತ]

ಅಧ್ಯಾಯ ೩

೧. ಬೀಸಿದ ಬಿರುಗಾಳಿ

ಪತ್ನಿ ಪುತ್ರರೊಡನೆ ನಟಲ
ಯತ್ನದಿಂದ ಸೇರಿಯೆಲ್ಲ
ರರ್ತಿಯಿಂದ ಗೃಹ್ಯಬಾಳ ನಡೆಸಿ ಮುದದಲಿ॥
ವರ್ತಿಸಲ್ಕೆ ಯಾಂಗ್ಲರಂತೆ
ಮತ್ತೆ ಪಾರ್ಸಿಯುಡುಗೆಯಂತೆ
ಇತ್ತ ನಾಜ್ಞೆ ಸತಿಸುತರಿಗೆ ಹೊಸದಲುಡುಪಿನ ॥೨೧೬॥

ಶೈಲಿ ತೊಡಲುನೇಮವಿತ್ತು
ಬಾಲ್ಯ ಮದುವೆ ಮಾಡಿಕೊಂಡ
ಕಾಲ ಪುರುಷ ಪತ್ನಿಗಂದು ವಿದ್ಯೆ ಕಲಿಸುತ॥
ಪೊಳ್ತಿ ನೂಟಕೆಲ್ಲ ಹೊಸತು
ಚಳುಕು ರೀತಿ ನೀತಿ ಬಳಸಿ
ಥಳಕು ಜೀವನಕ್ಕೆ ರೂಪಗೊಟ್ಟ ಗಾಂಧಿಯು ॥೨೧೭॥

ಮುಂದೆ ಬೀಸಲಿರುವ ದುಗ್ರ
ಬಂದ ಚಂಡ ಮರುತದಂತೆ
ಅಂದು ಹಡಗು ಪಯಣ ಕಠಿಣ ಸುಂಟ್ರಗಾಳಿಗೆ॥
ನೊಂದು ತಪಿಸಿ ದೈವಲೀಲೆ
ಯಿಂದ ದಡವ ಸೇರಿ ಮುಂದೆ
ಬಂದ ದೇಶ ಕ್ಷೋಭೆಗೊಂದು ನಾಂದಿ ಹಾಡಿತು ॥೨೧೮॥

ಹಡಗು ಬಂದು ಬಂದ್ರಸೇರೆ
ಬಿಡರು ಬಿಳಿಯ ಹಡಗಿನವರ
ದಡಕೆ ಸೇರೆ ಕಾರಣಗಳು ಹಲವುಯಿದ್ದವು॥
ಬಡವ ಕೂಲಿ ಜನರು ತಮಗೆ
ಕೊಡುವ ಬಾಧೆನೆವನ ಹೇಳಿ
ಬಿಡರುವೊಳಗೆ 'ಪ್ಲೇಗ್'ಯಿದ್ದ ದೇಶದವರನು ॥೨೧೯॥

Books read by Gandhiji on Dharma Light of Asia by Edwin Arnold Saying of Zaruthustra. The Gospel in Brief by Tolstoy, Dharma Vihar by Narmada Shankar India- what can it teach by us: by Max Muller. Translation of Upanishad published by Theosophical society. Life of Mohammod & his successors : Carlyle on prophet.

ದಿನವು ಕಳೆದು ಕಷ್ಟದಿಂದ
ಲನವು ದೊರೆಯ ಗಾಂಧಿ ಸಹಿತ
ಸನಿಹ ಸೇರಿ ನಟಲ ದೇಶ ಚೇತರೀಸುತ ||
ಪುನಹರಾಂಗ್ಲ ಮುನಿಸುದೋರಿ
ಘನದ ಗಾಂಧಿ ಬಿಳಿಯ ಜನಕೆ
ಮುನಿವ ಶತ್ರುವೆಂದು ಕ್ರಮವ ಕಠಿಣಗೊಳಿಸಿದ ||೨೨೦||

೨. ಸತ್ವ ಪರೀಕ್ಷೆ

ಇಳಿದು ಗಾಂಧಿ ಮಿತ್ರರೊಡನೆ
ತುಳಿದು ದಾರಿ ನಡೆಯುತಿರಲು
ಬಿಳಿಯ ತರುಣರಲ್ಲಿ ಸುಳಿದು ಸೇರಿಕೊಂಡರು||
ಹಳೆಯ ಗಾಂಧಿ ಗಾಂಧಿ ಬಂದ
ಬಳಿಗೆ ಬನ್ನಿ ಬಡಿಯಿರಿವಗೆ
ಉಳಿಸಬೇಡವಿಲ್ಲಿ ತೊಲಗಲಾತ ಹಿಂದಕೆ || ೨೨೧||

ಎಂದು ಕೂಗಿಕೊಳಲು ಗಾಂಧಿ
ಹಿಂದು ಮುಂದು ನೋಡು ತಳುಕಿ
ಮುಂದೆ ಗತಿಯ ಚಿಂತಿಸುತಿರೆ ಬಿಳಿಯರೆಲ್ಲರು||
ಒಂದು ಗೂಡಿ ಥಳಿಸಿ ತುಳಿದು
ತಂದುಕಲ್ಲು ಕೊಳೆತಮೊಟ್ಟೆ
ಯಿಂದ ತಿವಿದು ಪೇಟಕಿತ್ತು ಹಿಂಸೆಕೊಟ್ಟರು ||೨೨೨||

ತುಳಿದು ಥಳಿಸಿ ಗುದ್ದು ತದ್ದಿ
ದಳನ ಗೊಳಿಸಿ ನೂಕುತಿರಲು
ಕಳವಳಿಸಿದ ಗಾಂಧಿ ಮೂರ್ಛೆಗೊಂಡು ಬೀಳುತ||
ದಳದ ರಕ್ಷಣಾಧಿಕಾರಿ
ಹಳೆಯ ಮಿತ್ರ ಪತ್ನಿನೋಡಿ
ಥಳಿಸುತಿಹರ ಮುಂದೆನಿಂತು ತಡೆಯ ಹಿಡಿದನು ||೨೨೩||

ರಕ್ಷಣೇಯ ಜನರು ಬಂದು
ರಕ್ಷಿಸುತ್ತ ಗಾಂಧಿಯನ್ನು
ರಕ್ಷತಾಣಕೊಯ್ದುರುಸ್ತುಂ ಮನೆಗೆ ಬಿಟ್ಟರು||
ವೀಕ್ಷಿಸುತ್ತ ಗಲಭೆಯನ್ನು
ರಿಕ್ಷರಲ್ಲಿ ಸತಿಯು ಸುತರು
ತಕ್ಷಣದಲಿ ಹೊರಟು 'ರುಸ್ತುಂ' ಮನೆಯಸೇರ್ದರು ||೨೨೪||

ನೋವ ಸಹಿಸಿ ಗಾಂಧಿ ಬಂದು
ನೋವು ಗಾಯ ರಕ್ತ ಸುರಿವು
ನೇವರಿಸುತ ರುಸ್ತುಂಜೀಯ ಮನೆಗೆ ಸೇರ್ದನು॥
ತೀವ್ರತೆಯನು ನೋಡಿ ವೈದ್ಯ
ತೀವ್ರತೌಷಧಿಗಳನು ಕೊಟ್ಟು
ಜೀವ ಗಾಂಧಿಯನ್ನು ನೋವಿನಿಂದ ರಕ್ಷಿಸೆ ॥೧೧೫॥

ಮನೆಯಲಿರುವನೆಂದು ತಿಳಿದು
ಮುನಿದ ಬಿಳಿಯರೆಲ್ಲ ಮುತ್ತಿ
ಘನದೆ ಗಾಂಧಿಯನ್ನು ತಮ್ಮ ವಶದೊಳಿರಿಸುವ॥
ಅನುವು ಗೊಳಿಸಿರೆಂದು ತೀವ್ರ
ತನದ ಧಾಳಿ ಮಾಡೆ ಗಾಂಧಿ
ಮನದೆಯೋಚಿಸುತ್ತಛದ್ಮ ವೇಷಧರಿಸುತ ॥೧೧೬॥

ಹೊರಗೆ ಬೀಳು ತೋಣೆ ಸಾರಿ
ಭರದಿ ನಡೆದು ಠಾಣೆ ಗೈದಿ
ಹಿರಿಯ ರಕ್ಷಣಾಧಿಕಾರಿ ಗೊಸಗೆಪೇಳಲು॥
ಭರದಿ ರಕ್ಷೆ ನೀಡಿ ನುಡಿದ
ನೊರೆದು ಪೇಳು ಧಾಳಿಯಿಟ್ಟ
ತರುಣರಾರುಯೆಂದು ಶಿಕ್ಷೆಯೀವೆನವರಿಗೆ ॥೧೧೭॥

ಧಾಳಿಕಾರ ಬಿಳಿಯರಿಂಗೆ
ಪೇಳಿ ಶಿಕ್ಷೆ ವಿಧಿಸದಂತೆ
ಕೇಳಿಕೊಂಡ ಗಾಂಧಿ ತತ್ವ ನೋಡಿ ಬಿಳಿಯರು॥
ತಾಳಿದವನ ವರ್ತನೆಯನು
ಹೇಳಿ ಕೊಂಡು ನಾಚಿಕೊಂಡು
ಮೇಳವಿಸುತ ಗಾಂಧಿ ತತ್ವ ಮೇಲುಮೇಯನು ॥೧೧೮॥

ಕೂಲಿ ಜನರ ಗೌರವಗಳು
ಮೇಲೆ ಬಂತು ಗಾಂಧಿ ನೆಲೆಯು
ಕೇಳಿ ಹೆಚ್ಚಿ ಭಾರತೀಯ ಜನ ಸಮೂಹವು॥
ತಾಳಿದಕ್ಕೆ ಫಲವು ದೊರೆಯೆ
ಏಳಿಗೆಯನು ಸಹಿಸದವರು
ಧಾಳಿ ಗೈವ ಶಾಸನಗಳ ಜಾರಿ ತಂದರು ॥೧೧೯॥

* Mr. Rustomji

ಕರಿಯ ಜನರ ವಣಿಕ ವೃತ್ತಿ
ತರಿಯುವಂತ ಶಾಸನಗಳು
ಬರಲು ಭಾರತೀಯರಿಂಗೆ ಕಠಿಣ ನಿಯಮವು||
ಹೊರುವ ತೆರಿಗೆಯೆಲ್ಲ ಸೇರಿ
ಓರಿಯ ತುಳಿತದಿಂದ ನೊಂದು
ಉರಿಯ ಬೇಗೆಯಿಂದ ಬಳಲುತಳಲುತ್ತಿದ್ದರು ||೨೩೦||

ಧಗೆಯುಯೇಳುತಿರಲು ಗಾಂಧಿ
ದಿಗಿಲುಗೊಳದೆ ಜನರ ಕರೆಸಿ
ಬಗೆಬಗೆಯಲಿ ಸಂಸ್ಥೆ ಬೆಳಸಿ ಹಣವ ಕೂಡಿಸಿ||
ಲಗುಬಗೆಯಲಿ ಮುಂದೆ ಬರುವ
ಬಿಗುವುಗೊಳುವ ಸತ್ಯ ಸಮರ
ಕೊಗುಮಿಗೆಯಲಿ ಸಿದ್ಧಗೊಳಿಸಿ ಮುಂದೆ ನಿಂದನು ||೨೩೧||

೩. ಮಕ್ಕಳ ವಿದ್ಯಾಭ್ಯಾಸ ಸೇವಾ ಧರ್ಮ

ಬಿಳಿಯರಿರುವ ಶಾಲೆಗೆಲ್ಲ
ಕಳಿಸಲಾರ ಮಕ್ಕಳನ್ನು
ಬಳಿಯ ಕ್ರೈಸ್ತ ಶಾಲೆಗಳಲಿ ಭಾಷೆ ತೊಡಕಿನ ||
ಕಳವಳವನು ಕಂಡು ಗಾಂಧಿ
ತಿಳಿವವಿದ್ಯೆ ನೀಡೆ ಗೃಹದಿ
ಒಲಿಸುತೋರ್ವ ಮಹಿಳೆಯನ್ನು ಬೋಧೆಗಿಟ್ಟನು ||೨೩೨||

ಮನೆಯ ಪಾಠ ಫಲಿಸಲಿಲ್ಲ
ಅನುವು ಗೊಳಿಪ ಶಾಲೆಯಲ್ಲಿ
ತನುಜರಿಂಗೆ ದೊರೆಯಲಿಲ್ಲ ಶಾಲ ವಿದ್ಯೆಯು||
ವಿನಯ ತಿಳಿವು ತರಿವು ಲೋಕ
ದನಿತ ಜ್ಞಾನ ದೇಹ-ಮನದ
ಘನದ ಸರ್ವಶಕ್ತಿ ಬೆಳೆಪ ವಿದ್ಯೆ ತತ್ವವ ||೨೩೩||

ವೃತ್ತಿಯಲ್ಲಿ ಪ್ರಗತಿಯಿತ್ತು
ಅರ್ತಿಯಿಂದ ಕೋರ್ಟಿನಲ್ಲಿ
ಸ್ವಾರ್ಥ ರಹಿತವಾದದಿಂದ ಗಾಂಧಿ ಮೆರೆದನು||
ಅರ್ಥದಿಂದ ತೃಪ್ತಿಯಿಲ್ಲ
ಧೂರ್ತರಿಂದ ನೊಂದ ಜನಕೆ
ಸ್ಫೂರ್ತಿಯಿಂದ ಸೇವೆಗೈವ ಬಯಕೆ ಹೆಚ್ಚಲು ||೨೩೪||

ಗಾಂಧಿ ಮನೆಯೊಳಿರಲು ಬಂದ
ನಂದ ಗೆಟ್ಟ ಕುಷ್ಟ ರೋಗಿ
ಬೆಂದು ಹೋದ ಗಾಂಧಿ ನೋಡುತವನ ಕಷ್ಟವ||
ಒಂದು ಹೊತ್ತು ಊಟವಿತ್ತು
ಚಂದದಿಂದ ಲವನಗಾಯ
ವೊಂದು ಗೂಡೆ ತೊಳೆಯು ತದಕೆ ಬಟ್ಟೆಕಟ್ಟುತ ||೨೩೫||

ಸೇವೆ ಮಾಡಿ ತೃಪ್ತಿಯಿಂದ
ನೋವಿನಿಂದ ನರಳುವವಗೆ
ಕಾವದೇವನೊಲಿಯ ಕರುಣೆ ನೀಡುತಾಶ್ರಯ||
ಭಾವಿಸದಿದ ಸಹ್ಯವೆಂದು
ವೋವಿ ಸೇವೆಯಲ್ಲಿ ಕಳೆದು
ಸೇವೆ ನಿರತ ಗಾಂಧಿ ದುಡಿದ ಪತಿತಪಾವನ ||೨೩೬||

ವೈದ್ಯ ಬೂತ್ ಕರುಣೆದಾತ
ಸಿದ್ಧ ಸೇವ ಧರ್ಮದಿಂದ
ವೃದ್ಧರಾದಿ ರೋಗಿ ಜನರ ಸೇವೆಗೋಸುಗ||
ವೈದ್ಯ ಧಾಮ ತೆರೆದು ರೋಗಿ
ಕ್ರುದ್ಧ ಬೇನೆಯಿಂದ ಬಳಲಿ
ವೃದ್ಧಿಗಾಗಿ ತವಕ ಪಡುವ ಜನರಿಗೋಸುಗ ||೨೩೭||

ಸೇವೆಗಾಗಿ ತವಕ ಪಡುವ
ಭಾವಜೀವಿ ಗಾಂಧಿಯಲ್ಲಿ
ದೇವಸೇವೆ ಮಾಡೆ ಜನರ ಸೇವೆ ಮೂಲಕ||
ಓದಿ ಕೆಲವು ತಾಸು ದುಡಿಯೆ
ಭಾವದಿಂದ ನಿರ್ಧರಿಸುತ
ನೋವಿನಿಂದ ಬರುವ ಜನಕೆ ಸೇವೆಗೈದನು ||೨೩೮||

ಪತ್ನಿ ಪ್ರಸವ ಕಾಲದಲ್ಲಿ
ಮತ್ತೆದಾದಿ ದೊರೆಯದಿರಲು
ಉತ್ತಮದಲಿಯಾಕೆ ಸೇವೆ ತಾನೆಗೈಯಲು||
ಹತ್ತು ಗ್ರಂಥವೋದಿ ತಿಳಿದು
ನಿತ್ತು ತಾನೆ ಕಾರ್ಯಗೈದ
ಹೆತ್ತ ಮಗುವ ಪಾಲಿಸಲ್ಕೆ ಗಾಂಧಿಯರಿತನು ||೨೩೯||

ಗರ್ಭಕಾಲದಲ್ಲಿ ಮಾತೆ
ನಿರ್ಭಯದಲಿ ದೇವಭಕ್ತಿ
ಯರ್ಭಕನಸು ಪೋಷಿಸಲ್ಕೆ ಪುಣ್ಯಮಾರ್ಗದಿ||
ಪರ್ಬಿಸುಕದ ಭೋಜ್ಯ ಭುಜಿಸಿ
ಸರ್ಬಶಯನನ್ನು ಭಜಿಸಿ
ನಿಬ್ಬಯಕೆಯ ಬಾಳ ನಡೆಸೆ ಸುಪುತ್ರ ಜನಿಸುವ ||೨೪೦||

ಮಕ್ಕಳಾಗಿ ಸಂತತಿಯನು
ಉಕ್ಕಿಸಲ್ಕೆ ಮಾತ್ರ ಸತಿಯ
ವ್ಯಕ್ತ ಸಂಗಬೇಕು ಮತ್ತೆ ಬ್ರಹ್ಮ ಚರ್ಯದ ||
ಸೂಕ್ತಿ ಪಾಲಿಸುತ್ತ ನಿಯಮ
ಶಕ್ತಿಯಿಂದ ಬಾಳಿ ಬದುಕೆ
ಯುಕ್ತ ದಂಪತೀಗಳಾಗ ಸುಖದಿ ನಲಿವರು ||೨೪೧||

ಕಂದನಿಂಗೆ ಐದು ವರ್ಷ
ಚಂದ ವಿದ್ಯೆ ಮನೆಯ ಶಾಲೆ
ಬಂಧು ತಾಯಿ ಪ್ರಥಮ ಗುರುವು ತಂದೆ ಶ್ರೇಷ್ಠನು ||
ಕಂದರೆಲ್ಲ ತಾಯಿ ತಂದೆ
ಯಿಂದ ವಿದ್ಯೆ ಕಲಿವ ಮನೆಯು
ಒಂದು ಗೂಡಿ ಬಾಳ್ವಸಗ್ಗ ಸುಖಕೆ ಸಾಟಿಯು ||೨೪೧||

ಏಕ ಪತ್ನಿ ವ್ರತದೆ ಗಾಂಧಿ
ಸಾಕು ಮಾಡಿ ಮಕ್ಕಳೆಣಿಕೆ
ಏಕಮನದಿ ಬ್ರಹ್ಮಚರ್ಯ ಪಾಲಿಸುತ್ತಲಿ||
ಬಾಕಿ ರೋಧಗಳಲಿ ಮನವ
ನೂಕದಿರಲು ನಿತ್ಯಕಾರ್ಯ
ವೇಕ ನಿಷ್ಠೆಯಿಂದಲೆಸಗಿ ಸತಿಯ ಸಂಗವ ||೨೪೨||

ದೂರಮಾಡಿ ಗೃಹದ ವಾಸ
ದರಿವಿನಲ್ಲಿ ಯಿಂದ್ರಿಯಗಳ
ಭರದ ಬಂದ ನಿಗ್ರಹಿಸುತ ಬ್ರಹ್ಮಚರ್ಯವ||
ಇರದೆ ಪಾಲಿಸುತ್ತ ಜನರ
ಭರಿತ ಕಷ್ಟಗಳಿಗೆ ಮಿಡಿದು
ನೆರೆಯ ಜನರ ನೋವಹರಿಸೆ ಸಿದ್ಧ ಹಸ್ತದೆ ||೨೪೩||

ವ್ರತದೆ ಬ್ರಹ್ಮಚರ್ಯನೆನೆದು
ಮತಿಯ ಬ್ರಹ್ಮವನ್ನು ಚರಿಸಿ
ಸತತ ಪ್ರಮದ ದೇಹ ಮನಪನಾತ್ಮ ಶಕ್ತಿಯ||
ವಿತತಿಯಿಂದ ರಕ್ಷಿಸುತಲಿ
ಧೃತಿಯೊಳಾಂತ ಮನದಿ ಶಾಂತಿ
ವ್ರತವ ಫಲವ ಪಡೆಯೆ ಸರಳ ದಡಿಗೆಯುಣ್ಣುತ ||೨೪೪||

ಸರಳ ಭೋಜ್ಯವಸ್ತುಗಳಲಿ
ದೊರೆವ ಹಣ್ಣು ಕಾಯಿ ಶ್ರೇಷ್ಠ
ಕರೆದ ಹಾಲ ಕುಡಿಯೆ ರಾಜಸೀಕ ಗುಣಗಳು||
ಬೆರೆತು ಕೊಂಡು ಬ್ರಹ್ಮಚರ್ಯ
ಕಿರಿದು ಫಲವ ಕೊಡುವುದೆಂದು
ಅರಿತ ಗಾಂಧಿ ಹಾಲು ಸಹಿತ ಕುಡಿಯಲೊಲ್ಲನು ||೨೪೫||

೪. ಸರಳ ಜೀವನ ಉಚ್ಚ ಭಾವನ

ಖರ್ಚುವೆಚ್ಚ ಹೆಚ್ಚುತಿರಲು
ಬಿಚ್ಚು ಮನಸಿನಲ್ಲಿ ಗಾಂಧಿ
ಅಚ್ಚ ಬಿಳಿಯ ಬಟ್ಟೆಗಳನು ತಾನೆಯೊಗೆಯಲು||
ಹೊಚ್ಚ ಹೊಸದು ಸಾಧನಗಳ
ಸ್ವಚ್ಛ ಕ್ರಯಕೆ ಕೊಂಡು ಕೊಂಡು
ಅಚ್ಚು ಮೆಚ್ಚಿನಿಂದ ಲೊಗೆಯು ತಿಸ್ತ್ರಿ ಹಾಕುತ ||೨೪೬||

ಶ್ರೇಷ್ಠ ಸರಳ ಜೀವನನು
ನಿಷ್ಠೆಯಿಂದ ಪಾಲಿಸಲ್ಕೆ
ನಿಷ್ಠಗಾಂಧಿ ತೊಡಗಿಲಂಗಿಯಿಸ್ತ್ರಿ ಮಾಡಲು||
ಸ್ಪಷ್ಟ ಗಂಜಿಯೊಣಗು ತಂಗಿ
ಹಿಟ್ಟಿನಂತೆ ಯುದುರ ತೊಡಗೆ
ನಿಷ್ಠೆಯುಳ್ಳ ಮಿತ್ರರೆಲ್ಲಿ ಗೇಲಿ ಗೈದರು ||೧೪೭||

ಮೊದಲು ಕಷ್ಟ ಕೊನೆಗೆ ಸ್ಪಷ್ಟ
ಪದುಳದಿಂದ ಕಲಿತ ಗಾಂಧಿ
ಮೃದುಳ ತನದಿ ಬಟ್ಟೆಯೊಗೆದು 'ಅಗಸ' ಗಿಂತಲು||
ಚದುರತನದಿ ಬಟ್ಟೆನೆರಿಗೆ
ಮುದದೊಳಿಸ್ತ್ರಿ ಹಾಕಿ ತೊಡಲು
ಸದಯರೆಲ್ಲ ಹೊಗಳೆ ಗಾಂಧಿ ಚದುರತನವನು ||೨೪೮||

ಒಮ್ಮೆ ಗೋಖಲೇಯು ಬರಲು
ಗಮ್ಮಿನಿಂದ ಕಂಠಮಾಲೆ
ಗುಮ್ಮಿ ಹೋಗಿ ಸಿಕ್ಕುಗೊಳಲು ಗಾಂಧಿ ನೋಡುತ||
ಒಮ್ಮನದಲಿತೆಗೆದಕೊಂಡು
ಚಿಮ್ಮುತದನುಯಿಸ್ತ್ರಿ ಹಾಕಿ
ಕಮ್ಮುಗೊಳಿಸಿ ಕೊಟ್ಟಗೋಖ್ಲೆ ದಂಗು ಬಡಿಯಲು ||೨೪೯||

ಮುಖದ ಕ್ಷೌರ ಸುಲಭವಿತ್ತು
ಶಿಖೆಯ ಚೌರಕಾಗಿ ಕ್ಷೌರ
ವಿಖರ ಶಾಲೆ ಹುಡುಕಿ ಗಾಂಧಿ ಹೋಗಿ ನೋಡಲು||
ಮುಖವ ನೋಡು ತಾತ ನುಡಿದ
ದುಖನುಯಿಹುದು ಬಿಳಿಯ ಜನಕೆ
ಸುಖದೆ ಕ್ಷೌರ ಮಾಡೆನಾನು ಕರಿಯ ಜನತೆಗೆ ||೨೫೦||

ಅವನು ಹೇಳಿದಂತೆ ನೀತಿ
ಸವ್ಯವಿತ್ತು ಬಿಳಿಗಿರಾಕಿ
ಯೂರ್ವಿಯಲ್ಲಿ ಬಾರವನವ ಕರ್ಮ ಶಾಲೆಗೆ||
ತೀವಿ ಕರಿಯ ಗ್ರಾಹಕರಿಗೆ
ಸೋವಿ ಸೇವೆ ಮಾಡೆ ಖಚಿತ
ದ್ರಾವ್ಯವಧಿಕತೆರಲು ಬೇಕು ದುಂದುವೆಚ್ಚವು ||೨೫೧||

ಸರಳ ಜೀವನಡೆಸೆ ಹೊರಟ
ಪರಮ ಪುರುಷ ಗಾಂಧಿ ನೋಡು
ತರಿತನದರ ಮರ್ಮವನ್ನು ಕೊಳುತ ಕತ್ತರಿ||
ಇರಿಸಿ ದರ್ಪಣಂಗಳನ್ನು
ತ್ವರಿತದಿಂದ ಹಿಂದೆ ಮುಂದೆ
ನುರಿತ ಗಾಂಧಿ ಹಿಂದೆ ಮುಂದೆ ಕೇಶಚಯಗಳ ||೨೫೨||

ಕತ್ತರಿಸಿಲು ಕಲಿತುಕೊಂಡ
ಉತ್ತಮಿಕೆಯು ಸಾಲದಾಗೆ
ತತ್ತಳಿಸುತ ತಲೆಯ ಹಿಂದೆ ಕೊಚ್ಚೆ ಗೊಂಡುದು||
ಅತ್ತ ಕೋರ್ಟಿನಲ್ಲಿ ನ್ಯಾಯ
ವೇತ್ತ ಮಿತ್ರರೆಲ್ಲ ನೋಡಿ
ಮತ್ತೆ ಪೇಳ್ವರಿಲಿಯು ಗಾಂಧಿ ಕೇಶ ಕಚ್ಚಿದೆ ||೨೫೩||

ನಗರೆ ನಗಲಿ ಕಲಿವೆನಾನು
ಬಗೆಯ ಕ್ಷೌರ ಕ್ರಮವ ನೋಡಿ
ಸೊಗದ ಜೀವ ನಡೆಸೆ ಸರಳ ತನವ ವಶ್ಯವು||
ಮಿಗಲು ಮಾತೃ ದೇಶದಲ್ಲಿ
ನಿಗದಿಯಾದ ದಳಿತ ಜನರ
ಹೊಗಲು ಬಿಡದ ವರ್ಣ ವಿಷವ ನೆನಸಿಕೊಂಡನು ||೨೫೪||

೫. ಮರಳಿ ಮಾತೃ ಭೂಮಿಗೆ

ಬೋವರವರ ಯುದ್ಧಕಾಲ
ದೋವಿ ಗಾಂಧಿ ಬ್ರಿಟಿಷರಿಂಗೆ
ಭಾವಿಸುತ್ತ ನೆರವು ನೀಡೆ ಸೇವಕರ್ತರ||
ನೇವರಿಸುತ ಯುದ್ಧ ಮುಖದಿ
ನೋವು ಬಡುತ ಬಳಲುತಿದ್ದ
ಸಾವು ಕಂಡ ಜನರ ಸೇವೆ ಗೈಯ ತೊಡಗಿದ ||೨೫೫||

ಪ್ಲೇಗು ಕಾಲದಲ್ಲಿ ಗಾಂಧಿ
ಹೋಗಿ ಸೇವಕರ್ತರೊಡನೆ
ಬೇಗ ಶುಚಿಯಗೊಳಿಸಿ ಮನೆಯನೆಂದು ಬೋಧಿಸಿ||
ಸಾಗುಗೊಳಿಸಿ ಸಫಯಿ ಕ್ರಮವ
ಆಗುವಂತೆ ಸಾಗುಮಾಡಿ
ತ್ಯಾಗಿ ಜನರವೊಲುಮೆ ಪಡೆದ ಸತ್ಯ ಶೋಧಕ ||೨೫೬||

ಭಾರತಕ್ಕೆ ಮರಳಿ ಮುದದಿ
ತೋರಿ ಶ್ರದ್ಧೆ ಮಾತೃ ಭೂಮಿ
ದಾರಿತೋರೆ ಬಳಲು ವರ್ಗೆ ನಟಲ ಬಿಡುತಲಿ||
ಊರದಾರಿ ಹಿಡಿಯುವಾಗ
ಭಾರತೀಯರೆಲ್ಲ ಗೂಡಿ
ಭಾರಿ ಬೀಳು ಕೊಡುಗೆ ಕಾಣ್ಕೆಯಿತ್ತು ರಂಜಿಸಿ ||೨೫೭||

ಎಲ್ಲರಿಂದ ಮಾನ್ಯನಾಗು
ತೆಲ್ಲಿರೊಲುಮೆ ಪಡೆದುಗಾಂಧಿ
ಫುಲ್ಲ ನೇತ್ರದಿಂದ ಹೊರಟ ಜಹಜ ಹತ್ತುತ||
ಬಲ್ಲಗಾಂಧಿ ಮಾರಿಷಿಯಸ್
ನಲ್ಲಿ ತಂಗಿ ರಾತ್ರೆ ಮುದದಿ
ಎಲ್ಲ ನೋಡಿ ದೇಶ ಜನದ ಬಾಳ ತಿಳಿದನು ||೨೫೮||

ಭಾರತಕ್ಕೆ ಮರಳಿ ಗಾಂಧಿ
ಊರಿನಲ್ಲಿನೋಡಿ ತಿಳಿದ
ಭಾರಿ ನಗರ ಕಾಳಿಘಾಟಿನಲ್ಲಿ ಕಾಂಗ್ರೆಸು||
ಏರ ಸಭೆಯುಡಿನ ವಾಚ
ಪಾರುಪತ್ಯದಲ್ಲಿ ನಡೆವ
ವಾರತೇಯ ನರಿಯುತಲ್ಲಿ ಗೈದಿ ಸಭೆಯಲಿ ||೨೫೯||

ಪಾಲುಗೊಂಡು ಮೆಹತ ತಿಲಕ
ರೋಲೈಸುತಲಿ ತಿಳಿದನಲ್ಲಿ
ಮೇಲ್ಮೆ ಕೀಳ್ಮೆ ಭೇದ ಮೇಣುದೀನದಲಿತರು||
ಪಾಲಿಗಿರುವ ಕರುಣ ಕಥೆಯ
ನಾಲಯಗಳೊಳ ಶುಚಿ ಬಗೆಯ
ತಾಳದದನು ಶೌಚ ಕೂಪ ಶುಚಿಯಗೈದನು ||೨೬೦||

ಶೌಚವಿಧಿಯು ಹಳಸಿಯಿತ್ತು
ಯೋಚಿಸಲ್ಕೆ ವಿಫಲವಿತ್ತು
ಸಾಚಮನವಿ ಗಾಂಧಿ ತೆರಳಿ ಕಾರ್ಯನಿಲಯಕೆ||
ಚಾಚಿ ಕೈಯ ಬೇಡಿಕೊಂಡ
ನಾಚೆ ನಾನು ಕೆಲಸ ಗೈಯ್ಯ
ಯೋಚಿಷೆುತ್ತ ಕೆಲಸ ಕೊಡಿರಿಯೆಂದು ಕೇಳಲು ||೨೬೧||

ಕಾರಕೂನ ಕೆಲಸವಿತ್ತು
ಭಾರಿ ಗಾಂಧಿಯನ್ನು ಕುಳಿಸಿ
ಏರಿ ಬರುವ ಪತ್ರಗಳನು ನೋಡಿ ಮಥಿಸುತ ||
ಆರಿಸಿದರೆ ಉತ್ತರಗಳ
ಬೇರೆ ಬರೆಯ ಬಹುದು ನೀನು
ಸಾರಿನೋಡು ಕೆಲಸವಿದನುಯೆನು ತನುಡಿಯಲು ||೨೬೨||

ತರುಣ ಗಾಂಧಿ ಪುಳಕಗೊಂಡ
ಕರದ ಕೆಲಸ ನೋಡಿ ಘೋಸ್ಲೆ
ಹರುಷಗೊಂಡ ಗಾಂಧಿ ವಿದ್ಯೆಯರಿವ ಪರಿಯನು||
ಕರುಣೆಯಿಂದ ಗಾಂಧಿಯೊಡನೆ
ಭರದೆ ಮೈತ್ರಿಗಳಿಸಿ ಸಹಜ
ಪರಿಯನರಿಯು ತಿರಿಸಿಕೊಂಡ ಸರಳ ಕೆಲಸಕೆ ||೨೬೩||

ರಾಷ್ಟ್ರ ಸಂಸ್ಥೆ ಕಾರ್ಯಕ್ರಮದ
ಸೌಷ್ಠವಗಳ ನರಿತುಕೊಂಡ
ನಿಷ್ಠ ಕಾರ್ಯದರ್ಶಿ ಘ್ರೋಸೆ ಮಿತ್ರತನದಲಿ||
ಅಷ್ಟು ದೊಡ್ಡ ಚಪ್ಪರದಲಿ
ಸ್ಪಷ್ಟವಿಲ್ಲ ತನ್ನ ಪಾತ್ರ
ಕಷ್ಟದಿಂದ ಗಾಂಧಿ ಪಡೆದ ನಿಲುವು ಮಂಡಿಸೆ ||೨೬೪||

ವಾಚಿ ಸೆಂದ ಮಾತಕೇಳಿ
ವಾಚಿ ಸುತ್ತ ತನ್ನ. ನಿಲುವ
ಯೋಚಿಸುತ್ತ ನುಡಿದ ತೆರಿಕಲಾಫ್ರಿ ಕಾದಲಿ||
ಪೇಚಿನಲ್ಲಿ ಸಿಕ್ಕಿ ತೊಳಲಿ
ನಾಚುತಿದ್ದ ಭಾರತೀಯ
ಪ್ರಾಚ್ಯ ಜನರ ಕಷ್ಟನಿಷ್ಠುರಗಳ ಪರಿಯನು ||೨೬೫||

ನಿಲುವು ಕಾಂಗ್ರೆಸಿನಲಿ ಪಾಸಿ
ನೊಲವು ಪಡೆಯೆ ಹರ್ಷದಿಂದ
ಒಲಿದ ಗಾಂಧಿ ಬಯಸುತಲ್ಲಿ ನೆಲಸ ಬಯಸುತ||
ಬಲು ಸಮರ್ಥಗೋಖಲೆಯರ
ನಿಲಯದಲ್ಲಿ ವಾಸನಿಂತ
ಹಲವು ಜನರ ದಾಸ್ಯನೋಡಿ ಮನದಿಮರುಗುತ ||೨೬೬||

೬. ಕಲ್ಕತ್ತದಲ್ಲಿ ಒಂದು ತಿಂಗಳು

ತಿಂಗಳೊಂದು ಕಾಲ ಗೋಖ್ಲೆ
ಸಂಗದಲ್ಲಿ ಕಳೆದು ಗಾಂಧಿ
ತುಂಗ ಜ್ಞಾನಗಳಿಸಿಕೊಂಡು ಸೇವ ಕ್ಷೇತ್ರದ||
ಅಂಗವೆಲ್ಲ ತಿಳಿದುಕೊಂಡ
ವಿಂಗಡಿಸಲು ಚರ್ಚೆವಾದ
ವ್ಯಂಗ್ಯ ಮಾತು ಬರೆಹ ಸಭೆಗಳಲ್ಲಿ ಕಳೆಯುತ ||೨೬೭||

ಕೇಳಿ ತಿಳಿದು ಕಾಳಿದೇವಿ
ಯಾಲಯದವಿ ಶೇಷತೆಗಳ
ಕಾಲಿಘಾಟಿನಲ್ಲಿಯೆದ್ದು ನಿಂತು ಶೋಭಿಪ ||
ಮೂಲಕಾಳಿದೇಗುಲವನು
ಪೇಳಿಮುಗಿಸಲಾರ ಮಹಿಮೆ
ಬೋಳೆ ಪಶು ಬಲೀಯ ಕಂಡು ತಾಳದಾದನು ||೨೬೮||

ದೇವಿಮುಂದೆ ರಕ್ತ ನದಿಯು
ಕಾವಿನಿಂದ ಹರಿಯುತಿತ್ತು
ನೋವು ಸಹಿಸಿ ಸತ್ತಮೇಕೆ ಕುರಿ ಸಮೂಹದ ||
ಸಾವಿನಲ್ಲಿ ಮುಕ್ತಿಕಂಡ
ದೇವಿಗಾಗಿ ಬಲಿಯಕೊಟ್ಟ
ಸಾವಿರಾರು ಪಶು ಶರೀರ ರಾಶಿಯಿದ್ದಿತು ||೨೬೯||

ಪೂಜೆಯಿದುವೆ ಪಶುಗಳ ಬಲಿ
ಸಾಜವಲ್ಲ ಪ್ರಾಣವಧೆಯು
ತೇಜ ದೇವಿ ಕರುಣೆಮಾತೆ ತನ್ನ ಸಂತತಿ||
ಸೋಜಿಗದಲಿ ಸಾವಪರಿಯ
ನೀಜಗದಲಿ ಸಹಿಸಲವಳು
ನೈಜನೋಡಿ ಮಾತೆಗೇಕೆ ಪ್ರಾಣಬಲಿಗಳು ||೨೭೦||

ಕುರಿಯ ಸಾಲಿನಾಡು ಸಾಲು
ನೆರೆಯುತಿತ್ತು ದೇಗುಲದಲಿ
ಅರಿಯದದರ ದಂತ್ಯ ಕಿರುಚು ತರಚುತಿದ್ದವು||
ಬರಿಯ ಭ್ರಮೆಯುವುಳಿಯಲಳವು
ಒರೆಯ ಬಾಯಿ ಬರದವಕ್ಕೆ
ನರನು ಬಾಯಿ ಬರದ ಪಶುವ ವಧಿಸಿ ಮೆರೆವನು ||೨೭೧||

ನೊಂದು ಗಾಂಧಿ ಮರುಗಿ ಕೊರಗಿ
ಬಂದ ನೋವು ತಡೆಯದಿರಲು
ನಿಂದು ನೋಳ್ಪವಂಗ ಜನರ ಜೀವವಿಧಿಯನು||
ಎಂದು ಬ್ರಹ್ಮ ಸಮಾಜ ಜನ
ದಿಂದ ತಿಳಿದ ತತ್ವ ವ್ಯಾಖ್ಯೆ
ಅಂದು ಕೀರ್ತಿಗೊಂಡ ವಂಗ ತತ್ವವಿದರನು ||೨೭೨||

ನೋಡ ತಿಳಸಿ ರಾಮಕೃಷ್ಣ
ಗಾಢಶಿಷ್ಯ ವಿವೇಕನಂದ
ಮಾಡಿಮಸವ ಮಠಕೆ ತೆರಳಿ ದೇವಯೋಗಿಯು||
ಮೂಡಿ ಬಂದ ರೋಗದಿಂದ
ಬಾಡಿಯಿರುವ ಪರಿಯನರಿತು
ನೋಡದಾದ ಯುಗದವಾಣಿ ಸಾರ್ದಸಿಂಹನ ||೨೭೩||

ಸೋದರೀನಿ ವೇದಿತಳನು
ನಾದರಿಸಿದ ನೋಡುತಲ್ಲಿ
ಬೋಧೆಯಿಂದ ಲವಳ ಹಿಂದು ಧರ್ಮ ಪ್ರೇಮವ॥
ಆದರಿಸುತ ಕೇಳಿ ತಿಳಿದು
ಮೋದದಿಂದ ವಂಗಜನರ
'ಹಾದಿ ಸುಜನ ರೀತಿ ನೀತಿ ನೋಡಿ ತಿಳಿದನು ॥೨೭೪॥

ಬರ್ಮದೇಶ ಕೈದಿ ದಿನವ
ಪೆರ್ಮೆಯಿಂದ ಕಳೆದು ಮರಳಿ
ಧರ್ಮಭೂಮಿ ಭಾರತದಲಿ ಯಾತ್ರೆ ಗೈಯಲು॥
ಒರ್ಮನದಲಿ ನಿರ್ಧರಿಸುತ
ಕರ್ಮವೀರ ಗೋಖಲೆಯರ
ನಿರ್ಮಲಾಂತಃ ಕರಣ ಪಡದು ಹೊರಟುನಿಂದನು ॥೨೭೫॥

೭. ಕಾಶಿಯಲ್ಲಿ

ರೈಲುಗಾಡಿ ಪಯಣದಲ್ಲಿ
ಯಾಲಿಸುತ್ತ ಜನರ ಬವಣೆ
ಹೇಳದಷ್ಟು ಹೀನ ಮೂರನೇಯ ದರ್ಜೆಯ॥
ಗೋಳ ನೋಡಿ ಗಾಂಧಿ ನೊಂದು
ತಾಳಿಕೊಂಡು ಪಯಣಿಸುತ್ತ
ಶೂಲಪಾಣಿ ವಿಶ್ವನಾಥ ನೆಲೆಯ ಕಾಶಿಗೆ ॥೨೭೬॥

ಬಂದು ಪಂಡನೊಬ್ಬನಿಂದ
ಸಂದ ಮನೆಯ ಕೊಠಡಿಯೊಳಗೆ
ನಿಂದು ಗಂಗೆಯಲ್ಲಿ ಮಿಂದು ಪುಣ್ಯ ಫಲದಲಿ॥
ಸಂದು ಹೋದ ಪಿತೃಗಳಿಗೆ
ಚರಿದದಿಂದ ಪಿಂಡವಿಟ್ಟು
ಅಂದು ಶಾಸ್ತ್ರ ತರ್ಪಣಗಳ ಕೊಟ್ಟ ಮಂತ್ರದಿ ॥೨೭೭॥

ವಿಶ್ವನಾಥ ಮಂದಿರದಲಿ
ನಿಶ್ಚಲದಲಿ ಶಾಂತಿ ಸುಖವು
ವಿಶ್ವ ವಂದ್ಯ ದೇವನಿಂಗೆ ಶಾಂತಿ ಪೂಜೆಯು॥
ಶಾಶ್ವತದಲಿ ನಡೆಯುತಿತ್ತು
ಕ್ಲೇಶ ಪಡುವ ಜನಕೆ ತೋಷ
ವೇಷಧಾರಿ ಜನರು ವಣಿಕ ವೃತ್ತಿಕುಶಲರು ॥೨೭೮॥

ಮೆರೆವ ಪರಿಯ ನೋಡಿ ಗಾಂಧಿ
ಸರಿದು ಜ್ಞಾನ ವಾಪಿನೋಡಿ
ನೆರೆಯ ಪಂಡಗಿತ್ತ ಕಾಸುಕಾಣಕೇಯಲಿ||
ಏರಿಸಿಟ್ಟು ಪಂಡನೆಂದ
ತೋರಿಸುವಿಯ ಕಾಸನೆನಗೆ
ಸಾರ್ವೆ ನೀನು ಕಾಸು ಕೊಟ್ಟು ನರಕ ನಗರಿಗೆ ||೨೭೯||

ಬೇಡವೆಂದು ಬಿಸುಡೆನೋಡಿ
ಓಡಿಗಾಂಧಿ ಹೆಕ್ಕುತದನು
ನೋಡದವನ ಮುಂದೆ ಸರಿಯೆ ಪಂಡ ಕರೆಯುತ||
ಮೋಡಿನುಡಿದ ಕಾಸು ನಾನು
ಬೇಡವೆನಲು ನಿನಗೆ ದೋಷ
ಕಾಡುವುದಿದು ಖರೆಯುನೋಡು ಕೊಟ್ಟುಕಾಸನು ||೨೮೦||

ಸರಿಯೆನಲ್ಕೆ ಗಾಂಧಿಕೊಟ್ಟು
ಸರಿದ ನಂದು ಕಾಶಿಯಲ್ಲಿ
ಪಿರಿದು ಪೆಸರಿನಾನ್ನಿ ಬೆಸೆಂ(ಟ್) ಕಾಶಿಯಲ್ಲಿರೆ ||
ಸಾರುತವಳ ಗೃಹಕೆ ನೋಡಿ
ಮೂರು ಮಾತನಾಡಿ ಮರಳಿ
ದೂರ ಸರಿದ ಗಾಂಧಿ ಮಾತೆ ರೋಗಗ್ರಸ್ತಳ ||೨೮೧||

೮. ಮರ್ಳಳಿ ಮುಂಬಯಿಗೆ

ಮುಂಬಯಿಯಲಿ ನೆಲೆಯನಿಂತು
ಇಂಬಿನಿಂದ ವಕಿಲಿಗೈಯೆ
ತುಂಬ ನಂಜುತಿದ್ದ ಗಾಂಧಿ ರಾಜಕೋಟೆಗೆ||
ಬಿಂಬಿಸಲ್ಕೆ ಬಂದು ವೃತ್ತಿ
ಯಂಬಿನಲ್ಲಿ ಬಾಣಹೂಡಿ
ತುಂಬ ಹೊಗಳೆ ಕಕ್ಷಿಗಾರ ಧೈರ್ಯಗೊಂಡನು ||೨೮೨||

ವೃತ್ತಿ ಕುಶಲನಾಗಿ ಗಾಂಧಿ
ಮತ್ತೆ ಮುಂಬೈ ಹೋಗಬಯಸಿ
ಸುತ್ತಮುತ್ತ ನೋಡುತಿರಲು ದೈವದಿಚ್ಛೆಯು||
ಎತ್ತ ವರ್ಣಿಸಲ್ಕೆ ಬಹುದು
ಹತ್ತು ವರ್ಷ ಗಾಂಧಿ ಕುವರ
ಹೊತ್ತ ವಿಷಮ ಶೀತಜ್ವರದಿ ಬಳಲ ತೊಡಗಿದ ||೨೮೩||

ವೈದ್ಯನಾಗ ಸಲಹೆಯಿತ್ತ
ಮದ್ದು ಕಠಿಣ ನಿನ್ನ ಮಗಗೆ
ಬದ್ಧನಾಗಿ ಕೊಡಲು ಬೇಕು ಮೊಟ್ಟೆ ಮಾಂಸವ॥
ಶುದ್ಧಗಾಂಧಿ ನುಡಿದ ತಾನ್ವಿ
ರುದ್ಧ ಮಾಂಸಹಾರ ಕೊಡಲಿ
ಕಿದ್ದು ವೈಷ್ಣ ಧರ್ಮದೊಳಗದದುನಿಷಿದ್ಧವು ॥೨೮೪॥

ಪ್ರಾಣವುಳಿಸೆ ಕೊಡುಯನಲ್ಕೆ
ಮಾಣದದನು ಗಾಂಧಿ ನುಡಿದ
ತ್ರಾಣ ಬರಲು ಕೊಡುವೆ ನವಗೆ ಜಲ ಚಿಕಿತ್ಸೆಯ॥
ಕ್ಷೀಣುತವನ ನಿರ್ಧರವನು
ಜಾಣ ವೈದ್ಯ ನುಡಿದ ನೀನು
ಕಾಣುವಂಥ ಶಮನ ಮಾಡು ದೃಢದ ಮನದಲಿ ॥೨೮೫॥

ಗಾಂಧಿ ಮಗಗೆ ಜಲ ಚಿಕಿತ್ಸೆ
ಯಂದದಿಂದ ನೀಡಿನೋಡಿ
ಮುಂದೆ ಹಣ್ಣು ರಸವ ಸರಳ ಹಾಲು ಕೊಡುತಲಿ॥
ಅಂದು ಕಳೆಯೆ ತರಳ ಬೇವರಿ
ಮುಂದೆ ರೋಗದಿಂದ ಮುಕ್ತಿ
ಹೊಂದೆ ದೇವ ಬಲಕೆ ಮಣಿದ ಗಾಂಧಿ ವಿಭವದಿ ॥೨೮೬॥

ದೈವದಿಚ್ಛೆಯಿರಲು ಗಾಂಧಿ
ಭವ್ಯ ವೃತ್ತಿಯಲ್ಲಿ ಮುಂದೆ
ಸವ್ಯಸಾಚಿಯಂತೆ ದುಡಿದ ಮುಂಬೈ ನಗರದಿ॥
ದೈವ ಬಲವ ಪೇಳ್ವರಾರು
ಸರ್ವವಿದಿತ ದೇವದಯದೆ
ದಿವ್ಯಗಾಂಧಿ ಹೊರಟು ನಿಂತ ಮತ್ತೆಯಾಫ್ರಿಕ ॥ ೨೮೭॥

೯. ಮತ್ತೆ ದಕ್ಷಿಣ ಆಫ್ರಿಕ

ಬ್ರಿಟನ್‌ನಿಂದ ಬಂದು ನೇತ
ಅಟಕವಾಡಿ ಹೊರಟು ಹೋದ
ಸೆಟೆದುನಿಂದ 'ಕೂಲಿ' ಜನರ ಪಾಡು ಹೇಳಲು॥
ನಿಟಿಲ ಕಣ್ಣಿಗಂಗ ಸಾಧ್ಯ
ದಿಟಿದ ಗಾಂಧಿ ರೈಲಿನಲ್ಲಿ
ತಟದ ಟ್ರಾನ್ಸ್‌ವಾಲದಲ್ಲಿ ಪ್ರಿತನಗರಿಗೆ ॥೨೮೮॥

ಚೆಂದ ಗಾಂಧಿಯನ್ನು ಕಂಡು
ಕಂದಿದಾನನದಲಿ ಬಿಳಿಯ
ಮಂದಿ ರೊಚ್ಚಿಗೆದ್ದರಾಗ 'ಪರ್ಮಿಟ್ಟಿ'ಲ್ಲದೆ||
ಬಂದವನನು ಬಂಧಿಸುತ್ತ
ಬಂದಿ ಖಾನೆಯಲ್ಲಿ ಹಾಕಿ
ಮುಂದೆಯಾತ ಗಲಭೆ ಮಾಡದಂತೆ ತಡೆಯಲು ||೨೮೯||

ತಡೆಯಲಾಶಿಸಲ್ಕೆ ವಿವರ
ಒಡೆಯಿತಾಗ ಗಾಂಧಿ ಪರ್ಮಿ(ಟ್)
ಪಡೆದು ಬಂದುದಂತು ಯೇನುಮಾಡದಾದರು||
ಕಡೆಗು ಬಂದು ಯೇಶ್ಯದಿಂದೆ
ಒಡೆಯರಾಗಿ ನಿಂದ ಜನರು
ಘುಡುಘುಡಿಸುತ ನುಡಿದರಾಗ ಟ್ರಾನ್ಸ್‌ವಾಲದಿ ||೨೯೦||

ಗಾಂಧಿಯಿರಲು ಸಲ್ಲವೆನುಲು
ನಿಂದೆಯನ್ನು ಸಹಿಸಿ ಗಾಂಧಿ
ಬಂದಚೇಂಬರ್‌ಲೀನ ಭೇಟಿ ಮಾಡದಾದನು||
ದ್ವಂದ್ವಮಾನ ಹಾನಿಯಿಂದ
ನೊಂದಗಾಂಧಿ ಭಾರತೇಯ
ರೊಂದು ಗೂಡಿ ಸೆಣಸಲಿರುವ ಪರಿಯ ಚಿಂತಿಸಿ ||೨೯೧||

ಟ್ರಾನ್ಸ್‌ವಾಲ ಪ್ರಾಂತದಲ್ಲಿ
ಮುನ್ನಿನಂತೆ ಲಾಯರಾಗಿ
ಆನ್ನೆಗಲ್ಲಿ ಗಾಂಧಿ ನೆಲಸಿ ಕೋರ್ಟು ಕೆಲಸಕೆ||
ಇನ್ನು ಹೊರಟುನಿಂದ ವಾಸ
ವನ್ನು ಗೊತ್ತು ಮಾಡಿಕೊಂಡ
ಚೆನ್ನ ಜೊಹನಿ(ಸ್) ಬರ್ಗ್‌ನಲ್ಲಿ ನೆಲೆಯ ನಿಂತನು ||೨೯೨||

ಜೀವವಿಮೆಯ ಮಾಡಿಕೊಂಡು
ಜೀವನಿಧಿಯ ಬೆಳೆಸಿಕೊಂಡ
ಸಾವು ಬರುವಪರಿಗೆ ಜೀವವಿಮೆಯ ಮಾಡಿಸೆ||
ಕಾವದೇವ ಕಾಯುವಾಗ
ಜೀವಕೇಕೆ ವಿಮೆಯುಯೆಂದು
ಭಾವದಿಂದ ಯೋಚಿಸುವನು ಗಾಂಧಿ ವೀರನು ||೨೯೩||

ಕ್ರೈಸ್ತ ಜನರ ಸಂಗದಿಂದ
ಕ್ರಿಸ್ತನನ್ನು ತಿಳಿದಕೊಂಡ
ವಿಸ್ತರದಲಿ ಥಿಯಸಪಿಯನು ಓದಿ ತಿಳಿದನು॥
ಸ್ವಸ್ತಿಯೆನಲು ಗೀತೆಯೋದಿ
ಮಸ್ತಕದಲಿ ತುಂಬಿಕೊಂಡ
ಅಸ್ತುವೆನಲು ಸತ್ಯದಪರಿ ಗ್ರಹವ ತಿಳಿದನು ॥೨೯೪॥

ದೇವನಲ್ಲಿ ಸರ್ವವನ್ನು
ಭಾವಿಸುತ್ತ ಲರ್ಪಿಸಲ್ಕೆ
ಸಾವಿ ಗಂಜ ಬೇಡವೆಂದು ಗಾಂಧಿ ತಿಳಿಯುತ॥
ನೋವು ನಲಿವನೆಲ್ಲ ಹರಿಯ
ತಾವಿನಲ್ಲಿವೊಪ್ಪಿಸುತ್ತ
ತೀವಿ ಶೋಧ ಗೈದ ತನ್ನದಂತರಾಳವ ॥೨೯೫॥

ಶಾಖ ವ್ರತದಿ ಶೋದ ನಡೆಸಿ
ಏಕ ನಿಷ್ಠೆಯಿಂದ ಗಾಂಧಿ
ಪಾಕ ಮಾಡಿ ಶುದ್ದ ಭೋಜ್ಯವಸ್ತು ಸಾರವ॥
ಚೊಕ್ಕತನದಿ ಸೇವಿಸುತ್ತ
ಶಾಖಹಾರ ವಸತಿ ನಿಲಯ
ಗಕ್ಕರೆಯಲಿ ಹೋಗಿ ಭುಜಿಸಿ ತೃಪ್ತಿಗೊಳ್ಳುವ ॥೨೯೬॥

೧೦. ನೆಲ ಜಲ ಚಿಕಿತ್ಸೆ ಪ್ರಯೋಗ

ಮಲದ ಬದ್ಧತೆಯಲಿ ತಲೆಯು
ಸೆಲೆಯ ನೋವಿನಲ್ಲಿ ಬಳಲಿ
ಕಳವಳಿಸಲು ಪ್ರಕೃತಿ ಚಿಕಿತ್ಸೆ ಪುಸ್ತಕೋಜುತ॥
ತಿಳಿದಸಾಂಗ್ಲ ದೇಶದಲ್ಲಿ
ಗೆಳೆಯ ಬಳಗವೊಂದು ಹೊತ್ತು
ಫಲದ ಹಾರ ಬಿಡುವ ಪರಿಯ ಸುಗಮ ಜೀವಕೆ ॥೨೯೭॥

ಪ್ರಾತ ಕಾಲ ದೂಟ ಬಿಡಲು
ಖ್ಯಾತ ಗಾಂಧಿ ಪಡೆದ ಸುಖವ
ಸೋತು ಹೋಯ್ತು ತಲೆಯ ಸೆಲೆಯು ಗಾಂಧಿ ಪಥ್ಯಕೆ॥
ಉತ್ತಮಿಕೆಯ ಮಣ್ಣು ತೆಗೆದು
ಒತ್ತಿಯದನು ನೀರು ಬೆರೆಸಿ
ಮೆತ್ತಗದನು ಹೊಟ್ಟೆ ಮೇಲೆ ಹರಡಿ ಮಲಗುವ ॥೨೯೮॥

ಮಣ್ಣು ಮದ್ದು ಫಲವ ಕೊಡಲು
ತಣ್ಣಗಾಗಿ ಗಾಂಧಿ ನುಡಿದ
ನುಣ್ಣನೇಯ ಭೋಜ್ಯತಿನಸು ಜಲ ಚಿಕಿತ್ಸೆಯ ||
ಮೃಣ್ಮಯಗಳ ಫಲಕದಿಂದ
ಸಣ್ಣ ದೊಡ್ಡ ರೋಗಗಳನು
ತಣ್ಣಗಾಗಿ ಮಾಡಬಹುದು ವೈದ್ಯನಿಲ್ಲದೆ ||೯೯||

ಖಾದ್ಯ ಶಾಸ್ತ್ರದಲ್ಲಿ ಶೋಧ
ವಿದ್ಯೆಗಳನು ಮಾಡಿ ಗಾಂಧಿ
ಸದ್ಯ ತಿಳಿಯುತಂಶಗಳನು ಸರಳ ಹೊತ್ತಿಗೆ||
ಆದ್ಯ ಪ್ರಕಟಿಸುತ್ತ ನುಡಿದ
ಶುದ್ಧ ಜೀವ ಫಲವ ಮೇಣು
ಸಿದ್ಧ ಕಾಯಿ ರುಚಿಬದಾಮಿ ತಿಂದು ಜೀವಿಸೆ ||೩೦೦||

ದನದ ಹಾಲು ಯೆಮ್ಮೆಹಾಲು
ಮನುಜನಿಂಗಗತ್ಯವಿಲ್ಲ
ವೆನುತ ಗಾಂಧಿ ಕೊಂಡ ಭಾಷೆ ಕುಡಿಯೆನೆನ್ನುತ||
ತನುವು ಕ್ಷೀಣಗೊಳಲು ಬಳಲಿ
ಮನದಿನೆನೆಯುತಾಡ ಹಾಲು
ಒನಪಿನಿಂದ ಕುಡಿದು ದೇಹ ಬಲವಗಳಿಸಿದ ||೩೦೧||

ಹಾಲು ಮನುಜ ಜೀವನವನು
ಪಾಲಿ ಸಲ್ಕ ಗತ್ಯ ವೆಂದು
ಪೇಳಿಗಾಂಧಿ ಸತ್ಯ ನುಡಿದ ಹಾಲಿನಂಶದಿ|||
ಮೇಳಪಿಸಿದೆ ಜೀವಸತ್ವ
ಏಳಿಗೆಯೊಳಗೆಲ್ಲು ಸಿಗದು
ಹಾಲು ಕುಡಿದು ದೇಹ ಪೊರೆವನಾತ ಧನ್ಯನು ||೩೦೨||

ಲಂಚಕೊಟ್ಟು ದೇಶದೊಳಗೆ
ವಂಚಿಸುತ್ತ ಬರುವ ಜನರ
ಸಂಚು ತಿಳಿದ ಗಾಂಧಿರಕ್ಷಣಾಧಿಕಾರಿಯ||
ಮಿಂಚಿನೋಡಲಾತ ಬಿಡದೆ
ಹೊಂಚು ಹಾಕುವವರ ಪಿಡಿದು
ಪಂಚ ಸಾಕ್ಷ್ಯದೊಡನೆ ಕೋರ್ಟಿಗೊಯ್ದು ಬಿಟ್ಟನು ||೨೦೩||

ಕೋರ್ಟಿನಲ್ಲಿ ಕೇಸು ನಡೆದು
ಪಾರ್ಟಿಯನ್ನು ದೋಶಮುಕ್ತ
ರಟ್ಟಿರೆನಲು ಗಾಂಧಿನೊಂದ ಜೆಂದಮನದಲಿ॥
ಶಿಷ್ಟರೆಲ್ಲ ಹಿಂಸೆರಹಿತ
ಸ್ಪಷ್ಟತತ್ವ ಪಾಲಿಸಲ್ಕೆ
ಒಟ್ಟಿನಲ್ಲಿ ಜನರ ಮೇಲ್ಮೆ ಸಾಧ್ಯವೆಂದನು ॥೩೦೪॥

ನಾಲಗೇಯ ರುಚಿಗೆ ಮೆಚ್ಚು
ತೋಲ್ಯೆ ಸುತ್ತ ಮಧುರ ತಿನಸು
ಬಾಳತಿನ್ನಬಾರದೆಂದು ಮಿತವ ಹಿಡಿಯುತ॥
ಬಾಳಲಿಕ್ಕೆ ತಿನ್ನಬೇಕು
ಕೇಳಿ ತಿನಲು ಬಾಳಬಾರ
ದಾಲಿಸುತ್ತ ಗಾಂಧಿ ವ್ರತವ ನಿಷ್ಠೆಯಿಂದಲಿ ॥೩೦೫॥

ಪಾಲಿಸುತ್ತ ವ್ರತದ ದಿನದಿ
ಬಾಲಕೃಷ್ಣ ಜನ್ಮದಿನದಿ
ಮಾಲೆ ಧರಿಸಿ ಏಕದಶಿಯ ಪುಣ್ಯ ದಿನದಿಲ॥
ಫಲಾಹಾರ ಹೆಸರುಬೇಳೆ
ತೊಳೆದು ಬೇಯಿಸುತ್ತ ತಿಂದು
ಒಲಿದುದೇವ ಪ್ರೀತಿಗಾಗಿ ವ್ರತವ ಮಾಡಿದ, ॥೩೦೬॥

೧೧. ಪಶ್ಚಾತಾಪ

ಮನೆಯವೊಳಗೆ ಕೆಲವು ಜನರು
ದಿನದ ಕೆಲಸಕಾಗಿ ನೆಲಸಿ
ಅನುವು ಮಾಡುತೆಲ್ಲರೊಂದು ಬಾಳುತಿರುತಿರೆ॥
ಇನಿತು ಹಿಂದು ಕ್ರೈಸ್ತರೆಲ್ಲ
ಮನೆಯವೊಳಗೆ ವಾಸಿಸುತಿರೆ
ಅನಿತರೊಳಗೆ ದಳಿತ ಕ್ರೈಸ್ತನೋರ್ವನಿದ್ದನು ॥೩೦೭॥

ಮಡದಿಯೊಡನೆ ಗಾಂಧಿ ಮುದದಿ
ಗುಡಿಸಿ ಕೋಣೆಶೌಚ ಕೂಪ
ಇಡುತ ಶುಚಿಯ ಕಾರ್ಯವೆಲ್ಲ ತಾವೆ ಮಾಡುತ॥
ನಡೆದು ಬಂದ ದಳಿತ ಕ್ರೈಸ್ತ
ನಿಡುತ ಪಾತ್ರೆ ತೆಗೆಯದಿರಲಿ
ಕೊಡನೆ ಬಾಯಿಗೆಂದ ಗಾಂಧಿ ತೆಗೆದು ಪಾತ್ರೆಯ ॥೩೦೮॥

ಶುಚಿಯಗೊಳಿಸೆನಲ್ಕೆ ಬಾಯಿ
ಅಚಯಗೊಂಡು ಮುಟ್ಟೆನೆನಲು
ಕಚಪಿಸುತ್ತ ಗಾಂಧಿ ನುಡಿದ ಸಹಿಸೆನಿನ್ನಯ ||
ವಚನವನ್ನು ಹೇಳಿದಂತೆ
ಅಚಲ ಶ್ರದ್ಧೆಯಿಂದ ಮಾಡು
ಉಚಿತವರಿತುಯೆನಲು ಬಾಯಿ ಸಿಡಿದು ನಿಲ್ಲುತ ||೩೦೯||

ನಿಮ್ಮ ಮನೆಯು ನಿಮಗೆಯಿರಲಿ
ಹಮ್ಮಿನವರ ಜತೆಗೆಯಿರೆನು
ಕಮ್ಮಿಯಲ್ಲ ನಾನು ಹೊರಗೆ ಹೋಗಿ ಬಿಡುವೆನು||
ಅಮ್ಮ ನುಡಿದ ಮಾತಕೇಳಿ
ಘೂರ್ಮಿಸುತ್ತ ಗಾಂಧಿಯವಳ
ನೊಮ್ಮೆ ತಳ್ಳಿ ಕದವ ತೆಗೆದು ನೂಕ ತೊಡಗಿದ ||೩೧೦||

ಕಣ್ಣಿನಲ್ಲಿ ನೀರು ಸುರಿಸಿ
ಬಣ್ಣಿಸುತ್ತ ನುಡಿದಳ ಬಲೆ
ಹೆಣ್ಣುಯೆಂದು ನೂಕ ಬೇಡಿ ನಾಚಿಕಿಲ್ಲದೆ||
ಸಣ್ಣತನವ ಬಿಡಿರಿನಾನು
ವರ್ಣ ಬದಲು ದೇಶದಲ್ಲಿ
ಮಣ್ಣು ಮುಕ್ಕಲೆಲ್ಲಿ ತೆರಳಿ ಬಾಳಲೆಂದುಳು ||೩೧೧||

ಪತ್ನಿ ಮರುಗುತಿರಲು ನೋಡಿ
ಯತ್ನವಿಲ್ಲದಂತೆ ಗಾಂಧಿ
ಚಿತ್ತದಿಂದನೊಂದು ಪಶ್ಚತಾಪ ಪಡುತಲಿ||
ಮತ್ತೆ ಕದವ ಮುಚ್ಚಿಯವಳ
ನಿತ್ಯದೊಲವು ತಾಳಿ ಮುನಿದ
ಕೃತ್ಯಕ್ಕಾಗಿ ನಾಚಿಕೊಂಡ ಸತಿಯು ಪತಿಯರು ||೩೧೨||

ಒಬ್ಬರೊಬ್ಬರನ್ನು ಅರಿತು
ಸದ್ಭಯಕೆಯ ಜೀವನದೊಳು
ಇಬ್ಬರೊಂದೆ ಮನದಿಯಿರಲು ಗೃಹದಿತೋಷವು||
ಪರ್ಬಿ ಮೆರೆವುದಿದುವೆಸತ್ಯ
ಒಬ್ಬಮೇಲುವೊಬ್ಬಕೀಳು
ಅಬ್ಬರಿಸುತರಿಬ್ಬರಿರಲು ಶಾಂತಿ ಭಂಗವು ||೩೧೩||

---

*ಅಚಯ = ಅಸತ್ಯ

೧೨. ಇಂಡಿಯನ್ ಒಪೀನಿಯನ್

ಕಾರಕೂನರಲ್ಲಿ ಕೆಲರು
ಭಾರತೀಯರಿದ್ದರಲ್ಲಿ
ತೀರ ಬೆರಳಿನಚ್ಚು ಕೆಲಸಕಾಗಿ ತರುಣೆಯು॥
ತೋರುತಿಚ್ಛೆನಿಂತಳಲ್ಲಿ
ಭಾರಿಕರುಣೆಯಿಂದ ಗಾಂಧಿ
ದಾರಿತೋರಿ ಕೆಲಸ ಪಡೆದು ಮುದವಗೊಂಡನು ॥೩೧೪॥

ಇಂಡಿಯನ್ ಒಪೀನಿಯನ್
ಕಂಡು ಹಿಡಿದು ಪತ್ರಿಕೆಯನು
ಮಂಡಿಸಲ್ಕೆ ಭಾರತೀಯ ವೀರವಾಣಿಯ॥
ಖಂಡಿತಾತ್ಮ ಬರಹಗಳನು
ಹಿಂಡಿ ಬರೆದು ಗಾಂಧಿಯಲ್ಲಿ
ಚಂಡ ವಾರ ಪತ್ರಿಕೆಯನು ನಡೆಸುತಿದ್ದನು ॥೩೧೫॥

ಮನಕೆ ಹಿಡಿದ ಕನ್ನಡಿಯೊಲು
ದಿನದ ಘಟನೆ ಸರಪಣಿಯೊಲು
ವಿನುತವಾಣಿ ಮೊಳಗುತಿತ್ತು ಘನತೆಗೊಳ್ಳುತು॥
ಇನಿತು ಭಾರತೀಯ ಜನದ
ಮನದ ಬಯಕೆಯೊಂದು ಗೂಡಿ
ಅನುವರವನು ಸತ್ಯಪಥದೆ ನಡೆಸಲೋಸುಗ ॥೩೧೬॥

'ಕೂಲಿ' ಜನರ ವಾಸಬೇರೆ
ಪಾಳೆಯವದು ಬೇರೆಯಿತ್ತು
ಬಾಳಬಾರದವರು ಮೇಲುವರ್ಗ ಜನರೊಳು॥
ತಾಳಿಗಾಂಧಿ ಕೂಲಿಜನರ
ಬಾಳ ಕಷ್ಟಕಾಗಿಕೋರ್ಟು
ಮೇಳದಲ್ಲಿ ಗೆಲುವ ತಂದ ಜನರ ಸೇವೆಗೆ ॥೩೧೭॥

ಭಾರತೀಯ ಜನರು ಕಷ್ಟ
ಭಾರದಿಂದ ನರಳುತಿರಲು
ತೋರಿತಲ್ಲಿ ಪ್ಲೇಗು ರೋಗ ಕಠಿಣ ರೂಪದಿ॥
ಧೀರ ಮದನ ಜೀತನಾಗ
ತೋರಿದಯವ ಮನೆಯ ತೆರೆದು
ಮೀರಿ ಬಳಲುವವರನಲ್ಲಿ ಕರದು ತಂದನು ॥೩೧೮॥

ಪತ್ರ ಬರೆದು ಗಾಂಧಿ ಗರುಷೆ
ವ್ಯರ್ಥ ಸಮಯ ಕಳೆಯದಾಗ
ಮಿತ್ರ ಗಾಂಧಿ ಬಂದು ಜನರ ಸೇವೆಗೆನುತಲಿ||
ಅರ್ತಿಯಿಂದನಿಂದವಲ್ಲಿ
ವೃತ್ತಿಯಿಂದ ವೈದ್ಯ ಗಾಡ್ ಫ್ರೆ
ಮೃತ್ಯುಮುಖದ ಜನಕೆ ಮದ್ದು ಕೊಡಲು ನಿಂತನು ||೩೧೯||

ಪೌರಸಭೆಯ ಸಲಹೆ ಕೇಳಿ
ಬೇರೆಯೊಂದು ತಾಣದಲ್ಲಿ
ತೀರ ಬಳಲಿನೊಂದರೋಗಿಗಳಿಗೆ ವಸತಿಯ||
ತೋರಲಾಯ್ತುದಾದಿ ಬಂದು
ತೋರಿ ದಯವ ನೆರವನೀಡಿ
ಬಾರಿ ಬಾರಿಗಲ್ಲಿ ಬಂದು ನೋಡುತಿದ್ದಳು ||೩೨೦||

ಕುಡಿಯದಿರುವ ರೋಗಿಗಂದು
ಬಿಡದೆ ಗಾಂಧಿ ಮಣ್ಣುಲೇಪ
ಪಡೆದ ಚಿಕಿಸೆ ನೀಡಿರೋಗ ಶಮನ ಗೈಯಲು||
ನಿಡು ಪ್ರಯತ್ನ ಗೈಯುತಿರಲು
ಕಡೆಗು ರೋಗ ತಗಲಿದಾದಿ
ಒಡೆಯನಲ್ಲಿ ಸೇರು ತಮರ ಶಾಂತಿ ಪಡದಳು ||೩೨೧||

ದೈವ ಕೃಪೆ ಸಹಾಯದಿಂದ
ಐವರಲ್ಲಿಯುಳಿದು ಕೊಳಲು
ಸಾರ್ವ ಅಂಟು ರೋಗ ಕಾಲದಲ್ಲಿ ಗಾಂಧಿಯು||
ಭವ್ಯ ಭೋಜನಗಳ ತೊರೆದು
ನವ್ಯವಾದ ಸರಳ ಭೋಜ್ಯ
ದಿವಸಕೊಮ್ಮೆ ತೆಗೆದುಕೊಂಡು ಸುಖದಲಿದ್ದನು ||೩೨೨||

ರಸ್ಕಿನ್ ಬರೆದು ಕಾವ್ಯಧಾರೆ
ಪುಸ್ತಕವನು ಗಾಂಧಿಯೋದಿ
ವಸ್ತುವರಿತು ಪುಳಕಗೊಂಡ ದಿವ್ಯಭಾವಕೆ||
ಸ್ವಸ್ತಿ 'ಅಂಟು ದಿಸ್ ಲಾಸ್ಟ್'
ವಿಸ್ತರದಲಿ ವರ್ಣಿಸಿದ್ದ
ಅಸ್ತು ತತ್ವದಲ್ಲಿ ಕ್ರಾಂತಿ ಬೆಳಕು ಕಂಡಿತು ||೩೨೩||

ಮದನ ಜೀತ್ = *ಇಂಡಿಯನ್ ಒಪೀನಿಯನ್ ಪತ್ರಿಕೆಯ ಸಂಪಾದಕ*

ಲೋಕ ಕ್ಷೇಮದಲ್ಲಿ ಮನುಜ
ನೇಕ ಕ್ಷೇಮವಿಹುದು ನೋಡೆ
ಏಕ ಮನದಿ ವಕಿಲ ನಿಖಿಲ ವೃತ್ತಿಯೆಲ್ಲವು॥
ಕಾಕತಾಳದಿಂದ ಕ್ಷೌರ
ತಾಕುವವನ ವೃತ್ತಿಯೆಲ್ಲ
ನೂಕೆಜೀವ ಪಥವ ಸಮದ ಮೌಲ್ಯ ವಿರ್ಪುದು ॥೩೨೪॥

ಕರ್ಮಕುಶಲಿ ಕೃಷಿಯ ಜೀವ
ಕಮ್ಮಿಯೆನದೆ ಕೈಯ ಕೆಲಸ
ವೊರ್ಮನದಲಿ ಮಾಳ್ಪರೆಲ್ಲ ಘನದ ಬಾಳನು॥
ಧರ್ಮಪಿಡಿದು ನಡೆಸುತಿಹರು
ಪೆರ್ಮೆಯಿಂದಲೊಂದಕೊಂದು
ಕರ್ಮಫಲದಿ ಹೆಣೆದು ಕೊಂಡಪರಿಯು ಸೋಜಿಗ ॥೩೨೫॥

೧೩. ಫೀನಿಕ್ಸ್ ಆಶ್ರಮ

ಎಲ್ಲರೊಡನೆ ಬಾಳಿಕರ್ಮ
ಸೊಲ್ಲ ತಿಳಿಯೆ ಗಾಂಧಿ ಮಿತ್ರ
ರೆಲ್ಲ ಗೂಡಿ ದರ್ಬನಗರಸನಿಹದಲ್ಲಿಯೆ॥
ಪುಲ್ಲವಿಸುವ ಜಾಗನೋಡಿ
ಬಲ್ಲಕ್ರಯಕೆ ಕೊಳುತಲದನು
ಮೆಲ್ಲನಾಶ್ರಮವನು ಹೊಸೆದು ಪುಳಕ ಗೊಂಡರು ॥೩೨೬॥

ಗಾರೆ ಕೆಲಸ ಬಡಗಿ ಕೆಲಸ
ಪೂರಗೊಡೆ ಬೀಡು ಕೆಲಸ
ದೂರದಿಂದ ತಂದವಸ್ತುವೆಲ್ಲ ಸೇರಿಸಿ॥
ಏರಿನಿಂತ ಮಹಲ ಕಂಡು
ಮೀರಿತೋಷದಿಂದ ಗಾಂಧಿ
ಸಾರುತಲ್ಲಿ ನೆಲೆಯನಿಂತ ಮಿತ್ರರೊಂದಿಗೆ ॥೩೨೭॥

ವಾರ್ತಪತ್ರ ಮುದ್ರಣಕ್ಕೆ
ಇತ್ತು ಅಲ್ಲಿ ನಿಜದ ತಾಣ
ಅತ್ಯಗತ್ಯ ವಸ್ತುವೆಲ್ಲವಲ್ಲಿ ದೊರಕಲು॥
ಮಿತ್ರ ಬಂಧುರಿಷ್ಟ ಜನರು
ತ್ವರ್ತದಿಂದ ಸೇರ್ದರಲ್ಲಿ
ಸ್ವಾರ್ಥಿಗಳಿಗೆ ತಾಣ ಸಿಗದು ಸೇವ ಧರ್ಮಕೆ ॥೩೨೮॥

ಒಪ್ಪಿ ಬಂದ ಜನಕೆ ನಿಲುವು
ತಪ್ಪದಂತೆ 'ಪ್ರೆಸ್ಸು' ನಡೆಸೆ
ಅಪ್ಪಿ ಬಂದಿತೊಂದು ತೈಲ ಯಂತ್ರ ಮುದದಲಿ||
ತಪ್ಪಿನಿಂದ ಯಂತ್ರ ನಿಲಲು
ಇಪ್ಪವೊಂದು ಕೈಯ ಚಕ್ರ
ಸಪ್ಪಳೆ ಸಗಿ ಬಂದಿತಲ್ಲಿ ಬದಲಿಯಿಂಧನ ||೩೨೯||

ಯಂತ್ರ ತಪ್ಪೆ ಚಕ್ರ ಚಲಿಸಿ
ಸ್ವಂತ ಕೈಯ ಕೆಲಸದಿಂದ
ವ್ಯಂತವಿಲ್ಲದಂತೆ ನಡೆದು ಪತ್ರಿಕೋದ್ಯಮ||
ಶಾಂತಿಯಿಂದ ಮುಂದುವರಿದು
ನಿಂತು ಹೋದ ಕೆಲಸವೆಲ್ಲ
ಸ್ವಂತ ದೇಹ ಶ್ರಮದ ಬಲದಿ ನಡೆಯ ಸಾಗಿತು ||೩೩೦||

ಮನೆಯ ಕಟ್ಟಿ ಸನಿಹದಲ್ಲಿ
ಅನುದಿನದಲಿ ದುಡಿದು ಬರೆದು
ವಿನುತಸಿದ್ಧ ಸಂಗಡಿಗರವೊಲವಿನೊಂದಿಗೆ||
ಘನದ ಪತ್ರಿಕೆಯಲಿ ಕೆಲಸ
ವನವರತದ ಸುದ್ದಿ ಪ್ರಕಟ
ಇನಿತರಿಂದ ಕಾರ್ಯಹೊಸಲು ಹರಿಯುತಿದ್ದಿತು ||೩೩೧||

ಇರುಲು ಗಾಂಧಿಯಾಶ್ರಮದಲಿ
ಬರಲು ಮಡದಿ ಮಕ್ಕಳಾಗ
ಶರಧಿ ದಾಂಟಿ ಹಡಗಿನಲ್ಲಿ ಪಿನಿಕ್ಸ್ ವಸತಿಗೆ||
ಅರಿತಗಾಂಧಿ ರಾಮದಾಸ
ಕಿರಿಯ ತನಯ ಹಡಗಿನಲ್ಲಿ
ಮುರಿದು ಕೈಯ ಗಾಯದಿಂದ ನರಳು ತಿದ್ದುದ ||೩೩೨||

ತ್ವರಿತದಿಂದ ಗಾಂಧಿಯವಗೆ
ಮರಳಿ ಮಣ್ಣತಂದು ಪಟ್ಟಿ
ಯುರುಳಿ ಕಟ್ಟಿಕೈಯು ಮುರಿದ ನೆಲೆಗೆ ಪೋಷಣೆ ||
ನೆರೆದು ಮಾಡಿ ಪ್ರಕೃತಿಮದ್ದು
ಸರಳ ತನದೆ ಪಾಲಿಸುತಿರೆ
ಕಿರಿಯ ತರಳ ರಾಮದಾಸ ಗುಣವ ಪಡೆದನು ||೩೩೩||

ಪೊಲಕ್ ವೆಸ್ಟ್‌ಯೆನ್ನುವವರು
ಪಾಲಿಸುತ್ತ ಗಾಂಧಿವಚನ
ಮೇಲೆನಿಂತರಾಶ್ರಮದಲಿ ವನಿತೆಯೊಂದಿಗೆ||
ಹೇಳಲೇನು ಶ್ವೇತ-ಕೃಷ್ಣ
ಮೇಲ ಬಣ್ಣಕಲ್ಲಿ ಭೇದ
ಕೇಳ್ದರಿಲ್ಲ ಸಂಘ ಜೀವದಲ್ಲಿ ಬಾಳ್ವರು ||೩೩೪||

ಸರಳಬಾಳ್ವೆ ನಡೆಸುತೆಲ್ಲ
ಭರದಿ ಬ್ರೆಡ್ ಮಾಡ ತಿಳಸಿ
ಕರದಿ ಕೆಲಸ ಮಾಡುವಂಥಗಿರಣಿ ಕೊಳ್ಳುತ||
ಸರುವರವರು ಗೋಧಿ ಹುಡಿಯ
ತ್ವರಿತದಿಂದ ಮಾಡಿ ರೊಟ್ಟಿ
ಬಿರುಸಿನಿಂದ ಹುರಿಯುತ್ತಿದ್ದ ಪರಿಯ ಕೇಳ್ವುದು ||೩೩೫||

ಕಸದ ತೊಟ್ಟಿ ಶುದ್ಧ ಮಾಡೆ
ಬಿಸುಡುವವರು ದೂರ ಕೊಯ್ದು
ತುಸುವು ಹೇಸಿಕೊಳದೆ ತೊಳೆದ ಶೌಚ ಕೂಪವ||
ಹೊಸೆದು ತಾವೆ ಶುಚಿಯ ಗೊಳಿಸಿ
ಪಸರಿಸುವರು ವಿವಿಧ ಕೆಲಸ
ಒಸಗೆ ಪೇಳೆಲೇನು ಗಾಂಧಿ ತನುಜರೆಲ್ಲರು ||೩೩೬||

ಅನುಭವವೇ ಶಾಲೆಯಾಗೆ
ತನುಜರೆಲ್ಲ ನೈಜ ವಿದ್ಯೆ
ಮನೆಯ ಪರಿಸರಂಗಳಲ್ಲಿ ಕಲಿತುಕೊಂಡರು||
ಮನೆಯ ಮಾತು ಮಾತೃಭಾಷೆ
ಸನಿಹದಲ್ಲಿಯಾಂಗ್ಲ ಭಾಷೆ
ಇನಿತು ಉಭಯ ಭಾಷೆಗಳಿಳಲಿ ಪ್ರಗತಿ ಪಡೆದರು ||೩೩೭||

೧೪. ಝೂಲೂದಂಗೆ

ಝೂಲೂದಂಗೆ ನಡೆಯಲಾಗ
ಕಾಲಕಳೆಯಲಾರ ಗಾಂಧಿ
ಮೇಳವಿಸುತವಾಹನವನುಸಾರಿ ಕ್ಷೇತ್ರಕೆ||
ದಾಳಿಯಲ್ಲಿ ಗಾಯಗೊಂಡ
ಝೂಲು ಜನರ ಸೇವೆಗೈದು
ಪಾಲಿಸಿದನು ಸೇವವ್ರತವ ನಿಷ್ಠೆಯಿಂದಲಿ ||೩೩೮||

ಗಾಯಗೊಂಡ ಝಳುಲುಗಳನು
ಕಾಯುವಂತೆ ಬಿಗಿದು ಬಟ್ಟೆ
ಕಾಯಕೆಲಮದ್ದು ಹಚ್ಚಿ ಸಾವು ನೋವಿಲಿ||
ಧ್ಯೇಯವನ್ನು ಸಾಧಿಸುತ್ತ
ನ್ಯಾಯ ತನದೆ ಸೇವೆಗೈದು
ಬಾಯಿಮಾತಿಗಿಂತ ಕಾರ್ಯ ಮಹತ ತೋರಿದ ||೩೭೯||

ದಂಗೆಯಡಗಿ ಹೋದ ಮೇಲೆ
ಸಂಗರಹಿತ ಜೀವನದಲಿ
ತುಂಗ ಬ್ರಹ್ಮಚರ್ಯ ಪಾಲಿಸುತ್ತ ಬ್ರಹ್ಮನ ||
ಸಂಗವಿರಲಿ ಕಾಶಿಸುತ್ತ
ಅಂಗಸಂಗ ತೊರೆದು ಸತಿಯ
ವಿಂಗಡಿಸುತ ಜೀವನದೊಳಗೇಕನಿಷ್ಠೆಯ ||೩೮೦||

ಭಕ್ತಿ ದೇವನಲ್ಲಿಯಿಟ್ಟು
ಯುಕ್ತಿಯಿಂದ ರಾಮನಾಮ
ಸೂಕ್ತಿಯನ್ನು ಭಜಿಸಿ ನಿತ್ಯ ಶ್ರದ್ಧಭಾವದಿ||
ಶಕ್ತನಾದ ದೇವ ಪದವಿ
ರಕ್ತಿಯಿಂದ ಶರಣು ಹೊಗಲು
ಮಿಕ್ಕುದೆಲ್ಲ ದೇವನಿಚ್ಛೆಯೆಂದು ಸಾರಿದ ||೩೮೧||

ಆತ್ಮ ಶುದ್ಧಿಗಾಗಿನಿಯತಿ
ಯತಿಯಿಂದ ಬ್ರಹ್ಮಚರ್ಯ
ಮಿಥ್ಯವೊಡೆಯೆ ಬ್ರಹ್ಮನನ್ನು ನಿತ್ಯವರಸುತ||
ಸತ್ಯಕಾಗಿ ಸೆಣಸುವಂಥ
ಸ್ಫೂರ್ತಿಸತ್ಯಗ್ರಹವ ಹೂಡೆ
ನಿತ್ಯ ಶಕ್ತಿಗಳಿಸಿ ಗಾಂಧಿಯೋಗಿಯಾದನು ||೩೮೨||

ಅಸಹಕಾರ ಸಮರಕಾಗಿ
ಹೊಸತು ಹೆಸರು ಹುಡುಕುವಂತೆ
ಬೆಸಸಿ ಪತ್ರಿಕೆಯಲಿ ಪ್ರಕಟಗೊಳಿಸಲು||
ಬಸಗೆಯೋದಿ ಮಗನಲಾಲ
ಪೊಸತು ಹೆಸರು ಸದಾಗ್ರಹವ
ಹೊಸೆದು ಕೊಟ್ಟ ಗಾಂಧಿಯದಕೆ ನವ್ಯರೂಪದ ||೩೮೩||

ಇತ್ತು 'ಸತ್ಯಾಗ್ರಹ'ದಪೆಸರ
ಅರ್ತಿಯಿಂದ ನೀಡೆಮುಂದೆ
ಸತ್ಯ ಶೋಧಕಾರಿ ದಕ್ಷಿಣಾಫ್ರಿಕಾದಲಿ||
ಬಿತ್ತರಿಸುತ ಸತ್ಯಸಮರ
ಸ್ಫೂರ್ತಿಯನ್ನು ನೀಡಿ ಜನಕೆ
ಸತ್ಯ ಶೋಧವಾತ್ಮಕಥೆಯ ನೊರೆದ ಜೈಲಲಿ ||೨೪೪||

೧೫. ಗೃಹ ಸತ್ಯಾಗ್ರಹ

ಪತ್ನಿತೀವ್ರ ರೋಗದಲ್ಲಿ
ಯತ್ನವಿಲ್ಲದಂತೆ ಬಾಧೆ
ಮುತ್ತಿ ಬಳಲುತಿರಲು ವೈದ್ಯ ಮಾಂಸಹಾರವು||
ಅತ್ಯಗತ್ಯವಿದಕೆಯೆನಲು
ಪತ್ನಿಪತಿಯರದನು ಸಹಿಸ
ದರ್ತಿಯಿಂವಿರೋಧಿಸಲ್ಕೆ ವೈದ್ಯ ಗುಡುಗುತ ||೨೪೫||

ಭೇಡಿಸಲ್ಕೆ ಗಾಂಧಿನೊಂದು
ಬಾಡಿಮೊಗದೆ ಪತ್ನಿಗಾಗ
ನೀಡಿ ಜಲಚಿಕಿತ್ಸೆ ಗುಣವ ಪಡಿಸಿಮೋದದಿ||
ಬೇಡ ಮಾಂಸ ಮಡ್ಡಿ ಸಾರು
ಬಾಡಿಹೋದ ಸತಿಗೆ ಶುದ್ಧ
ನಾಡಿನೌಷಧಿಯನು ಕೊಟ್ಟು ಗುಣವ ಪಡಿಸಲು ||೨೪೬||

ಮತ್ತೆ ಗಾಂಧಿ ಶೋಧ ನಡೆಸಿ
ಪತ್ಯದಿಂದ ಕಾಹಿಲೆಯನು
ಯತ್ನದಿಂದ ಗುಣವ ಪಡಿಸಲುಪ್ಪು ಬೇಳೆಯ||
ನಿತ್ಯ ಬಳಕೆಯನ್ನು ಬಿಟ್ಟು
ಪತ್ನಿಗದಮ ಬೋಧಿಸಲ್ಕೆ
ಯತ್ನವಿಲ್ಲದವಳು ತೊರೆದು ಗುಣವಪಡೆದಳು ||೨೪೭||

ಗಾಂಧಿ ತತ್ವ ಬಹಳವಿಹುದು
ಅಂದು ಗಾಂಧಿ ಹಾಲು ತೊರೆದು
ಚಂದದಿಂದ ಬಾಳೆಹಣ್ಣು ಕಡಲೆ ತಿನ್ನುತ||
ಎಂದಿನಂತೆ ಖರ್ಜುರವನು
ಮುಂದೆ ನಿಂಬೆರಸದ ನೀರು
ಒಂದು ಗೂಡಿಸುತ್ತ ಬಹಳ ಶೋಧ ಗೈದನು ||೨೪೮||

ಶುದ್ಧ ತನವಗಳಿಸಿಕೊಂಡು
ಅದ್ದಿ ದೇಹ ಮನವ ನೀಶ
ಮುದ್ರೆಯಲ್ಲಿ ಕಳೆದುಯೋಗಿಯಾಗಿಬಾಳುತ॥
ಶುದ್ಧಮನಕೆ ಶುದ್ಧದೇಹ
ವಿದ್ಯಮಾನಗತ್ಯವೆನುತ
ಬದ್ಧ ಸರಳ ತನದೆ ಬ್ರಹ್ಮವಿದ್ಯೆಯರಿತನು ॥೩೪೯॥

ಶ್ರವಣ ಮಾಸ ಪುಣ್ಯದಿನದೆ
ದಿವಸನೆಲ್ಲವಶನ ತೊರೆದು
ಭವದ ಸುಖವತೊರೆಯಲಿಕ್ಕೆ ಹರಿಯ ವ್ರತಗಳ॥
ನಿವಹದಲ್ಲಿಯೇಕದಶಿಯ
ತವಕದಿಂದ ನಿರ್ವಹಿಸುತ
ಶಿವನ ಚಿಂತನೆಯಲಿ ತೊರೆವ ಭುಜಿಪ ವಸ್ತುವ ॥೩೫೦॥

೧೬. ಮೂಲ ಶಿಕ್ಷಣದ ನಾಂದಿ

'ಟಾಸ್‌ಸ್ಟಾಯಿ' ಫಾರ್ಮಿನಲ್ಲಿ
ಬಾಲರಿಂಗೆ ಶಾಲೆ ಬೇಕು
ಹೇಳಲಲ್ಲಿ ಒಂದು ಕ್ರೈಸ್ತ ಮುಸಲಮಾನರ॥
ಬಾಲರಿಂಗೆ ಶಿಕ್ಷಣವನು
ಕಾಲಕಾಲದಲ್ಲಿ ಕೊಡಲು
ಶಾಲೆಯನ್ನು ರೂಪಿಸಿದನುಯೋಗಿ ಗಾಂಧಿಯು ॥೩೫೧॥

ಹೃದಯ ಸಂಸ್ಕೃತೀಯು ಬೆಳೆಯೆ
ಸದಮಲದಲಿ ಶೀಲನಡತೆ
ಯೊದಗಿ ಬಹುದು ಶೀಲರಚನೆ ವಿದ್ಯೆ ಮೂಲವು॥
ಸದಯ ಗಾಂಧಿ ಗುರುಕುಲದಲಿ
ಪದುಳದಿಂದ ಯಾಜಮಾನ್ಯ
ಮುದದೆವಹಿಸಿ ಶಿಷ್ಯರಿಂಗೆ ವಿದ್ಯೆಕಲಿಸುತ ॥೩೫೨॥

ಅಡಿಗೆ ಕೆಲಸ ತೋಟ ಕೆಲಸ
ತೊಡಿಗೆ ಪಾತ್ರೆ ತೊಳೆವ ಕೆಲಸ
ಹುಡುಗರೆಲ್ಲಮಾಡಿ ಶುಚಿಯ ನೋಡಿ ಕೊಳ್ವರು ॥
ಗಡಿಗೆ ನೀರು ತರುವ ಕೆಲಸ
ಒಡೆದು ಕುಂಟೆ ಸೌದೆ ಕೆಲಸ
ಮಿಡಿದು ಗುಂಡಿ ಗಿಡವ ನೆಡುವ ಕೈಯ ಕೆಲಸವೂ ॥೩೫೩॥

ಗುರುಗಳಾದಿಯಾಗಿ ದುಡಿದು
ಸರುವರಲ್ಲಿ ಕೈಯ ಕೆಲಸ
ಮರದ ಕೆಲಸ ಪಾದರಕ್ಷೆ ಹೊಲಿವ ಕೆಲಸವು||
ಗರುವ ತೊರೆದು ದುಡಿಮೆ ಹಿರಿಮೆ
ಸಿರಿಗಣಾಧಿವಿದ್ಯೆ ಕಲಿತು
ತರಳರೆಲ್ಲ ದೇಹಮನದ ಬಲವ ಪಡೆದರು ||೩೫೪||

ಕೆಲಸದಿಂದ ಬಳಲುತೆಲ್ಲ
ವಿಲಪಿಸುತ್ತ ರಾತ್ರೆ ನಿದ್ರೆ
ಯೊಲವಿ ನಿಂದ ಮಾಡಿ ಹಗಲಿ ನರ್ಧಭಾಗದಿ||
ಹೊಲದ ಕೆಲಸ ಮನೆಯ ಕೆಲಸ
ತಿಳಿವಿನಿಂದ ಮಾಡಿ ಮುಗಿಸಿ
ಚೆಲುವ ಶಾಲೆ ಕೆಲಸ ಮತ್ತೆ ನಿಯತ ಕಾಲದಿ ||೩೫೫||

ತಮಿಳು 'ಉರ್ದು' ಹಿಂದಿ ಸಂಸ್ಕೃತ
ಸಮದ ಗುಜರಭಾಷೆ ಗಣಿತ
ವಿಮಲ ಚರಿತೆ ಭೂಮಿ ಶಾಸ್ತ್ರಯೆಲ್ಲ ವಿಷಯದ ||
ಕ್ರಮದ ಮಾತೃ ಭಾಷೆಯಲ್ಲಿ
ಸುಮನರಿಂಗೆ ಕಲಿಸುತಾಂಗ್ಲ
ಶ್ರಮದ ಭಾಷೆ ಸಹಿತ ಬೋಧಿಸುತ್ತ ಹರ್ಷದಿ ||೩೫೬||

ಮಿತ್ರ ಬೋಧ ಕರುಗಳೊಡನೆ
ಅರ್ತಿಯಿಂದ ಗಾಂಧಿ ಶಿಷ್ಯ
ವೃತ್ತರಿಂಗೆ ಬೋಧಿಸಿದನು ಸರಳ ತನದಲಿ||
ನಿತ್ಯಪಠ್ಯ ಪುಸ್ತಕಗಳ
ಹೊತ್ತ ಹೊರೆಯುಯಿಲ್ಲದಿರಲು
ಮತ್ತೆ ಗುರುವು ಮುಖದೆ ಕಲಿವ ತರಳರಸಿಬರು ||೩೫೭||

ಧರ್ಮ ಶಿಕ್ಷೆ ನೀತಿ ಶಿಕ್ಷೆ
ಕರ್ಮಕಾಗಿ ಕಾಯಶಿಕ್ಷೆ
ನಿರ್ಮಲಾಂತ ಕರಣವುಳ್ಳದಾತ್ಮವಿದ್ಯೆಯು||
ಮರ್ಮವಹುದದಾತ್ಮ ವಿದ್ಯೆ
ನೆಮ್ಮಿ ಕಲಿಯಲಾತ್ಮ ಬಲದೆ
ಕರ್ಮಜ್ಞಾನ ಭಕ್ತಿ ಮಾರ್ಗವೊಲಿದು ಬಪ್ಪುದು ||೩೫೮||

ಶಿಸ್ತು ಶೀಲ ನಿಯಮವೆಲ್ಲ
ವಸ್ತುವಾಗೆ ಶಿಕ್ಷಕ್ರಮದೆ
ವಿಸ್ತರಿಸಲ ಸಾಧ್ಯಾ ಬಾಲರೆಲ್ಲರುದಯವ||
ದುಸ್ತರದಲಿ ಬೆತ್ತ ಶಿಕ್ಷೆ
ಕಸ್ತುವೆನಲದಾತ್ಮ ಪ್ರಭೆಯು
ಸುಸ್ತಿಯಾಗಿ ಕುಂದಿಹೋಗಿ ತೇಜವಳಿವುದು ||೩೫||

ಕೆಟ್ಟಬಾಲರಿದ್ದರಲ್ಲಿ
ಒಟ್ಟಿನಲ್ಲಿ ಶಿಕ್ಷೆ ಪಡೆದು
ಶಿಷ್ಟಬಾಲರೆಲ್ಲರರಿವ ತಂದು ಕೊಳುವರು||
ಕೆಟ್ಟನಡತೆಯೊಳ್ಳೆ ನಡತೆ
ಇಟ್ಟು ತೂಗಿ ತಿಳಿವರವರು
ಕೆಟ್ಟಬಾಲರನ್ನು ಮೆಟ್ಟಿ ತುಳಿಯಲಾಗದು ||೩೬೦||

ಒಮ್ಮೆ ತರಳರಿಬ್ಬರಲ್ಲಿ
ಕಮ್ಮಿ ತನದ ಕೃತ್ಯಕಿಳಿಯೆ
ನೆಮ್ಮಿಗಾಂಧಿ ಶಾಂತಿಗಾಗಿ ತಪವಗೈಯಲು||
ಬರ್ಮೆಯಿಂದ ನಿರಶನದಲಿ
ಪರ್ಮಿಯೇಳು ದಿನದೆ ತನುವ
ದಮ್ಮಿ ಸಲ್ಕೆ ಕೆಟ್ಟಬಾಲರರಿತು ತಪ್ಪನು ||೩೬೧||

ಎರಡು ಬಾರಿ ಪಕ್ಷದವಧಿ
ಯಿರುತ ನಿರಶನವ್ರತದಿ
ಭರಿತನೊಂದು ಗಾಂಧಿ ರಾಮನಾಮ ಮಹಿಮೆಯ||
ಅರಿತುಕೊಂಡು ದೇಹಬಳಲಿ
ಪರರ ತಪ್ಪಿಗಾಗಿನೊಂದು
ಕರುಣೆಯೇಸುವಂತೆ ತೋರ್ದಚಾಗ ಮಹಿಮೆಯ ||೩೬೨||

೧೭. ಜಾಗತಿಕ ಯುದ್ಧ ಘೋಷ

ಗೋಖಲೇಯ ಕರೆಯಕೇಳಿ
ಸಾಕು ಮಾಡಿ ತೆಂಕಲಾಫ್ರ
ಬೇಕುಯೆಂದೆ ಪಯಣ ಬೆಳಸುತಾಂಗ್ಲ ದೇಶಕೆ||
ನೂಕಿ ಪಯಣ ಹಡಗಿನಲ್ಲಿ
ಸಾಕಿ ದೇಹ ಫಲದೆ ಜಲದೆ
ನೌಕೆ ಸೇರೆ ಸೌತ್ ಹೇಂಪ್ಟರ್ನ್‌ಸೇರ್ದ ಲಂಡನ್ ||೩೬೩||

ಜಾಗತೀಕ ಯುದ್ಧ ಘೋಷ
ಆಗಲಾಗಿ ಜಗವು ಘೋರ
ಬೇಗೆಯಿಂದ ಬಳಲುತಿರಲು ಗಾಂಧಿ ನೋಡುತ ||
ಹೋಗೆ ಯುದ್ಧ ಕ್ಷೇತ್ರ ಕಲ್ಲಿ
ಕೂಗಿಡುತ್ತ ನರಳುತಿರುವ
ತ್ಯಾಗಶೀಲರಿಂಗೆ ಸೇವೆ ಗೈಯ ತೊಡಗಿದ ||೩೬೪||

ಆಂಗ್ಲ ರಾಜ್ಯದೊಳಗೆಯಿದ್ದು
ಭಂಗ ಪಡುವ ಭಾರತೀಯ
ರಿಂಗಿತವನು ವರಿತುಯಿದ್ದ ಗಾಂಧಿ ಮಹಿಮನು||
ಆಂಗ್ಲ ಮಿತ್ರ ಸೈನ್ಯ ಸೆಣಸೆ
ಕಂಗೆಡುತ್ತ ಕೂರೆನೆನುತ
ಮಂಗಳಾಂಗ ದುಡಿದ ಸೇವ ಸೈನ್ಯ ಸೇರಿಸಿ ||೩೬೫||

ಪ್ರಥಮ ಚಿಕಿಸೆ ಭಾಗದಲ್ಲಿ
ಶತದ ಬಟ್ಟೆಕಟ್ಟುಗಳನು
ಹಿತದಿ ಸಿದ್ಧಗೊಳಿಸಿ ಗಾಯಗೊಂಡ ಜನರನು||
ಹಿತದಿ ಸೇವಿಸುತ್ತಲಿರಲು
ಮತಿಯುತೆಯುಸರೋಜದೇವಿ
ಹಿತವನರಿಯುತಲ್ಲಿ ಸೇವೆಗಾಗಿ ನಿಂದಳು ||೩೬೬||

'ಹಿಂದ್ ಸುರಾಜ್' ಪುಸ್ತಕದಲಿ
ಗಾಂಧಿ ಬರೆದ ಹಿಂಸ ತತ್ವ
ಕಿಂದು ತೊಡಕು ಬಂದುದೆನುತ ಮಿತ್ರರನಿಬರು||
ನೊಂದು ಗಾಂಧಿಯನ್ನು ಕೆಣಕೆ
ಅಂದಿಗದುವೆ ಸುಖವುಯಿಂದು
ಒಂದು ಗೂಡಿ ಯುದ್ಧ ಸೇವೆಮಾಡೆ ಹಿತವನೆ ||೩೬೭||

ಹಿಂಸೆಯಿಹುದು ಜಗದ ಜೀವಿ
ಹಿಂಸೆಯಿಂದ ಬದುಕುತಿಹುದು
ಧ್ವಂಸಮಾಡಿ ಜೀವಿಯನ್ನು ಜೀವಬದುಕಲು||
ಅಂಶಿಸುವುದು ಹೆಣಗುತಿಹುದು
ವಂಶವಂಶಕಿಹುದು ವೈರ
ಸಂಶಯವದುಯಿಲ್ಲ ಹಿಂಸೆ ಲೋಕನಿಯಮವು ||೩೬೮||

ನಡೆಯುವಾಗ ನುಡಿಯುವಾಗ
ಅಡಿಯನಿಡಲು ಹಿಂಸೆಯಿಹುದು
ಒಡಲು ಹೊರೆಯೆ ಹಿಂಸೆ ಬೇಕು ಜಗದ ತತ್ವವು||
ಕಡಿದು ಹಿಂಸ ಹಿಂಸೆಯನ್ನು
ಬಿಡದೆ ಸಾರಲಾತ್ಮಬಲವು
ಕಡೆಗು ಬೇಕುಯೆಂದು ಸಾರ್ದಹಿಂಸ ರಹಿತದ ||೩೬೯||

ಕರುಣೆಬೇಕು ಜೀವಿಗಳಲಿ
ಕರುಣೆಯೊಂದೆ ಜೀವಸಾರೆ
ಕರುಣೆಗೊಂಬ ಮನುಜ ಯುದ್ಧ ನೀತಿಯೊಲ್ಲನು||
ಧುರವ ನಿಲ್ಲಿಸಲ್ಕೆ ವಿಫಲ
ವಿರಲಿ ಕಲ್ಲಿ ಹೋಗಿ ಮರಳಿ
ಕರುಬುವಂಥ ಜನರ ಸೇವೆಗೈಯೆ ಪುಣ್ಯವು ||೩೭೦||

ಬ್ರಿಟಿಷರಾಧಿಪತ್ಯದಲ್ಲಿ
* ಅಟಕಗೊಂಡ ಜನರ ಧರ್ಮ
ಬ್ರಿಟಿಷರಿಂಗೆ ಕಷ್ಟಕಾಲ ಸಂಭವಿಸಲು||
ಪುಟಿದು ಸೇವೆ ಮಾಡಲವರು
ದಿಟಸಹಾಯ ಮರೆಯದಂತೆ
ಪಟನೆ ಭಾರತೀಯಗೋಳಕೇಳರೆನುತಲಿ ||೩೭೦||

ನಂಬಿಯುದ್ಧ ಸೇವೆಗೈಯ
ಮುಂಬರಿಯುತ ಸೇವದಳವ
ತುಂಬ ಹುರುಪಿನಿಂದ ರಚಿಸಿ ಯುದ್ಧ ಕ್ಷೇತ್ರಕೆ||
ಇಂಬುದೋರಿ ಹೋಗಲಾಗಿ
ಮಂಬು ಕವಿದ ಬಿಳಿಸಿಪಾಯಿ
ಜಂಭದಿಂದ ದರ್ಪದೋರಿ ಸೇವತುಕಡಿಗೆ ||೩೭೨||

ಹೀನತನದಿ ವಕ್ರ ದೃಷ್ಟಿ
ತಾನುಮೇಲು ಸೇವದಳದ
ಮಾನವಂತರೆಲ್ಲ ಕೀಳುಯೆಂದು ಭಾವಿಸಿ||
ಊನ ಶಿಕ್ಷೆ ನೀಡುತಿರಲು
ಮಾನಿಗಾಂಧಿ ಸೇವಬಲವ
ದೈನ್ಯದಿಂದ ಹಿಂದೆ ತೆಗೆದ ಸಹನೆ ಮೀರಲು ||೩೭೩||

---

* *ಅಟಕ = ಅಡಗಿಹೋದ*

ಪಾರ್ಶ್ವಶೂಲೆಯಿಂದ ಗಾಂಧಿ
ನಿಶ್ವಸಿಸಲು ಕಷ್ಟಗೊಂಡು
ನಶ್ವರದಲಿ ದೇಹ ರೋಗದಿಂದ ಬಳಲಲು||
ಈಶ್ವರನಲಿ ಭಕ್ತಿಯಿಟ್ಟು
ಭಾಷೆಯಿಟ್ಟು ಕ್ಷೀರ ತೊರೆದು
ಔಷಧಿಗಳಿಲ್ಲದಂತೆ ಗೃಹ ಚಿಕಿತ್ಸೆಯ ||೩೭೪||

ಹಸಿಯ ಕಾಯಿ ಪಲ್ಯ ಹಣ್ಣು
ಹಸಿಯ ಸೊಪ್ಪು ಖಾದ್ಯವಸ್ತು
ಬಿಸಿಯ ಮಾಡದದನೆ ತಿರಿದು ಶುದ್ಧ ಗಾಳಿಯ||
ಪ್ರಸರವಿರುವ ಕೋಣೆಯಲ್ಲಿ
ಕಸಿವಿಸಿಯಲಿ ಜೀವಿಸುತ್ತ
ಹೊಸದು ಜೀವ ಪಡೆದು ರೋಗ ಮುಕ್ತನಾಗುತ ||೩೭೫||

ಇನಿತು ಸೇವೆ ರೋಗಗಳಲಿ
ಘನಿತ ಗಾಂಧಿ ಬಳಲಿ ತೊಳಲಿ
ಅನುವು ದೊರೆಯೆ ಜಹಜುಹತ್ತಿ ಹೊರಟುವಹಿಲದಿ||
ಮನೆಯ ಹಾದಿ ಹಿಡಿದುಯಾನ
ಅನಿತರಲ್ಲಿ ಸುಯೆಜ್ ದಾಟಿ
ವನಧಿ ಕೆಂಪು ಕಳೆದುಯೇಡನ್ ನಗರ ಸಾರುತ ||೩೭೬||

ಪಯಣದಲ್ಲಿ ಪಯಣ ಬೆಳೆಸಿ
ನಯದಿ ಮುಂಬಯೀಯ ತಲಪಿ
ನಿಯತಿಯಿಂದ ನೆಲಸುತಲ್ಲಿ ನೆನಕೆ ಮಾಲೆಯ||
ವ್ಯಯದ ಲಾಭ ಚಿಂತನೆಗಳ
ನ್ಯಾಯವಾದಿಯಾಗಿ ಸತ್ಯ
ದಾಯದಲ್ಲಿ ಬಾಳ್ವ ಕಥೆಯ ನೆನಸಿಕೊಂಡನು ||೩೭೭||

ಸತ್ಯಪಥದಿ ನಡೆಯುವಾತ
ಮಿಥ್ಯವನ್ನು ತುಳಿಯಲಾರ
ನಿತ್ಯ ಮಾರ್ಗ ಹಿಡಿದು ಗಾಂಧಿ ವೃತ್ತಿ ಪಥದಲಿ||
ಸತ್ಯವನ್ನುಯೆತ್ತಿ ಹಿಡಿದು
ಮತ್ತೆ ಮತ್ತೆ ಬರಲು ಕಷ್ಟ
'ಸತ್ಯಮೇವಜಯತೆ' ಯೆಂಬ ತತ್ವ ಸಾರಿದ ||೩೭೮||

ಅಧ್ಯಾಯ ನಾಲ್ಕು

೧. ಭಾರತದಲ್ಲಿ

ಭಾರತಕ್ಕೆ ಗಾಂಧಿ ತಲಪೆ
ದೂರ ಫೀನಿಕ್ಸಾಶ್ರಮದಲಿ
ಊರು ಬಿಟ್ಟು ನೆಲಸಿದಂತ ಭಾರತೀಯರು||
ನೇರ ಪಯಣ ಮಾಡಿ ತಾಯಿ
ಊರ ಸೇರಿ ಆಂಡ್ರೂ ಸಲಹೆ
ತೋರಿದಂತೆ ಆಶ್ರಮದಲಿನೆಲೆಯ ನಿಂತರು ||೩೭೯||

ಭಾರತೀಯ ಸೇವ ಸಂಘ
ಕಾರಭಾರ ನೋಡಿ ಗಾಂಧಿ
ತೋರಿ ಹರ್ಷ ನುಡಿದನಾಗ ನಿಲಯವೊಂದನು||
ಸಾರಿ ಭಾರತೀಯರೊಡನೆ
ಸೇರಿ ಸರಳ ಬಾಳ ನಡೆಸಿ
ನೇರ ಮಾತೃ ಭೂಮಿ ಸೇವೆ ಮಾಡಲೆಳಸಿದ ||೩೮೦||

ಸರಳವುಡುಪು ತೊಟ್ಟ ಗಾಂಧಿ
ಪೋರ ಬಂದರಿಂಗೆ ತೆರಳಿ
ವೀರನಂತೆ ತಿಳಿದ ಜನರ ಭಾರಿ ಕಷ್ಟವ||
ಕೋರಿಪರಿಯಹಾರ ಕೇಳ್ವ
ದಾರಿ ತೋರಿರೆನಲು ಅಧೀ
ಕಾರಿ ಜಂಬ ತಳೆದುಕಂಡ ಕೀಳು ಭಾವದಿ ||೩೮೧||

ಶಾಂತಿ ನೀಕೇತನದಲಿದ್ದ
ಶಾಂತಿ ಪ್ರೀಯ ಭಾರತೀಯ
ರಿಂತು ಯೋಚಿಸುತ್ತ ತಮ್ಮ ದಿನದ ದುಡಿಮೆಯ||
ಸಂತಗಾಂಧಿ ಸೇರಿ ಮಾಡಿ
ನಿಂತುತೋಷ ಪ್ರೀತಿಯಿಂದ
ಮುಂತೆ ಕೇಳ್ವರಲ್ಲಿ ಗೋಖ್ಲೆಮರಣ ವಾರ್ತೆಯ ||೩೮೨||

ದುಃಖವಾರ್ತೆ ಕೇಳಿನೊಂದು
ಮಿಕ್ಕವರನು ಕೂಡಿಕೊಂಡು
ಅಕ್ಕರೆಯಲಿ ಹೊರಟ ಗಾಂಧಿ ಪುಣ್ಯನಗರಿಗೆ||
ಇಕ್ಕೆಲದಲಿ ಕಷ್ಟ ಸುಖವ
ತಕ್ಕ ರೀತಿಯಲ್ಲಿ ಸಹಿಸಿ
ಶಕ್ತನಾಗ ಬರ್ಮದೇಶ ರಾಜಧಾನಿಗೆ ||೩೮೩||

೨. ಕುಂಭಮೇಳ

ತೆರಳುತಲ್ಲಿ ಮರಳಿ ಭರತ
ಧರೆಗೆ ಬಂದು ಹರೀದ್ವಾರ
ಪರಮಪುಣ್ಯ ಕ್ಷೇತ್ರದಲ್ಲಿ ಕುಂಭಮೇಳದಿ||
ದುರಿತ ಹಾರಕಾಗಿ ಬರುವ
ಸರುವ ಜನರ ಸೇವೆಗೈಯೆ
ಗುರುವು ಗಾಂಧಿ ತೆರಳುತಲ್ಲಿ ಸುಜನರೊಂದಿಗೆ ||೩೮೪||

ಪರಮ ಪುಣ್ಯ ಸೇವಧರ್ಮ
ನಿರತರೊಡನೆ ಶುಚಿಯ ಕಾರ್ಯ
ಕರೆಗೆ 'ಓವು' ಗೊಟ್ಟುದುಡಿದ ದೇಶಕಾರ್ಯದಿ||
ಧರಮ ಶಾಲೆಯಲ್ಲಿ ನಿಂದು
ಪರಮಯೋಗಿ ಶಾಂತಿದೂತ
ಮೆರೆವ ಕುಂಭಮೇಳದಲ್ಲಿ ಸೇವೆಗೈದನು ||೩೮೫||

ತಂಡ ತಂಡದಲ್ಲಿ ಸಾಧು
ಗಂಡು ಹೆಣ್ಣು ಭೇದ ತೊರೆದು
ಅಂಡಲೆಯುತ ಬಂದರಲ್ಲಿ ದೂರದಿಂದಲಿ||
ಉಂಡುತೋಷ ಪಡೆಯದಿರುವ
ದಂಡುಯಾತ್ರಿ ಬರುತಲಿರಲು
ಕಂಡನಲ್ಲಿಯ್ಯೆದು ಕಾಲಚೋದ್ಯದನವನು ||೩೮೬||

ಬೇರೆ ಕರದ ಕಾಲಕೊಯ್ದು
ಸೇರಿಸಿದ್ದರದನು ದನದ
ಊರು ಭಾಗದಲ್ಲಿ ದನವ ದೈದು ಕಾಲಿನ||
ತೋರಿ ಸರ್ವಯಾತ್ರಿಗಳನು
ಸೇರಿಸಿತ್ತು ಧರ್ಮಬುದ್ಧಿ
ಏರಿದುದ್ದು ಸುರಿಯುತಿದ್ದರಲ್ಲಿ ಕೌತುಕ ||೩೮೭||

ಕುಂಭಮೇಳ ದಿವ್ಯ ದಿವಸ
ತುಂಬಿತಲ್ಲಿ ಹತ್ತು ಲಕ್ಷ
ಇಂಬುದೋರದಲ್ಲಿ ಜನಕೆ ಗಂಗೆಗಿಳಿಯಲು||
ತುಂಬುನೂಕು ನುಗ್ಗಲಲ್ಲಿ
ಅಂಬಿಗಿಳಿದು ಮಿಂದುಗಂಗೆ
ಹಂಬಲಿಸುತ ಹರಿಯಪಾದ ಧನ್ಯರಾದರು ||೩೮೮||

ಸೇವ ಧರ್ಮದಲ್ಲಿ ಗಾಂಧಿ
ಯೋವಿ ಜನರ ಸೇವೆಗೈದು
ಭಾವಶುದ್ಧಿ ಪಡೆದನೆಲ್ಲ ಮಿತ್ರ ಕೂಟದಿ||
ದೇವಗುಣವ ಪಡೆದ ಗಾಂಧಿ
ಸೇವಧರ್ಮ ನಿರತರನ್ನು
ಭಾವುಕಜನ ನೋಡಿ ತೋಷದಿಂದ ನಲಿದುದು ||೩೮೯||

ಗುರು ಕುಲವನು ನೋಡಿ ಗಾಂಧಿ
ಪರಮ ಗುರುವ ದರ್ಶನದಲಿ
ದೊರೆತ ಪೂಜ್ಯನಿಂದ ತಿಳಿದ ಧರ್ಮ ಸಾರವ||
ತೆರಳಿ ಹೃಷೀಕೇಶದಲ್ಲಿ
ದುರಿತನಾಶ ಗೊಳಿಪಗಂಗ
ಸುರನದಿಯಲಿ ಮಿಂದು ಪುಣ್ಯ ಫಲವ ಪಡೆದನು ||೩೯೦||

ಶಿಖೆಯು ಜನ್ನಿವಾರವೆರಡು
ಅಖಿಲ ಹಿಂದು ಜನಕೆ ಪುಣ್ಯ
ಸುಖವ ನೀಡ್ವ ಚಿಹ್ನೆಯಿದನು ತೊರೆದಿಯೇಕೆನೆ||
ನಿಖಿಲ ಹಿಂದು ಜನಕೆಯಿಲ್ಲ
ಪ್ರಕೃತ ಹಿಂದು ಧರ್ಮದಲ್ಲಿ
ವಿಕೃತಗುಣವು ದಳಿತರನ್ನು ತೊಡಲು ಬಾರದು ||೩೯೧||

ಮೂರುವರ್ಣದವರು ನೂಲು
ಸೇರಿಸುವರು ದೇಹದಲ್ಲಿ
ಬೇರೆನನಗೆ ನೂಲು ಶಿಖೆಯದೇತಕೆನುತಲಿ||
ತೋರಿತಾನು ಜನ್ನಿವಾರ
ದೂರ ಬಿಟ್ಟೆ ಕೀಲಿಕೈಯ
ದಾರಕಟ್ಟಲಿರುವ ನೂಲು ಬೇಡವೆನ್ನುತ ||೩೯೨||

ಬಿಟ್ಟೆನದನು ಆಂಗ್ಲದೇಶ
ಕೊಟ್ಟಿ ತೆರಳಲಾಗ ಶಿಖೆಯು
ಸ್ಪಷ್ಟವಾಗಿ ಹೋಯಿತದನು ಇಟ್ಟುಕೊಳ್ಳದೆ॥
ತೊಟ್ಟ ಶಿಖೆಯು ಪುಣ್ಯನೂಲು
ದೃಷ್ಟ ಹಿಂದು ಧರ್ಮಸಾರ
ಯಿಟ್ಟು ಕೊಳ್ಳುವುದೊಳಿತುಯೆಂದು ಮತ್ತೆ ತಿಳಿದನು ॥೩೯೩॥

ಪ್ರಕೃತಿ ಸೊಬಗು ನಲಿಯುತಿದ್ದ
ಸುಕೃತಿಯಿತ್ತು ಲಕ್ಷ್ಮಣಝೂಲ
ವಿಕೃತವಲ್ಲ ನೋಡೆಯೊಸಪು ಸೃಷ್ಟಿದೇವಿಯ॥
ಸುಕೃತ ತೂಗು ಸೇತುವೆಯಲಿ
ನಿಖಿಲರಾಶಿ ನೇತ್ರ ಮೋಹ
ಸುಖದಿ ನೋಡಿ ಸ್ವರ್ಗ ಶ್ರಮಕೆನಡೆದ ಯೋಗಿಯು ॥೩೯೪॥

೩. ಸತ್ಯಾಗ್ರಹ ಆಶ್ರಮ ಸ್ಥಾಪನೆ

ಸೇವವ್ರತದಿ ಶ್ರದ್ಧೆಯುಳ್ಳ
ಸೇವನಿರತರಾಶ್ರಯವನು
ವೋವಿ ನೀಡಲೊಂದು ನಿಲಯ ಬೇಕುಯೆನುತಲಿ॥
ಭಾವಿಸುತ್ತಲಾಶ್ರಮವನು
ದೇವ ಬಲದಿರೂಪಿಸುತಲಿ
ಭಾವ ಪಾರಿಶುದ್ಧ ಜನರನಲ್ಲಿ ಕರೆಯುತ ॥೩೯೫॥

ನೀತಿ ಧರ್ಮ ದೈವ ಭಕ್ತಿ
ಭೀತಿರಹಿತ ದೀನ ಮನವು
ಸ್ವಾರ್ಥರಹಿತ ಸೇವ ವೃತ್ತಿಸರಳ ಜೀವನ॥
ನಿತ್ಯ ದೈನ್ಯ ಭಾವಶುದ್ಧಿ
ಸ್ಫೂರ್ತಿ ಶ್ರದ್ಧೆ ಸೇವೆಯಲ್ಲಿ
ಅರ್ತಿಯಿಂದ ಯುವಕರಲ್ಲಿ ಸೇರಿಕೊಂಡರು ॥೩೯೬॥

ತಮಿಳು ತೆಲುಗು ಹಿಂದಿ ಉರ್ದು
ವಿಮಲ ಗುಜರ ಭಾಷೆಯನಿತು
ಸುಮನದಿಂದ ಲಾಡ್ವರೆಲ್ಲರಲ್ಲಿಯಿದ್ದರು॥
ಸಮದಪಾಕ ಶಾಲೆಯಲ್ಲಿ
ಕ್ರಮದೆಭುಜಿಸಿ ಸಂಘದಲ್ಲಿ
ಒಮನದಿಂದಲೊಂದು ಗೂಡಿ ಬಾಳುತಿದ್ದರು ॥೩೯೭॥

ಅಹಮದಬಾದಿನಲಿ ಸತ್ಯ
ಗ್ರಹದ 'ಆಶ್ರಮ'ವು ನಡೆಯುತ
ಲಿಹುದ ಕಂಡು ದಳಿತದಂಪತೀಯು ಸೇರಲು||
ಸಹಜವಾಸಿಯೆಲ್ಲ ಜನರು
ವಹಿಸಿಕೊಂಡು ಹೊಣೆಯ ಮುದದಿ
ಇಹುದನೊಡ್ಡಿ ಮನೆಯವೊಡೆಯ ಖಾತಿಗೊಂಡನು ||೯೮||

ನೀರು ಸೇದ ಬಾರದವರು
ನೀರು ತೊಡಲು ಮಲಿನವಹುದು
ಸೇರಿನೀರುಯಿರುವು ದಿಲ್ಲಿಯೇರಿದವರಿಗೆ||
ದೂರಸರಿಯಿರೆಂದು ತೆಗಳೆ
ಊರಿನವರು ತಡೆಯನೊಡ್ಡೆ
ಸೇರಿದವರು ಹಣ ಸಹಾಯ ಮಾಡದಾದರು ||೯೯||

ಧನ ಸಹಾಯ ನಿಂತು ಹೋಗಿ
ಅನಿಬರೆಲ್ಲ ಚಿಂತಿಸುತಿರ
ಲನವು ದೊರೆತು ದೈವ ಬಲದೆ ಹಣವು ದೊರಕಲು||
ಮನದ ಶಾಂತಿ ದೊರೆತುದಲ್ಲಿ
ಸನುಮತದೊಳು ನಿಲಯದಲ್ಲಿ
ವಿನುತನೊಲುಮೆಯಿಂದ ಬಾಳಿಬದುಕುತಿದ್ದರು ||೧೦೦||

ಆಫ್ರಿಕಕ್ಕೆವೊಪ್ಪಿಕೊಂಡು
ತಪ್ಪದಂತೆ ಹೋಗಿ ದುಡಿದು
ಸಪ್ಪೆಯಾಗುತಿದ್ದ ಜನಕೆ ಸತ್ವ ನೀಡಲು||
ದರ್ಪಕಾರರನ್ನು ನೋಡಿ
ಕಪ್ಪು ಜನರ ಕಷ್ಟವನ್ನು
ತಪ್ಪಿಸಲ್ಕೆ ದುಡಿದ ಗಾಂಧಿ ಜನ ಸಹಾಯದಿ , ||೧೦೧||

೪. ಚಂಪಾರಣ್ಯ ಸತ್ಯಾಗ್ರಹ

ಚಂಪರಣ್ಯದಲ್ಲಿ ರೈತ
ಸೊಂಪಿನಿಂದ ನೀಲಿ ಬೆಳೆದು
ಇಂಪು ತೊರೆದು ಕಷ್ಟ ಸಹಿಸಿ ತೊಳಲಿ ಬಳಲುತ||
ಸಂಪು ಹೂಡಲೆಳಸುತಿರಲು
ಕಂಪು ತಿಳಿದು ಗಾಂಧಿ ತೆರಳಿ
ತಂಪು ನೀಡಲೆಳಸಿರೈತ ಜನರ ರಕ್ಷೆಗೆ ||೧೦೨||

ಬಂದು ನಿಂತು ತಿಳಿದನಲ್ಲಿ
ಕಂದಿದೊಬ್ಬನೀಲಿ ರೈತ
ಅಂದು ಪಡೆದ ಹಿಂಸೆ ಪ್ರಾಧಿಕಾರದಿಂದಲಿ||
ಕುಂದದಲ್ಲಿ ತೆರಳಿ ಗಾಂಧಿ
ನಿಂದು ಪ್ರಾಧಿಕಾರ ಮುಂದೆ
ಒಂದೆ ಮನದೆ ಕೇಳ್ದರೈತ ನೊಂದ ಬಗೆಯನು ||೪೦೩||

ಬಡನೆ ಚಂಪರಣ್ಯ ಬಿಡಲು
ದುಡುಕಿ ಪ್ರಾಧಿಕಾರಿಯಾಜ್ಞೆ
ಕಡೆಗು ಗಾಂಧಿ ಪಾಲಿಸದಿರೆ ರೋಷಗೊಳ್ಳುತ||
ಬಿಡದಿರಲ್ಕೆ ಬಂಧಿಸುತ್ತ
ಲೊಡನೆ ಕೋರ್ಟಿಗೈಯ್ದು ಶಿಕ್ಷೆ
ಕೊಡುನೆನೆಂದು ಕೆರಳಿ ನುಡಿದ ಪ್ರಾಧಿಕಾರಿಯು ||೪೦೪||

ಜನರ ಗುಂಪು ಸೇರುತಿತ್ತು
ಘನದ ಗಾಂಧಿ ಸುತ್ತುಮುತ್ತು
ವಿನಯ ಶೀಲ ನಿಂಗೆಮಣಿದು ರೈತರೆಲ್ಲರು||
ಬಿನಪಿನಿಂದಲೊಲವು ತೋರಿ
ತನುಮನದಲಿ ಸಹಕರಿಸಿತು
ವಿನುತನನ್ನು ಹೊಗಳುತಿರಲಿ ಕಾಳ್ವ ವರ್ಗವು ||೪೦೫||

ಗಾಂಧಿಯೊಡನೆ ಮೈತ್ರಿ ಬೆಳಸಿ
ವೊಂದು ಗೂಡಿ ದುಡಿಯುತಿರಲು
ಬಂದಿ ತಾಗ ಕೋರ್ಟಿನಿಂದ ಗಾಂಧಿಗಾಜ್ಞೆಯು||
ಹಿಂದು ಮುಂದು ನೋಡಿ ಗಾಂಧಿ
ಬಂದು ಕೋರ್ಟಿನಲ್ಲಿ ಮನವಿ
ಯೊಂದ ನರ್ಪಿಸುತ್ತನಿಂದ ವಿಂಧ್ಯ ಸದೃಶನು ||೪೦೬||

ನೋಡಿ ಗಾಂಧಿನಿಂದ ಪರಿಯ
ಬಾಡಿಹೋಯ್ತು ದರ್ಪದಾಟ
ಮಾಡಬಾರದಿವಗೆ ಶಿಕ್ಷೆಯೆಂದು ಕೋರ್ಟಿನ||
ಪ್ರೌಢ ನುಡಿದ ಮುಕ್ತಗೊಳಿಸೆ
ನೋಡಿ ಜನತೆದಂಗು ಬಡಿದು
ಬೇಡಿ ರೈತ ಬಂಧುವನ್ನು ಹೊಗಳುತ್ತಿದ್ದರು ||೪೦೭||

ರೈತ ಜನರ ಹೇಳಿಕೆಯನು
ಹಿತದಿ ಪಡೆಯುತೊಂದುಗೂಡಿ
ಜತನದಿಂದ ಕಳಿಸಿ ಪ್ರಾಧಿಕಾರವರ್ಗಕೆ॥
ವಿತತಿಯಿಂದ ಶಾಲೆ ತೆರೆದು
ಮತಿಯುತರನು ನೇಮಿಸುತ್ತ
ಸುತರ ಶಿಕ್ಷಣವನು ಬೆಳಸಿಗಾಂಧಿ ಮೆರೆದನು ॥೪೦೮॥

ಹಳ್ಳಿಗೊಂದು ಶಾಲೆಯಿತ್ತು
ಶಾಲೆಗೊಬ್ಬ ಗುರುವು ನೋಡೆ
ಬಾಲವರ್ಗ ಕೌಷಧಿಗಳ ಕೊಡುವ ಯೋಜನೆ॥
ಮೇಲೆಯಿತ್ತು ಶುಚಿಯ ಕೆಲಸ
ಪಾಲಿಗೆಲ್ಲರಿಂಗೆಯಿತ್ತು
ಹಾಲು ತಿನಸು ಕೊಟ್ಟು ಪೋಷಿಸುತ್ತ ಬಾಲರ ॥೪೦೯॥

ಪ್ರೀತಿಯಿಂದ ಪೋಷಿಸುತಲಿ
ನೀತಿ ನಿಯಮ ರೀತಿ ಕಲಿಸು
ತರ್ತಿಯಿಂದಲೋದು ಬರೆಹ ಗಣಿತ ಕಲಿಸುತ॥
ಮೂರ್ತಿರೂಪ ಕೊಟ್ಟು ಬಾಲ
ರುತ್ತಮಿಕೆಯ ಸಾಧಿಸುತ್ತ
ಸತ್ವಶಾಲಿ ಗುರು ಸಮೂಹ ಸೇವೆ ಗೈದರು ॥೪೧೦॥

ಮಣ್ಣು ಗೋಡೆ ಬಿದಿರುಮಾಡು
ಸುಣ್ಣ ಬಳಿದು ಹುಲ್ಲು ಹೊದಿಸಿ
ಚಿಣ್ಣರಿಂಗೆ ಸೊಬಗುವೊದಗಿಸುತ್ತ ಶಾಲೆಯ॥
ಪೂರ್ಣ ಸುಂದರತೆಯ ನೋಡಿ
ಕಣ್ಣು ತೆರೆದ ರೈತ ಜನತೆ
ಸಣ್ಣ ತನವ ಬಿಟ್ಟು ಪೂರ್ಣವಿದ್ಯೆ ಪಡೆದರು ॥೪೧೧॥

ರೈತರೆಲ್ಲ ಕಷ್ಟಸುಖವ
ನಾರ್ತನಾದದಿಂದ ಪೇಳಿ
ಸಾರ್ಥಕತೆಯ ಕೋರಲಾಗ ಧನಿಕವರ್ಗವು॥
ಧೂರ್ತತನವ ತೋರಿಗಾಂಧಿ
ಯತ್ತ ಕೆರಳು ತಾಳ್ಣರನ್ನು
ವೊತ್ತಯಿಸುತ ಯೋಧನನ್ನು ಹೊರಗೆಯಟ್ಟಲು ॥೪೧೨॥

ಯತ್ನ ನಡೆಸೆ ಗಾಂಧಿಯಾಗ
ಬಿತ್ತರಿಸಿದ ವಿಷಯಗಳನು
ಮತ್ತೆ ರಾಜ್ಯಪಾಲನಾಗ ಸಮಿತಿಯೊಂದನು||
ಅರ್ತಿಯಿಂದ ನೇಮಿಸುತ್ತ
ಸತ್ವಶಾಲಿ ಸಲಹೆ ಪಡೆದು
ಕಿತ್ತು ಬಿಸುಟ 'ತಿಂಕತೀಯ' ನೀಲಿ ಶಾಸನ ||೪೧೩||

ರಚನಶೀಲ ಚಳುವಳಿಯಲಿ
ವಚನಕೊಟ್ಟು ಗಾಂಧಿ ದೃಢದಿ
ನಿಚಯ ಪಶು ಸಮೂಹ ಹಿತವ ಸಾಧಿಸುತ್ತಲಿ||
ರಚಿಸಿ ಗೋವು ಶಾಳೆಗಳನು
ಪಚನ ಯೋಗ್ಯ ಕ್ಷೀರ ಕೇಂದ್ರ
ರುಚಿರ ಹಿಂದಿ ಭಾಷೆ ಪ್ರಚರ ಸರ್ವವಿಧದಲಿ ||೪೧೪||

ಗ್ರಾಮ ಜನರ ಹಿತವ ಬಯಸಿ
ಸೌಮ್ಯ ಮಾರ್ಗದಿಂದ ರಚನ
ದಮ್ಯ ಕಾರ್ಯಗಳನು ಹಮ್ಮಿ ನವ್ಯ ಚೇತನ||
ಹಮ್ಮಿ ಸುತ್ತ ಗ್ರಾಮಗಳಲಿ
ಹೊಮ್ಮಿ ಸುತ್ತ ದಿವ್ಯ ಪಥವ
ಕಾಮ್ಯವಿಲ್ಲದಂತೆ ದುಡಿದ ಗಾಂಧಿ ಮೋಹನ ||೪೧೫||

೫. ಸಬರ್ಮತಿ ಆಶ್ರಮ

ಕಾರ್ಮಿಕಾರ ಜನರ ಮೊರೆಯ
ಮರ್ಮವನ್ನು ಆಲಿಸುತ್ತ
ಪೆರ್ಮೆವೆತ್ತು ತೆರಳುತಹಮದದ ಬಾದಿಗೆ ||
ಗರ್ಮಿಗಿರಣಿ ಮಾಲಿಕರನು
ಓರ್ಮೆಯಿಂದ ನೋಡಿ ನುಡಿದು
ಹಮ್ಮದಿರಲು ಕಾರ್ಯ ಸಂಪು ಹೂಡಿರೆನ್ನುತ ||೪೧೬||

ಸಂಪಿನಲ್ಲಿ ಹಿಂಸೆಯಿಲ್ಲ
ಸೊಂಪು ಮನದಲಚಲ ನಿಲುವು
ಸಂಪಿನಲ್ಲಿ ಭಾಗವಹಿಸದವರ ಮೇಲೆಯು|
ತಂಪೆರಚುವ ಹೀನ ಕೃತ್ಯ
ರಂಪವಿಲ್ಲ ಗುಲ್ಲುಗುಡುಗು
ಇಂಪಿನಿಂದ ಸಂಪು ಬಹಳಯಶವಪಡೆಯಿತು ||೪೧೭||

ಕೋಚ್ರಬಿನಲಿಯಾಶ್ರಮದಲಿ
ಹೊಚ್ಚಹೊಸದು ಪ್ಲೇಗುತೋರೆ
ಬಿಚ್ಚಿಕಂಗಳನ್ನು ನೋಡಿ ಕಚ್ಚಕಲ್ಮಷ||
ಹೆಚ್ಚುಯಿರಲಿಕಾಶ್ರಮವನು
ಬಿಚ್ಚಿಸಬರಮತಿಯ ತೀರ
ಉಚ್ಚತಾಣವಾರಿಸುತ್ತ ಕಟ್ಟ ತೊಡಗುತ ||೪೧೮||

ಮೊದಲು ಡೇರೆ ಹೊಡೆದು ನಿಲಯ
ವೊದಗಿಸುತ್ತ ತಟ್ಟಿಕಟ್ಟಿ
ಸುಧೆಯನೀವ ಪಾಕಗೃಹದ ರಚನೆಯಾಯಿತು||
ಪದುಳದಿಂದ ನಾಲ್ಕು ಹತ್ತು
ವಿಧದಿ ಜನರು ನೆಲೆಸಿ ನಿಂತು
ನದಿಯ ತೀರದಾಶ್ರಮದಲಿ ಪದುಳ ಜೀವನ ||೪೧೯||

ನಡೆಸುತ್ತಿದ್ದರಲ್ಲಿ ಸುತ್ತ
ನಿಡಿದ ಕಾಡು ಕುಂಟೆ ಕುರುಚೆ
ಯೊಡೆದು ಮಾಡುತಾಶ್ರಮವನುವೊಳಗೆ ವಾಸಿಸೆ||
ಕಡಿವ ಹಾವು ಚೇಳು ವಿಷದ
ಹೆಡೆಯ ಸರ್ಪಯಿರುತಲಿರಲು
ದುಡುಕಿ ಹೊಡೆಯದವುಗಳನ್ನು ಸುಖದಲಿದ್ದರು ||೪೨೦||

ಗಿರಣಿಕೂಲಿ ನೌಕರಾಂಗ
ಧರಣಿಹುಡು ತಿದ್ದ ವೇಳೆ
ಮರದಕೊರಡುಯಿಟ್ಟಿಗೆಗಳ ಮನೆಯ ನಿರ್ಮಿಸಿ||
ಸರುವರೊಂದು ಸೇರಿ ದುಡಿದು
ನಿರುತ ಕಾರ್ಯಶೀಲರಾಗಿ
ಅರಿವೆನೇಯ್ದು ಬಾಳುತಿದ್ದ ಪರಿಯು ಸೋಜಿಗ ||೪೨೧||

ಕೂಲಿ ವರ್ಗ ಸಂಪುನಡೆಸಿ
ಬಾಳಕಷ್ಟಪಡುತಲಿದ್ದು
ಹೇಳಿತಾಳ್ಮೆ ಕೆಟ್ಟು ವಿಚಲ ಮನದೊಳಿರುತಿರೆ||
ಕೂಳಿಗಾಗಿ ಕಷ್ಟಪಡುತ
ಹೇಳಿದಂತೆ ಸಭೆಗೆ ಬರದೆ
ಗೋಳು ಹೊಯ್ಯುತಿರಲು ಗಾಂಧಿ ಮನದೆ ಮರುಗುತ ||೪೨೨||

ಶಿಸ್ತು ಬರುವ ತನಕತಾನು
ವಸ್ತು ಮುಟ್ಟೆನೆನುತ ವ್ರತವ
ವಿಸ್ತರಿಸುತ ನಿರಶನದಲಿ ಮೂರು ದಿನಗಳು||
ವಾಸ್ತವದಲಿ ಕಳೆದು ಗಿರಣಿ
ಯುಸ್ತುವಾರರಲ್ಲಿ ಕರುಣೆ
ವಿಸ್ತರಿಸಲು ಕೂಲಿ ಸಂಪು ಕೊನೆಯ ಗೊಂಡಿತು ||೪೨೩||

ಮಿಲ್ಲುಮಾಲಿ ಕರುಗಳೆಲ್ಲ
ಸೊಲ್ಲಿನಿಂದ ತೋಪಗೊಂಡು
ಎಲ್ಲ ಕರ್ಮಚಾರಿಗಳಿಗೆ ಸಿಹಿಯ ಹಂಚಲು||
ಫುಲ್ಲವದನರಾಗಿ ಗಾಂಧಿ
ಯುಲ್ಲಸಿತನ ಹೊಗಳಿ ಮತ್ತೆ
ಎಲ್ಲನಿಂತಗಿರಣಿ ಕೆಲಸ ಮುಂದೆ ಸಾಗಿತು ||೪೨೪||

೬. ಖೇಡ ಸತ್ಯಾಗ್ರಹ

ಖೇಡದಲ್ಲಿ ರೈತ ಜನರು
ರೂಢಿಸಿದ್ದ ಬೆಳೆಗಳೆಲ್ಲ
ಬಾಡಿಹೋಗೆ ಬರದಕಾಲ ಕಾಲುಯಿಟ್ಟಿತು||
ಛೇಡಿಸುತ್ತ ಪ್ರಾಧಿಕಾರ
ಖೋಡಿಯಿಂದ ಕರವ ಪಡೆಯೆ
ಮಾಡಿದಂತ ಆಜ್ಞೆ ನೋಡಿನೊಂದ ರೈತರು ||೪೨೫||

ಗಾಂಧಿಗಂದು ಮೊರೆಯನಿಡಲು
ಚಂದದಿಂದ ಗಾಂಧಿ ಬಂದು
ನಿಂದು ರೈತ ಜನಸಹಾಯವೊಂದು ಗೂಡಿಸಿ||
ಅಂದು ರೈತ ಸತ್ಯಗ್ರಹದ
ವೃಂದದೊಡನೆ ಹೂಡಿ ಧರಣಿ
ಚಂದದಿಂದ ರೈತಬಂಧುವಾದ ಮೋಹನ. ||೪೨೬||

ಜುಲುಮೆಯಿಂದ ಕರವಸೂಲಿ
ಬೆಳೆದ ಫಲವಕೊಯ್ದು ಬಲದೊ
ಳೊಳಗೆ ಹೊಕ್ಕು ಮನೆಗೆ ಧನವ ಸುಲಿದು ಕೊಳ್ಳುತ||
ಬಲವ ತೋರಿ ರೈತ ಜನಕೆ
ಹಲವು ತರದಿ ನೋವು ಕೊಡುತ
ಸುಲಿಗೆ ಮಾಡುತಿದ್ದರದನ ದೇನು ಪೇಳ್ವೆನು ||೪೨೭||

ಆಜ್ಞೆಮೀರಿ ಫಸಲುಕೊಯ್ದು
ಕಜ್ಜಕಾಗಿ ರೈತನೋರ್ವ
ಸಜ್ಜನಿಕೆಯ ಮೀರಿ ಪಡೆದ ಕಠಿಣ ಶಿಕ್ಷೆಯ||
ಅಜ್ಞ ತಜ್ಞರೊಂದು ಗೂಡಿ
ಬಿಜ್ಜೆಯಿಂದ ಹೂಡೆ ಸಮರ
ಸಜ್ಜುಗೊಂಡು ಪ್ರಾಧಿಕಾರ ನೀಡೆ ಸವಲತ ||೪೨೮||

ಹುರುಪುಯಿತ್ತು ರೈತರಲ್ಲಿ
ಬರಿದುಯೇಕೆ ಹೋರ್ದ ಫಲವು
ಇರದವವೆಲ್ಲ ಭಾಯಿ ಹೂಡೆ ಬರ್ದೋಲೀಯ ಸಮರವ ||
ಭರದೊಳಮ್ಮ ಬೆಸೆಂಟ್ ಗೃಹದ
ಸ್ಥಿರದಲಾಳುವಿಕೆಗೆ ಹೂಡೆ
ಉರುತರದಲಿ ಸತ್ಯ ಸಮರ ಫಲವ ಗಳಿಸಿತು ||೪೨೯||

ಜಾಗತೀಕ ಯುದ್ಧವೇಳೆ
ನಾಗರಿಕರ ಸಭೆಯ ಕರೆಯ
ಲಾಗವೆಲ್‌ಸರಾಯ ಹಮ್ಮಿ ಕೊಳುತ ಕಾರ್ಯವ||
ಭಾಗವಹಿಸಿ ಸಭೆಯಲೆಂದು
ಬೇಗಪತ್ರಕಳಿಸಲಾಗ
ಯೋಗಿನುಡಿದ '*ಆಲಿ'ಸೋದರಿಬ್ಬರಿರುವರು ||೪೩೦||

ಜೈಲಿನಲ್ಲಿ ಹೇಗೆ ಬರಲಿ
*ಕಿಲಫಟ ಚಳುವಳಿಯ ಸೇರಿ
ಆಲಿಗಳನು ಸೇರಿಸಲ್ಕೆ ನಾನು ಬರುವೆನು||
ಹೇಳಿ ವೈಸರಾಯಿ ನುಡಿಯ
ನಾಲಿಸುತ್ತ ಯುದ್ಧ ಸಭೆಗೆ
ಪಾಲಿಸಲ್ಕೆ ವಚನ ಹೋದ ಸೇವ ದೃಷ್ಟಿಲಿ ||೪೩೧||

*ಆಲಿಬ್ರದರ್ಸ್ *ಕಿಲಾಫತ್ ಚಳುವಳಿ

೭. ಯುದ್ಧದಲಿ ನೆರವು

ವೈಸ್‌ರಾಯಿ ಕರೆದ ಸಭೆಗೆ
ಅಸ್ತುವೆಂದು ಗಾಂಧಿ ತೆರಳಿ
ಸ್ಪಷ್ಟ ಚಿತ್ತದಿಂದ ಹಿಂದಿ ಭಾಷರೂಪದಿ||
ಸ್ಪಷ್ಟಿ ವಾಕ್ಯ ಪೇಳಿ ನಿಲುವ
ವಿಸ್ತರಿಸದೆವೊಲವ ನೀಡಿ
ವಿಸ್ಮಯದಲಿ ಜನತೆ ಹೊಗಳೆ ಮರಳಿ ಬಂದನು ||೪೩೨||

ಪತ್ರಬರೆದು ವೈಸರಾಯ್ಗೆ
ಅರ್ತಿಯಿಂದ ಪೇಳ್ದ 'ಆಲಿ'
ಯುತ್ತರವನು ಲೋಕಮಾನ್ಯರನ್ನು ಕರೆಯದೆ||
ಎತ್ತಿಕೊಂಡಿರೇಕೆ ಸಭೆಯ
ಮತ್ತೆ ಹೇಳಿರೆನಲು ಬರೆದ
ನೊತ್ತಿಯೊಲೆ ನೋಡಿ ವೈಸರಾಯ ಮೆಚ್ಚಿದ||೪೩೩||

ಯುದ್ಧದಲ್ಲಿ ನೆರವು ನೀಡೆ
ಯುದ್ಧ ಯೋಧರನ್ನು ಕೂಡಿ
ಬದ್ಧನಾಗಿ ಸೇವಧರ್ಮ ಯುದ್ಧ ಕ್ಷೇತ್ರದಿ||
ಬಿದ್ದ ಸೈನ್ಯ ಜನರ ಸೇವೆ
ಶುದ್ಧಬುದ್ಧಿಯಿಂದ ಮಾಡಿ
ಬದ್ಧನಾಗಿ ದುಡಿದ ಬ್ರಿಟಿಷ ಯುದ್ಧ ಸಮಯದಿ ||೪೩೪||

ಘೋರ ಭೇದಿಯಿಂದ ಬಳಲಿ
ದಾರಿಕಾಣದಿರಲು ಜನರು
ಪ್ರೇರಿಸಿದರು ಮಾಂಸಹಾರಲೇಸುಯೆನುತಲಿ||
ಭಾರಿರೋಧ ತೋರಿಸುತ್ತ
ಧೀರ ಮೆರೆದ ಪ್ರಕೃತಿ ಬಲದೆ
ಊರನ್ಯೆದ್ಯಾನಾಗ ಕೊಟ್ಟ ಹಿಮ ಚಿಕಿತ್ಸೆಯ ||೪೩೫||

ಗುಣಮುಖದಲಿ ಗಾಂಧಿಯಿರಲು
ದಣಿದ ರೋಗಿಯನ್ನು ಕಂಡು
ಬಣದ ನೇತ ವಲ್ಲಭಾಯಿ ಯುದ್ಧ ನಿಂತುದ||
ಕಣದೆ ಜರ್ಮನೀಯು ಸೋತು
ತಣಿದು ಹೋಗು ತಕ್ಷರಾಷ್ಟ್ರ
ಮಣಿದ ಪರಿಯವಿವರಿಸಲ್ಕೆ ಮೋದಗೊಂಡನು ||೪೩೬||

ರೋಗಗ್ರಸ್ತ ಗಾಂಧಿಯಾಗ
ಭಾಗಿಯಾಗಿ ವಿಷಮ ಪರಿಯ
ಬೇಗೆಯಿಂದ ಬಳಲುತಿರಲು ಕ್ಷೀರಪಾನವ||
ಆಗ ಮಾಡುಯೆಂದು ವೈದ್ಯ
ಬೇಗ ಪೇಳೆ ತೊಟ್ಟ ಪಣವ
ಆಗುಮಾಡಿ ಕುಡಿಯದಿದ್ದ ನಾಡಹಾಲನು ||೪೩೭||

೮. ರೌಲತ್ ಆಕ್ಟ್

ಕುಡಿಯುತಿದ್ದು ಗುಣವ ಹೊಂದೆ
ಬಿಡದೆ ಪತ್ರಿಕೆಯಲ್ಲಿ ವಾರ್ತೆ
ಯೊಡೆದು ಬಂತು ರೌಲತ್ ಆಕ್ಟ್‌ಯೆನುವ ಕ್ರೌರ್ಯದ||
ಬಿಡದ ಶೂಲ ಚುಚ್ಚುವುದನು
ಬಡವರಿಂಗೆ ಬಾಧೆ ಕೊಡುವ
ದೊಡಲ ಶೂಲೆಯನ್ನುಯೆದುರಿಸಲ್ಕೆ ನಿಶ್ಚಯ ||೪೩೮||

ಮಾಡಿ ಗಾಂಧಿ ವಲ್ಲಭಾಯಿ
ಕೂಡಿಸಮರ ಧೀರರೆಲ್ಲ
ರೋಡಿ ಕೂಡಿಯಾಡಿ ಸಕಲ ಸನ್ನಹಂಗಳ||
ಮೋಡಿಯಿಂದ ಮಾಡಲಾಗ
ಅಡಿಸತ್ಯ ಹಿಂಸೆತತ್ವ
ಮೂಡಿಬಾರದಿರಲು ಗಾಂಧಿನೊಂದು ಕೊಂಡನು ||೪೩೯||

ರೌಲತ್ 'ಆಕ್ಟ್' ಪ್ರಕಟವಾಗೆ
ಶೂಲವೆದೆಗೆ ನಾಟಿದಂತೆ
ಕಾಲಯಾಪ ಮಾಡದವನು ರೋಧಗೈಯಲು||
ಕೇಳಿ ರಾಜ ಜೀಯವೊಲವು
ಪೇಳುತೆಲ್ಲ ರಾಷ್ಟ್ರಜನಕೆ
ನಾಳೆ ದೇಶದಲ್ಲಿ ಬಂದ್‌ಮಾಡಿರೆನ್ನುತ ||೪೪೦||

ಬಂದ್ ಕರೆಗೆ ದೇಶದಲ್ಲಿ
ಒಂದೆ ಮತದಿ ಬಂದರೆಲ್ಲ
ಹಿಂದು ಮುಸಲರೊಂದುಗೂಡಿ ಬಂದ್‌ಗೈದರು||
ಮುಂದೆ ಗೋಳಿಬಾರು ಹಿಂಸೆ
ಯೊಂದು ಗೂಡುತಲ್ಲಿ ಜನತೆ
ಕುಂದದದಕೆ ಬಂದಿನಲ್ಲಿ ಭಾಗತೊಟ್ಟರು ||೪೪೧||

ಗಾಂಧಿ ಬರೆದ ಪುಸ್ತಕಗಳ
ನೊಂದು ಗೂಡಿ ಮಾರಲಾಯ್ತು
ಅಂದು ಪ್ರಭುಗಳದಕೆ ತಡೆಯ ಹಾಕಿಯಿದ್ದರು||
ಒಂದೆ ಮುಂದೆ ನೋಡದವರು
ಬಂದರೆಲ್ಲಿ ಕೊಂಡು ಕೊಳಲು
ಅಂದು ಆಳುವವರು ನೋಡಿ ದಂಗುಬಡಿದರು ||೪೪೨||

ಗಾಂಧಿಯನ್ನು ಬಂಧಿಸುತ್ತ
ತಂದರವರ ಮುಂಬಯೀಗೆ
ಅಂದು ತೆರಳೆ ಗಾಂಧಿ ಪೈಧುನೀ ಪುರಾದಲಿ||
ಬಂದ ಸಹಸ್ರ ಜನರು ನೋಡಿ
ಗಾಂಧಿ ಜಯಜ ಕಾರ ಮಾಡಿ
ಯೊಂದು ಗೂಡಿ ಶಾಸನವನು ಭಂಗಗೈದರು ||೪೪೩||

ಸತ್ಯಗ್ರಹದ ಮೂಲತತ್ವ
ವರ್ತಿಯಿಂದಲರಿಯದವರು
ಯಿತ್ತು ಮನವಹಿಂಸೆಯಲ್ಲಿ ವರ್ತಿಸುತ್ತಲಿ||
ಮತ್ತೆ ನೋಡಿ ಗಾಂಧಿ ಮಹಿಮೆ
ಹೊತ್ತು ಪೂರ್ತಿ ನಿರಶನದಲಿ
ಗೊತ್ತು ಮಾಡಿ ಜನಕೆ ಯೋಗ್ಯ ನೀತಿ ತಿಳಿಸಿದ ||೪೪೪||

ತಾನು ಹೂಡಿದಂತ ಪೌರ
ಜಾನಪಾದದ ಸಹಕಾರ
ಯೇನು ತಿಳಿಯದಿದ್ದ ಜನರ ವೃತ್ತಿ ನೋಡುತ||
ಭಾನುಸದೃಶ ನುಡಿದ ತಾನು
ಆನುಮಾನವಿಡದೆ ಮೇರು
ಬಾನಿನೆತ್ತರಕ್ಕೆ ತಪ್ಪುಗೈದೆನೆಂದನು ||೪೪೫||

ಸತ್ಯಗ್ರಹದ ದಳ್ಳುರಿಯಲಿ
ಮತ್ತೆ ಜನತೆ ಕಾದುತಲಿರೆ
ಒತ್ತಯದಲಿ ದಂಗೆಯಡಗಿಸಲ್ಕೆ ಶಾಹಿಯು||
ಒತ್ತು ಕೊಟ್ಟು ವೀರರನ್ನು
ಕತ್ತು ಹಿಡಿದು ನೂಕಿ ಸೆರೆಗೆ
ಮತ್ತು ಓಡಿದ ಕ್ರೌರ್ಯವನ್ನುವೊತ್ತಿ ತೋರುತ ||೪೪೬||

ಅಮೃತ ಸರದ ಹಿಂಸೆಯಲ್ಲಿ
ಕುಮೃತಿಗೊಂಡ ಜನರದೆಷ್ಟೋ
ದಮನನೀತಿ ಕೊನೆಯ ಹಂತದಲ್ಲಿ ತಲಪಲು||
ಯಮನ ಆಟ ಜಲಿಯ ಬಾಗ್
ಕ್ರಮದ ಹಿಂಸೆಯಲ್ಲಿ ನಡೆದು
ಸುಮನರೆನಿತೊ ಜನರು ಸಾವು ಪಡೆದ ಪರಿಯನು ||೪೪೭||

ಗಾಂಧಿ ನೋಡಿ ಪಂಚ ನದಿಯ
ಬಂಧದೊಳಗೆ ಹೊಗಲು ಬಯಸೆ
ದಂದುಗಕ್ಕೆ ಪ್ರಾಧಿಕಾರ ತಡೆಯನೊಡ್ಡಿತು॥
ನೊಂದ ಗಾಂಧಿ ಹಿಂದೆ ತೆರಳಿ
ಹಿಂದು ಮುಂದೆ ನೋಡುತಿರಲು
ಬಂದುದಲ್ಲಿ ದೈವದೊಲವದೊಂದು ರೀತಿಲಿ ॥೪೪೮॥

೯. 'ಯಂಗ್ ಇಂಡಿಯ' 'ನವಜೀವನ'

ವಾರ್ತಪತ್ರ ಬೊಂಬೈ ಕ್ರಾನ್ಕಿಲ್
ದೂರ್ತ ಶಾಸನಕ್ಕೆ ಸಿಲುಕಿ
ವೃತ್ತವನ್ನು ನಿಲಿಸುತಿರಲು ಮತ್ತೆ ಗಾಂಧಿಯ॥
ವೃತ್ತಪತ್ರ 'ಯಂಗ್ ಇಂಡ್ಯ'
ಮತ್ತೆ ನವ್ಯ ಜೀವನಗಳ
ಸ್ತುತ್ಯ ರೀತಿಯಲ್ಲಿ ನಡೆಸಲಾಶಿಸುತ್ತಲಿ ॥೪೪೯॥

ಹೊತ್ತುಕೊಂಡು ನಾಯಕತ್ವ
ಹೊತ್ತು ಹೊತ್ತು ಮುದ್ರಿಸುತ್ತ
ಮತ್ತೆ ದೇಶಸುತ್ತುನಂತೆ ಕ್ರಮವಗೊಳ್ಳಲು॥
ಸತ್ಯ ಶಾಂತಿ ಹಿಂಸ ರಹಿತ
ನಿತ್ಯ ತತ್ವಗಳನು ಹರಡಿ
ಕತ್ತು ಹಿಡಿಯುತೊತ್ತುತಿರುವ ಕ್ರೂರ ಶಾಸನ ॥೪೫೦॥

ಇದಿರುಕಾದೆ ಸಿದ್ಧಗೊಳಿಸಿ
ಚದುರ ತನದೆ ಪ್ರಕಟಿಸುತಿರ
ಲೊದಗೆಬಂದ ಜಲಿಯಬಾಗ್ ಕ್ರೌರ್ಯಕಾಗಿಯೆ॥
ಸದಯ ಗಾಂಧಿ ಮೂಲವೆಂದು
ಹೃದಯ ಶೂನ್ಯ ಡಯರ್ ನುಡಿದ
ಕುದಿದಯುವಕರೆಲ ಗಾಂಧಿಯನ್ನು ಹಳಿದರು ॥೪೫೧॥

ಕಡೆಗು ಗಾಂಧಿ ಪಂಜಾಬ್ಬೈದ
ಲೊಡನೆ ಸೇರಿ ಜನ ಸಮುದ್ರ
ಬಡವ ಬಂಧುವನ್ನು ಮುತ್ತಿ ಜಯವ ಘೋಷಿಸಿ॥
ನುಡಿದು ನಮಿಸಿ ಹೊಗಳಿ ನುತಿಸಿ
ಬಿಡದೆವಿನಯ ತೋರಿಸುತಿರ
ಲೊಡಲು ಸುಡುವ ಸೇನಕ್ರೌರ್ಯ ಬಿಡದೆ ಹಬ್ಬಿತು ॥೪೫೨॥

ಹಂಟರ್ ಕಮಿಟಿ ನೇಮಕವನು
ಬಂಟರೆಲ್ಲ ಕಡೆಗಣಿಸಲು
ಉಂಟುಮಾಡಿ ಹೊಸದು ಸಮಿತಿ ಗಾಂಧಿಮುಖದಲಿ||
ಬಂಟರೆಲ್ಲರೊಂದು ಗೂಡಿ
ಶುಂಠತನದ ಕ್ರೌರ್ಯ ತನವ
ನೆಂಟು ಮೂಲೆಯಿಂದ ನೋಡಿವೊರದಿಯೊಪ್ಪಿಸೆ ||೪೫೩||

ಮೋತಿಲಾಲ ಮಾಳವೀಯ
ಖ್ಯಾತದೇಶ ಬಂಧು ದಾಸ
ನೀತರೆಲ್ಲ ಸೇರಿಗಾಂಧಿ ನಾಯಕತ್ವದಿ||
ಭೀತಿತೊರೆದು ಬ್ರಿಟಿಷ್ ಕ್ರೌರ್ಯ
ನೀತಿ ದಮನಗಳನುವರದಿ
ರೀತಿಯಲ್ಲಿ ರಚಿಸಿ ಜನಕೆ ತಿಳಿವನೀಡುತ ||೪೫೪||

ಹಿಂದುಮುಸ್ಲಿಂರೊಂದು ಗೂಡಿ
ಚಂದದಿಂದ ಸಭೆಯ ನಡೆಸಿ
ರೊಂದು ಗೂಡು ತೆಲ್ಲ ಕಿಲಾಫತ್ತ್‌ರೋಧದಿ||
ಬಂಧುವೆಂದು ಗೋವು ರಕ್ಷೆ
ಯಂದದಿಂದ ಮಾಡಿ ಹೂಡಿ
ಕುಂದಿಸಿದರ ಧನ್ಯ ದರ್ಪಧೀರ ತನದಲಿ ||೪೫೫||

ಅಮೃತ ಸರದಿ ನಡೆದ ಕಾಂಗ್ರೆಸ್
ಸುಮತಿ ಮೋತಿಲಾಲ ನೆಹ್ರು
ವಿಮಲರಧ್ಯಕ್ಷತೆಯ ಕತೆಯನೆಂತು ಬಣ್ಣಿಪೆ||
ಸುಮನ ಮಾಳವೀಯ ತಿಲಕ
ರಮಲಚಿತ್ತರಂಜ ದಾಸ
ರೊಮನದಲ್ಲಿ ಸೇರಿಗೊತ್ತುವಳಿಯ ಮಂಡಿಸಿ ||೪೫೬||

ಜಲಿಯಬಾಗ್ ಹತ್ಯಕಾಂಡ
ಜಲಿಸುತಿರಲು ಮನದ ಕುಹರ
ನಿಲಯದಲ್ಲಿ ಹಿಂದು ಮುಸ್ಲಿಂ ಸಿಕ್ಕರನಿಬರು||
ದಳನ ಕ್ರಿಯೆಯೊಳಸುವ ನೀಡಿ
ಮಲಿನಗೊಳಲು ಧರೆಯು ರಕ್ತ
ತಿಲಕ ಗಾಂಧಿ ದೇಶ ಬಂಧು ಮಾಳವೀಯರು ||೪೫೭||

ಕಲೆತು ನೆನಪಿಗಾಗಿ ಶಿಲೆಯ
ನಿಲಿಸಲೆಂದು ಧನವಕೂಡಿ
ಬಲದೆ ರಚಿಸಿ ನೆನಪಿಗಾಗಿ ದಿವ್ಯ ಭವನವ||
ಕಲೆಯುತೆಲ್ಲ ಗಾಂಧಿ ಮುಖದಿ
ಯೊಲಿದು ಸಂವಿಧಾನ ರಚಿಸಿ
ಕುಳಿತರಂದು ತಜ್ಞರೆಲ್ಲರೊಂದು ಗೂಡತ ||೪೫೮||

೧೦. ಖಾದಿ ಜನನ

ಭಾರತದಲಿ ಬಡತನವನು
ದೂರಗೊಳಿಸೆ ಖಾದಿಯೊಂದೆ
ದಾರಿಯೆಂದು ತಿಳಿದು ಗಾಂಧಿ ಸೂತನೂಲಿನ||
ದಾರಗಳನು ನೇಯ್ದು ಬಟ್ಟೆ
ಪೂರತಾನೆ ಮಾಡಿಕೊಂಡು
ಶೂರತನದಿ ಖಾದಿಯರಿವೆ ಧರಿಸಲೆಳಸುತ ||೪೫೯||

ತೋರಿದಾರಿ ಸಕಲಜನಕೆ
ನೇರನೇಯ್ದು ಖಾದಿ ಧರಿಸೆ
ವೀರರೆಲ್ಲ ಕಲಿತರಂದು ನೇಯ್ಗೆ ವೃತ್ತಿಯ||
ಚರಕದಲ್ಲಿ ನೂಲನೂತು
ಚರಕ ಮಗ್ಗದಲ್ಲಿ ನೇಯ್ದು
ಧರಿಸುತಿದ್ದ ಶುದ್ಧ ಖಾದಿ ಪರಿಯು ಹೊಸದೆನೆ ||೪೬೦||

ಮಿಲ್ಲು ಬಟ್ಟೆ ತೊರೆಯುತಂದು
ಯೆಲ್ಲರಲ್ಲಿ ಖಾದಿ ಧರಿಸಿ
ಪುಲ್ಲವದನರಾಗಿ ಶೋಭಿಸಿದ್ದ ಪರಿಯನು||
ಎಲ್ಲಿ ವರ್ಣಿಸುತ್ತಲಿರಲಿ
ಕೆಲ್ಲಕಲಿತರಲ್ಲಿ ನೂತು
ಮಲ್ಲತನದೆ ವಸ್ತ್ರನೇಯ್ವ ಚೆಲ್ವ ವಿದ್ಯೆಯ ||೪೬೧||

ಚರಕಹತ್ತಿ ಬತ್ತಿಯೆಲ್ಲಿ
ಚುರುಕಿನಿಂದ ಸಿದ್ಧವಾಯ್ತು
ಭರದೆ ನೂತು ವಸ್ತ್ರಹೊಸೆವ ಜಾಣವಿದ್ಯೆಯ||
ಇರದೆಯೆಲ್ಲ ರರಿತರದನು
ವರವುಯಿದುವೆ ಭರತಜನಕೆ
ಕರದಿನೂತು ನೇಯ್ದು ಬಟ್ಟೆ ಶ್ರೇಷ್ಠವೆನ್ನುತ ||೪೬೨||

ದೊರಗು ಧೋತಿ ಮಗ್ಗದಿಂದ
ಹೊರಗೆ ತೆಗೆದ ಬಟ್ಟೆಯೆನಲು
ಗರಿಮೆ ಬೇಡ ದೊರಗು ಖಾದಿ ಶುದ್ಧನೆನುತಲಿ||
ಪಿರದು ಗಾಂಧಿ ತಿಳಿಯುತದನು
ಧರಿಸತೊಡಗಿ ದೇಶ ಜನಕೆ
ವರಿಯತೋರ್ದು ಕ್ರಾಂತಿ ಪುರುಷ ಧರೆಯ ಜನರಿಗೆ ||೪೬೩||

ಸ್ವದೇಶಿಚಳು ವಳಿಯ ಕ್ರಾಂತಿ
ಯೊದಗೆ ರಾಷ್ಟ್ರ ಹೊಸಯುಗದಲಿ
ಬದುಕಿ ಬಾಳ ತೊಡಗಿ ಯಂತ್ರ ಜನ್ಯ ಬಟ್ಟೆಯ ||
ಅಧಮವೆಂದು ಹೊರಗಿನಿಂದ
ಲುದಿಸಿ ಬಂದ ಬಟ್ಟೆಗಳನು
ವಿದಿತವಾಗಿ ಸುಡುತ ರಾಷ್ಟ್ರಭಕ್ತಿತೋರ್ದರು ||೪೬೪||

ಅಸಹಕಾರ ಚಳುವಳಿಯಲಿ
ಉಸಿರು ಬಿಡಲ ಸಾಧ್ಯ ಮಾಗೆ
ಪೊಸದ ತೋರಿ ದೇಶದಲ್ಲಿ ಕ್ರಾಂತಿ ಕಹಳೆಯು||
ಬೆಸದು ಮೊಳಗೆ ಕಾಲಿಘಟ್
ನಸಮಕಾಂಗ್ರೆಸ್ಸಭೆಯು ಸೇರಿ
ಪೆಸರಿಸಲ್ಕೆ ಲಜಪತ್‌ರಾಯ್‌ರಾಧಿಪತ್ಯದಿ ||೪೬೫||

ಸತ್ಯ ಸಮರ ರೂಪುಗೊಳಲು
ಮಿಥ್ಯವೊಡೆವ ದಸಹಕಾರ
ಒತ್ತೆ ದೇಶಬಾಂಧವರನು ಮತ್ತೆ ಕೂಡಿಸಿ ||
ಬಿತ್ತರದಲಿ ಸತ್ಯಗ್ರಹಕೆ
ಒತ್ತಿ ಬರುತಲಿರುವ ಶೋಕ
ಹೊತ್ತದೇಶ ಕೇಳೆ ಲೋಕಮಾನ್ಯ ಸಿಧನವ ||೪೬೬||

ಮಹಿಮಗಾಂಧಿ ಕಳಿವಳಿಸುತ
ಸಹಿಸಲಾರ ದಶ್ರು ಜಲವ
ಕಹಿಯವುಸಿರು ಬಿಡುತ ರಾಷ್ಟ್ರಶೋಕದಿನದಲಿ||
ಮಹತು ತಿಲಕರನ್ನು ನೆನೆದು
ಮಹಿಯ ಜನರ ಸಾಗರದಲಿ
ನಹನ ಶೋಕವನ್ನು ಪೇಳಿ ಸಮರ ಸಿದ್ಧತೆ ||೪೬೭||

ನಾಗಪುರದ ಕಾಂಗ್ರೆಸಿನಲಿ
ಆಗ ನಿಲುವು ಪಾಸು ಮಾಡಿ
ತ್ಯಾಗದಿಂದಲಸಹಕಾರವೆಂದು ಘೋಷಿಸಿ||
ಬೇಗ ಸುರಾಜ್ಯವ ಪಡೆದು
ತೂಗಬೇಕು ದೇಶದೊಲವ
ಆಗಬೇಕೆ ದೈಕ್ಯ ಹಿಂದು-ಮುಸ್ಲಿಂ ಜನದಲಿ ||೪೬೮||

ದಳಿತರನ್ನು ಮೇಲಕ್ಕೆತ್ತಿ
ವೊಳಿತಿನಿಂದ ಮುಂದೆತರಲು
ಬಲದಲಸ್ಪೃಶ್ಯತೆಯನ್ನು ತೊಡೆದು ಹಾಕಲು||
ಒಲಿದ ಖಾದಿ ಮಂತ್ರವನ್ನು
ಬಲಿದು ಪಠಿಸೆ ಚಳುವಳಿಯನು
ತಳೆಯೆನಿಲುವು ಗೊಂಡರಲ್ಲಿ ದೇಶ ಭಕ್ತರು ||೪೬೯||

'ಸತ್ಯದೇವ' ನನ್ಯನಿಲ್ಲ
ಸತ್ಯಶೋಧ ಕಂಗಹಿಂಸೆ
ನಿತ್ಯಮಾರ್ಗವದರೆ ಹೊರತು ಬೇರೆಯಿಲ್ಲವು||
ಸತ್ಯ ಶೋಧ ಕಂಗಿದಾತ್ಮ
ನಿತ್ಯ ಶುದ್ಧವಿರಲು ಬೇಕು
ಸತ್ಯ ಸಂಧವಾಕ್‌ಮನದ ಕಾಯ ಶುದ್ಧಿಯ ||೪೭೦||

ಪಡೆದುಯಿರ್ಪ ಶುದ್ಧಮನದೊ
ಲೊಡೆದು ಬಹುದು ಸುತ್ತಮುತ್ತ
ಬಿಡದೆ ಶುದ್ಧಿ ಶುಚಿಯ ಪಾರಿ ಶುದ್ದ ಜೀವನ||
ನಿಡುಬಯಕೆಯ ಸತ್ಯಶೋಧ
ಕಡೆಗು ಕೊಡುಗು ಜಯದ ಸಿರಿಯ
ಬಡವ ಬಲಿದರೆಲ್ಲರಿಂಗೆ ಸತ್ಯಮೋಕ್ಷವು ||೪೭೧||

ಉತ್ತರ ಕಾಂಡ

೧. ಗಾಂಧೀ - ನೆಹರು ಯುಗ

ಅಂದು ಮುಂಬಯೀಯ ನಗರ
ಹೊಂದಿರಲ್ಕೆ ದಂಗೆಯುರಿಯು
ಬಂಧಿಸುತ್ತ ಮಾತ್ಮನನ್ನು ಯಾರವಾಡದ
ಬಂಧಿಖಾನೆಯಲ್ಲಿ ಬ್ರಿಟಿಷ
ರಂದು ತಳ್ಳಲಾತ್ಮ ಚರಿತೆ
ಹೊಂದಿ ಬರದ ಗಾಂಧಿ ಬಾಪು 'ಸತ್ಯ ಶೋಧನೆ' ||೪೭೨||

ಜಗದ ಯುದ್ಧ ನಿಂತು ಹೋಯ್ತು
ಸಿಗದು ಜನಕೆ ಸೊಗವುಮುದವು
ಬಗೆದ ಕ್ರೂರ ಶಾಸನಗಳು ಭಾರತೀಯರ||
ಧಗೆಯ ಹೆಚ್ಚಿಸುತ್ತ ಕಾಡೆ
ಮುಗಿಲಿನಿಂದಲುದಿಸಿ ಬಂದ
ಸೊಗದ ಭಾನು ಗಾಂಧಿ ಕ್ರಾಂತಿ ಕಹಳೆಯೂದಿದ ||೪೭೩||

ಮಿಂಚು ಬಂದ ತೆರದಿ ಗಾಂಧಿ
ಅಂಚಿನಿಂದ ಹೊಳಪು ತೋರಿ
ಹೊಂಚು ಹಾಕಿ ಜನರ ಭೀತಿಯತ್ತಲೆಳೆಯುವ||
ಸಂಚನೆದುರಿಸಲ್ಕೆ ಸತ್ಯ
ಕಂಚು ದನಿಯ ಲಭಯ ತೋರಿ
ಸಂಚುಕಾರರಿಂಗೆ ದಿಗಿಲು ಬರಿಸಿ ಮೊಳಗಿದ ||೪೭೪||

ಕಣ್ಣು ತೆರಸಿ ಜನದ ಮನಕೆ
ತಣ್ಣಗಾಗದಿರಲು ಹೇಳಿ
ಪೂರ್ಣಕ್ರಾಂತಿ ಮೂಡಿಸುತ್ತ ಜನಮನದಲಿ||
ಬಣ್ಣದವರದಾಳ್ವಿಕೆಯನು
ಮಣ್ಣು ಗೂಡಿಸಲ್ಕೆ ಹೊರಟು
ಸಣ್ಣತನವ ಬಿಟ್ಟುವೊಂದು ಗೂಡಿರೆನ್ನುವ ||೪೭೫||

ಪ್ರಬಲದನಿಗೆ ಜನತೆಯೆದ್ದು
ಸಬಲ ಶಕ್ತಿ ತೋರಿಮುಂದೆ
ಕಬಳಿಸಿರುವ ಬ್ರಿಟಿಷ ರಾಜ್ಯ ಮುರಿದು ಹರಿಯಲು||
ವಿಬುಧಗಾಂಧಿ ಸೇನೆ ಸೇರಿ
ಶುಭದ ಖಾದಿ ಬಟ್ಟೆ ಧರಿಸಿ
ವಿಭವ ಪಾರತಂತ್ರ್ಯದೆದುರು ಸಮರ ಹೂಡಿತು ||೪೭೬||

ನೆಹರು ಪೂರ್ಣಗಾಂಧಿ ತತ್ವ
ಸಹನೆಯಿಂದ ಪಾಲಿಸಲ್ಕೆ
ಸಹಜಪಣವ ತೊಟ್ಟು ರಾಷ್ಟ್ರದೇವಿ ಸೇವೆಗೆ||
ಮಹದ ಗಾಂಧಿಯೊಡನೆ ಸೇರಿ
ಸಹಚರಿಯಲಿ ಪಾರತಂತ್ರ
ದಹಿಸಲಿಕ್ಕೆ ಬದ್ಧನಾದ ಗಾಂಧಿಯೋಗದಿ ||೪೭೭||

ಮಿಲಿಯ ಜನರು ಗಾಂಧಿ ಪಥಕೆ
ಒಲವನಿತ್ತು ಮುಗ್ಧರಾಗಿ
ಚಲನ-ವಲನದಿಂದ ಗಾಂಧಿ ಭಕ್ತರಾದರು||
ಬಲದ ಸತ್ಯ ಸೂಚಿಕಾಂತ
ಸೆಳೆಯುತಿತ್ತು ಮಿಲಿಯ ಜನರ
ಬಲು ಸಮರ್ಥ ನೆಹರು ಗಾಂಧಿ ವಾಕ್ಯ ಕೇಳುತ ||೪೭೮||

ಕುದಿಯುತಿದ್ದ ಹೃದಯದಲ್ಲಿ
ಹೃದಯ ಕುದಿಯ ಬಾಯಿಯಲ್ಲಿ
ಯೊದಗೆ ಕಣ್ಣು ನೀರು ಮಿಡಿದ ಗಾಂಧಿ ವಾಣಿಗೆ||
ಬದಲು ವಾಣಿ ಕೇಳುತಿದ್ದ
ನೊದಗದದಕೆ ಗಾಂಧಿತ್ರಾಣ
ಸದಮಳನವ ನೆಹರು ಭ್ರಾಂತನಾದ ವಾಣಿಗೆ ||೪೭೯||

ಸರ್ಪದಂಶದಂತೆ ನೋವು
ಶೂರ್ಪವಾಣಿಗಿತ್ತು ಪ್ರಬಲ
ದರ್ಪದಿಂದ ಚುಚ್ಚುತಿತ್ತು ಹೃದಯಮನಗಳ||
ದರ್ಪವನ್ನು ಸದೆ ಬಡಿಯಿತು
ಲರ್ಪಿಸುತ್ತ ದೇಹಮನವ
ನೊಪ್ಪಿ ರಾಷ್ಟ್ರದೇವಿಗಾಗಿ ಮುಡಿಪನೀಡುವ ||೪೮೦||

ಶಕ್ತಿಯಿತ್ತು ಗಾಂಧಿವಾಣಿ
ಯುಕ್ತಿಯಿಂದ ಕೇಳಿ ನೆಹರು
ಭಕ್ತಿ ತೋರಿ ಗಾಂಧಿ ಪಥಕೆಯೆದ್ದು ನಿಂತನು||
ಉಕ್ತಿ ದುಡಿಯಲಿಲ್ಲ ಮಡಿಯೆ
ಶಕ್ತವಾಯ್ತು ರಾಷ್ಟ್ರ ಪುರುಷ
ರಕ್ತರಹಿತ ಕ್ರಾಂತಿತರಲು ಸಿದ್ಧನಾದನು ||೪೮೧||

ರಾಷ್ಟ್ರ ಸಂಸ್ಥೆ ಪ್ರಬಲಗೊಂಡು
ಭ್ರಷ್ಟತೆಯನುಯೆದುರಿಸಲ್ಕೆ
ಸ್ಪಷ್ಟ ಶಾಂತಿನೀತಿ ತಾಳುತೆದ್ದು ನಿಂತಿತು॥
ಕಷ್ಟಪಡುವ ರೈತರಾದಿ
ಶಿಷ್ಟರೆಲ್ಲ ಸೇರಿದಂಥ
ಅಷ್ಟಬಲದ ರಾಷ್ಟ್ರ ಸಂಸ್ಥೆ ಗಾಂಧಿಯುಕ್ತಿಗೆ ॥೪೮೨॥

ಮಣಿದು ಮೊಳಗೆ ವೀರವಾಣಿ
ದಣಿದ ಸಂಸ್ಥೆ ಚೇತನದಲಿ
ಕುಣಿದು ಹೊಸದು ರಕ್ತಚಿಮ್ಮಿ ಕ್ರಾಂತಿ ಪುರುಷನು॥
ಬಣದ ತಂತ್ರ ಕೆದುರು ಹೊಸದು
ಕಣೆಯನೆಸೆಯೆ ಶಾಂತಿ ಮಂತ್ರ
ಕಣಿಯ ಮಾಡುತಿರ್ದರೇನನೆಂಬೆವಿಪ್ಲವ ॥೪೮೩॥

ಶಾಂತಿ ಪ್ರಿಯನು ಗಾಂಧಿಯಾಗ
ಲಂತೆ ಬಿಡನು ಭ್ರಷ್ಟತನವ
ನಿಂತು ಕಾದಿ ಸಹನೆಯಿಂದಲಾತ್ಮ ಶಕ್ತಿಯ॥
ಕೊಂತವನ್ನು ತೋರಿಸುವನು
ಭ್ರಾಂತಿ ತೊರೆದು ಸತ್ಯಕಾಗಿ
ಯಂತ್ರಗೊಳಿಸೆ ಪಾರತಂತ್ರ ಸೆಟೆದು ನಿಲುವನು ॥೪೮೪॥

ಬ್ರಿಟಿಷ ಬಿರಿದು ಬಾವಲಿಗಳು
ಸಟೆಯಿದೆಂದು ತೊರೆದು ಬಿಸುಟು
ಭಟರುನಿಂದರೊಂದೆ ಮನದಿ ಗಾಂಧಿ ನಾಯಕ॥
ದಿಟವಿದೆನಲು ನೀತಿ ರಾಜ್ಯ
ಪುಟವನಿಡಲು ಸತ್ಯಶಾಂತಿ
ಸಟೆಗೆ ಬಗ್ಗದಿರುವ ಗಾಂಧಿ ಭರತವರ್ಷದಿ ॥೪೮೫॥

ಜಾತಿ ಮತದ ಭೇದಭಾವ
ನೀತಿ ರಹಿತ ವುಚ್ಚನೀಚ
ರೀತಿಗಳನುಯೆದುರಿಸುತ್ತ ಕೀರ್ತಿ ಪುರುಷನು॥
ಆತುಮಾತ್ಮ ಶಕ್ತಿಗಳನು
ಪ್ರೀತಿಯಿಂದ ಜತೆಯ ಗೂಡಿ
ಸೇತುವಿಂಗೆ ಹಿಮದ ಶಿಖರವೊಂದು ಗೂಡಿಸಿ ॥೪೮೬॥

ಅಸಹಕಾರ ದಗ್ನಿಕಿಡಿಯು
ಸಪರಿಸಲ್ಕೆ ನಾಲ್ಕು ದೆಸೆಗೆ
ಅಸಮ ಸಹಸಿ ಕೋಟಿ ಜನತೆ ಗಾಂಧಿ ತತ್ವಕೆ||
ಹೊಸತು ಹುರುಪು ತೋರಿ ಕಣಕೆ
ಯೆಸೆದು ಸತ್ಯ ಸಮರ ಹೂಡಿ
ಕಸುವಿನಿಂದ ತುಳಿವರೆದರು ಧೈರ್ಯ ತೋರಿತು ||೪೮೭||

ಡಂಡಿಯಲ್ಲಿ 'ಉಪ್ಪು' ಮಾಡಿ
ಬಂಡಿಯಲ್ಲಿ ಸಾಗಿಸುತ್ತ
ದಿಂಡತನದಿ ಶಾಸನವನು ಮುರಿದು ಕೆಡಹಲು||
ಹಿಂಡು ಜನತೆ ಬಾಪು ಹಿಂದೆ
ದಂಡು ದಂಡು ಹಿಂಡು ಹೋಗಿ
ಖಂಡಿತದಲಿ 'ಉಪ್ಪು' ಮಾಡಿ ಮುರಿದು ಶಾಸನ ||೪೮೮||

ಬೆಚ್ಚಿಬಿದ್ದರಾಂಗ್ಲ ಪ್ರಭುವು
ರೊಚ್ಚಿಗೆದ್ದ ದೇಶವನ್ನು
ಹಚ್ಚಿ ಹೊಸದು ರೂಪರೇಷೆಕೊಡಲಿಕಾಗಿಯೆ||
ಅಚ್ಚನೇತ ಗಾಂಧಿಯನ್ನು
ಉಚ್ಚ ಸಭೆಗೆ ಕರೆದು ಲಂಡನ್
ಸ್ವಚ್ಛವಾಗಿ ಘೋಷಿಸಿತ್ತದಾಂಗ್ಲ ನೀತಿಯ ||೪೮೯||

ದುಂಡು ಮೇಜು ಮುರಿದು ಬಿತ್ತು
ಕಂಡು ಗಾಂಧಿ ಮರಳಿ ರಾಷ್ಟ್ರ
ಗಂಡು ತನದಲೊಂದು ಗೂಡಿ ಭಾರಿ ಸಮರವ||
ಹಿಂಡು ಸತ್ಯದಾಗ್ರಹವನು
ಮಂಡಿಸಲ್ಕೆ ದಿಗಿಲುಗೊಂಡ
ಚಂಡ ಶಾಸನಾಂಗವಾಗ ಕಳಿಸೆ ಕ್ರಿಪ್ಸನ ||೪೯೦||

ಕ್ರಿಪ್ಸ ಬಂದು ಹಲವು ತೆರದೊ
ಳೊಪ್ಪಿಸಲ್ಕೆ ಪಟ್ಟಯತ್ನ
ಸೊಪ್ಪು ಬೀಳಲಾಗಿ ಹೂಡಿ ಬದಲು ತಂತ್ರವ||
ಒಪ್ಪಿ ಗಾಂಧಿ ಹೂಡೆ ಸಮರ
ಬಪ್ಪೆವೆಂದು ಸಮರ ಧೀರ
ರಪ್ಪಿಗಾಂಧಿಯನ್ನು ರಣದ ಕಣಕೆಯಿಳಿದರು ||೪೯೧||

ಏಳು ಪ್ರಾಂತ್ಯದಲ್ಲಿ ಕಾಂಗ್ರೆಸ್
ಮೇಳವಿಸುತ ಪ್ರಜಾ ತಂತ್ರ
ದೇಳಿಗೆಯಲಿ ಪ್ರಾಂತ್ಯ ರಾಜ್ಯ ನಿರ್ಮಿಸುತ್ತಿರೆ||
ಕೇಳಿಗಾಂಧಿ ನುಡಿದ ವಚನ
ರಾಳುತಿದ್ದರೇನನೆಂಬೆ
ಧಾಳಿಕಾರರಾಂಗ್ಲರಾಳೆ ಮೇಲು ಕೇಂದ್ರದಿ ||೪೯೨||

೨. ದ್ವಿತೀಯ ಜಾಗತಿಕ ಯುದ್ಧ ಮತ್ತು ವ್ಯಕ್ತಿಗತ ಸತ್ಯಾಗ್ರಹ

ಯುದ್ಧ ನುಂಗೆ ಸಕಲ ಜಗವ
ಸದ್ದು ಮಾಡೆ ಭರತ ವರ್ಷ
ಯುದ್ಧ ಪಾಲು ನಮಗೆ ಬೇಡರ ಸ್ವತಂತ್ರರು||
ಬದ್ಧರಾವು ನಾಝಿ, ಫೇಸಿ
ಶುದ್ಧ ಮಿಲ್ಟ್ರಿವಾದಕೆದುರು
ಬದ್ಧರಲ್ಲಿ ಯುದ್ಧದಲ್ಲಿ ಪಾಲುಗೊಳ್ಳಲು ||೪೯೩||

ಎದ್ದು ನಿಲುವೆ ಬ್ರಿಟಿಷರೆದರು
ಯಿದ್ದು ಫಲವುಯೇನ ರನ್ಯ
ಬದ್ಧದಾನ ತನದಿ ಪಾರತಂತ್ರ್ಯಯೆದುರಿಸೆ||
ಎದ್ದು ಸಮರ ಹೂಡಲಿಹೆವು
ನಿದ್ರೆ ಬಿಟ್ಟು ಸೆಣಸಲಿಹೆವು
ಬುದ್ಧಿವಂತರಾಷ್ಟ್ರ ಪಾರತಂತ್ರ ಸಹಿಸದು ||೪೯೪||

ಗಾಂಧಿನೇತನಾಗೆ ಕಾಯ್ದೆ
ಕುಂದಿಸಲ್ಕೆ ವ್ಯಕ್ತಿಗತದ
ವೃಂದದಲ್ಲಿ ಯೇಕವ್ಯಕ್ತಿ ಸಮರಹೂಡಲು||
ಮುಂದೆನಿಂತು ಸಮರನೀತಿ
ದಂದುಗವನು ಖಂಡಿಸುತ್ತ
ನಿಂದು ಯೇಕ ಮನುಜನಂತೆ ಬಂಡುಯೆದ್ದಿತು ||೪೯೫||

ವಿನಭ ವೀರ ಶುರರೆಲ್ಲಿ
ತನುಮನವನು ದೇಶಕಾಗಿ
ಯನುವಗೊಳಿಸಿ ಹೂಡಿಸಮರ ಸೆರೆಯಸೇರ್ದರು||
ಅನಿತುಜನದ ಸಂಕ್ಯರಾಶಿ
ಮುನಿಸು ಹೂಡಿ ಪಾರ ತಂತ್ರ್ಯ
ಯಿನಿತುಯಿಲ್ಲದಂತೆ ಮಾಡೆ ಜೈಲು ಸೇರಿತು ||೪೯೬||

ಗಾಂಧಿ ಮಾತು ವೇದವಾಕ್ಯ
ವೆಂದು ರಾಷ್ಟ್ರವೊಪ್ಪಿ ಗಾಂಧಿ
ಯೆಂದ ತೆರದಿ ವರ್ತಿಸುತಲಿ ಜಾಗ್ರಗೊಡಿತು||
ಒಂದು ಗೂಡಿಸೂವ ಶಕ್ತಿ
ಯಂದು ಗಾಂಧಿಗಿತ್ತು ಸ್ಪೂರ್ತಿ
ತಂದು ದೇಶದಲ್ಲಿ ಮೆರೆದ ಮಹಿಮ ಬಾಪುವು ||೯೭||

ಅರ್ಥನೀತಿ ಸಮರನೀತಿ
ಸ್ವಾರ್ಥರಹಿತ ಹಿಂಸ ನೀತಿ
ವೃತ್ತಿನೀತಿ ರಕ್ಷ ಶಿಕ್ಷ ನೀತಿಯೆಲ್ಲವು||
ಕರ್ತೃಶಾಲಿ ಗಾಂಧಿಯಲ್ಲಿ
ವೃತ್ತಗೊಂಡು ಚಲಿಸುತಿತ್ತು
ಸತ್ವಶಾಲಿಯನ್ನು ಹೊಗಳಿ ದೇಶ ನಲಿಯಿತು ||೯೮||

ಹೊಗೆಯದಾಡುತಿತ್ತುವೊಳಗೆ
ಹಗೆಯುಯಿತ್ತು ದೇಶದಲ್ಲಿ
ಹೊಗಲಸಾಧ್ಯ ಕಾವುಯಿರಲು ಪಾರತಂತ್ರ್ಯದ||
ಮಿಗುವ ದಬ್ಬುವಾಳಿಕೆಯಲಿ
ಸುಗುಣರೆಲ ನೋಯುತಿರಲು
ಜಗಕೆ ಬಾಪುಸಾರ್ದನೊಂದು ಪರಮ ಮಂತ್ರವ ||೯೯||

೩. ಕ್ವಿಟ್ ಇಂಡಿಯ ಚಳುವಳಿ

ದಮನನೀತಿ ಕಠಿಣಗೊಳಲು
ಕ್ರಮದ ಕಾಯ್ದೆ ಭಂಗತರಲು
ಸುಮನರೆಲ್ಲ ಸೇರೆ ಸೆರೆಯ ಮನೆಯವಾಸಕೆ||
ಭ್ರಮನಿರಸಿತ ಸುಭಾಶ್ ಚಂದ್ರ
ದಮನವನ್ನು ಸಹಿಸದಂತೆ
ತಮದ ರಾಜ್ಯದಿಂದ ಹೊರಟ ಜಗದ ಭುಗಿಲಿಗೆ ||೫೦೦||

ಗಾಂಧಿಗಾಯ್ತುಯಿಳಿ ವಯಸ್ಸಿ
ನಂದು ಯೆಪ್ಪತ್ತರಲಿ ಗಾಂಧಿ
ಹೊಂದಿಯಿತ್ತು ದೇಹ ಕ್ಷೀಣ ಕಠಿಣ ವ್ರತದಲಿ||
ಕುಂದು ತಿಲ್ಲದಾತ್ಮ ಜೋತಿ
ಬಂಧುರದೊಳ ಗುರಿಯುತಿತ್ತು
ಸಿಂಧುಸದೃಶವಾಣಿಯಿಂದ ರಾಷ್ಟ್ರ ಪುರುಷನು ||೫೦೧||

ಒಂದೆ ಮನದಲೆದ್ದರನ್ಯ
ದಂದುಗೆಯನು ಮುರಿಯ ತಿಳಸು
ತಂದು ಮುಂಬನಗರದಲ್ಲಿ ರಾಷ್ಟ್ರ ಸಂಸ್ಥೆಯ||
ರುಂದ್ರದಾಧಿವೇಶದಲ್ಲಿ
ಸಿಂಧು ಸದೃಶ 'ಕ್ವಿಟ್ ಇಂಡ್ಯ'
ವೆಂದೆನುತ್ತ ಗರ್ಜಿಸಲ್ಕೆ ರಾಷ್ಟ್ರ ಕಂಪಿಸೆ ||೫೦೨||

ವೀರವಾಣಿ ಕೇಳುತಾಗ
ಸಾರು ತರುಣ ಅಸಫಾಲಿ
ಯೇರಿಸುತ್ತ ಮೂರು ವರ್ಣ ದಿವ್ಯ ಧ್ವಜವನು||
ಭಾರತದಲಿ ನಭೋತಲದಿ
ರಾರಜೀಸೆ ದಿವ್ಯ ಝಂಡ
ಭಾರಿಯಾಯ್ತು ದಿಗಿಲು ಬ್ರಿಟಿಷರಾಳ್ಕೆ ನಡುಗಿತು ||೫೦೩||

ಗಾಂಧಿ ನೆಹರು 'ಅಜಾದ್' ಪಟೇಲ
ಸಂದರಾಗ ಸೆರೆಯ ಮನೆಗ
ದಂದು ಜರಗಿದಂಥ ಕ್ರಾಂತಿ ಧಗೆಯ ವರ್ಣಿಸೆ||
ಒಂದು ಸಹಸ ನಾಲಗೆಯಲಿ
ನಿರಿದ ಫಣಿಪನಿಂಗ ಸಾಧ್ಯ
ವೊಂದು ಗೂಡಿ ಭರತ ವರ್ಷ ಸಿಡಿದು ನಿಲ್ಲಲು ||೫೦೪||

ಜೈಲುಯೆಲ್ಲ ತುಂಬಿಹೋಯ್ತು
ರೈಲುಯೆಲ್ಲ ನಿಂತು ಹೋಯ್ತು
ಶಾಲೆ ಕಾಲೆ ಜೆಲ್ಲ ಮುಚ್ಚಿ ಹೋಯ್ತು ಕ್ರಾಂತಿಯ||
ಜ್ವಾಲೆ ಹರಡಿಲಾಟಿ ಚಾರ್ಜು
ಮೇಳದಲ್ಲಿ ಗುಂಡಿನೇಟು
ಧಾಳಿಯಲ್ಲಿ ಮಡಿದರೆಷ್ಟೊ ಕದನ ವೀರರು ||೫೦೫||

ತನುಮನಗಳ ಧಾರೆಯೆರೆದು
ಕೊನೆಯ ಚಳುವಳಿಯಲಿ ಪಾಲ
ನನುವಗೊಳಿಸಿ ಪ್ರಾಣ ತೃಣ ಕೆಸರಿಯಿದೆನಿನುತ||
ಇನಿತು ಸತ್ಯ ಸಮರವೆಲ್ಲಿ
ಕೊನರಿ ಬಂದು ದಿಲ್ಲವೆನಲು
ಮನದ ಭ್ರಾಂತಿ ತೊರೆದು ಸಂಗ ರಕ್ಕೆಯಿಳಿದರು ||೫೦೬||

ಯೋಗಿ ಗಾಂಧಿ ಸೆರೆಯವಾಸ
ಯೋಗ ಫಲದೆ ನರಳುತಿರಲು
ಸೋಗಿ ಹೋಯ್ತು ದೇಹ ಉಪವಾಸ ವ್ರತದಲಿ||
ಹೀಗಿರಲ್ಕೆ ಕಸ್ತುರ್ ಬಾಯಿ
ರೋಗದಿಂದ ಬಳಲಿನರಳಿ
ನಾಗಶಯನಪದವ ಸೇರೆ ಗಾಂಧಿ ನೊಂದನು ||೫೦೭||

೪. ಸೇವಾಗ್ರಾಮ

ವಾರ್ಧಸನಿಹ ಸೇವ ಗ್ರಾಮ
ವರ್ಧನೆಯರಿ ಹೆಸರು ಪಡೆದು
ವಿದ್ಯೆ ಸರ್ವಕಲ್ಲಿ ನೆಲೆಯು ಮೂಲ ಶಿಕ್ಷಣ||
ಶುದ್ಧ ತೇಜ ತಳೆದು ಮೆರೆದು
ವಿದ್ಯವಂತರನ್ನು ಕರೆದು
ಬದ್ಧ ದೇಶಿ ಶಿಕ್ಷಣವನು ಕಲಿಸತೊಡಗಿತು ||೫೦೮||

ಬಾಪುವಲ್ಲಿ ನೇತನಿರಲು
ಸೋಪ ಪತ್ತಿಯಿಂದ ಗ್ರಾಮ
ನೈಪುಣತೆಯ ಶಿಕ್ಷಣವನು ಕೊಡುತಲಿದ್ವರು||
ಕೋಪವಿಲ್ಲ ತಾಪವಿಲ್ಲ
ವೈಪರೀತ್ಯ ಕೆಡೆಯೆಯಿಲ್ಲ
ತಾಪಹಾರ ಬಾಪುವಲ್ಲಿ ಭರತ ಖಂಡದ ||೫೦೯||

ಭವ್ಯ ಭವಿಷ ರೂಪಿಸಲ್ಕೆ
ದಿವ್ಯ ಸಮುಹ ಪ್ರಾರ್ಥನೆಯಲಿ
ಸವ್ಯ ವೇದಗೀತೆ ಕೊರಾ(ನ್) ಬೈಬ್ಲ್ ಮಂತ್ರದಿ ||
ಓರ್ವ ದೇವನನ್ನು ವಿವಿಧ
ಸಾರ್ವ ಧರ್ಮ ಮಂತ್ರಗಳಲಿ
ಸುವ್ಯವಸ್ಥೆಯಿಂದ ನುತಿಪ ಪರಿಯು ಸೊಬಗೆನೆ ||೫೧೦||

ಅಮೃತವಾಣಿ ದಿನದವಾಣಿ
ಸುಮತ ತೇದಿ ತಿಥಿಯ ಪಠಣ
ನಿಮಿಷ ಮಾತ್ರ ಬಿಡುಪುಯಿರದ ಸತತ ಕ್ರಿಯೆಗಳು||
ಗಮನವಿತ್ತು ಶುಚಿಗೆ ಸಫಯಿ
ಸಮಯವರಿತು ದುಡಿವವಿವಹ
ವಿಮಲ ವಸ್ತ್ರ ಕೃಷಿಯು ಮೇಣುಗೋವು ಪಾಲನೆ ||೫೧೧||

ಸಕಲ ವೃತ್ತಿ ಶಿಕ್ಷಣದಲಿ
ನಿಖಿಲ ಶಿಷ್ಯ ನಿವಹವೆಲ್ಲ
ತಕಲಿನೂಲು ಚರಕನೂಲು ಮಗ್ಗನೇಯ್ಗೆಯ||
ಸುಖದಿ ತಿಳಿದು ಶಾಸ್ತ್ರವರಿತು
ಪ್ರಕೃತಿ ಸಹಜ ಶಿಕ್ಷೆ ಪಡೆದು
ಸ್ವಕರ ವೃತ್ತಿ ಶಿಕ್ಷೆ ಸಮನವಾಯ ಗೈಯುತ ||೫೧೨||

ಇಂದ್ರಿಯಗಳ ಕೆಲಸದಿಂದ
ಸಾಂದ್ರಮನದ ಬೆಳವಣಿಗೆಯ
ನೊಂದು ಗೂಡಿಸುತ್ತ ಬುದ್ಧಿ ನೀತಿ ಬಲಗಳ||
ಹೊಂದು ತಾತ್ಮಬಲವ ಛಲವ
ಮಂದಿಯಲ್ಲಿ ಗಳಿಸಿಕೊಂಡು
ವೃಂದ ಹೊಗಳೆ ವೃತ್ತಿ ಕುಶಲರಾಗಿ ಬರುವರು ||೫೧೩||

ದೇಶ ದೇಶ ಜನರು ಬಂದು
ತೋಷದಿಂದ ಬಾಪು ಮುಖದೆ
ಪೋಷಿಸುತಿಹ ತತ್ವ ಸುದೆಯನರಿತು ಮೋದಿಸಿ||
ಭಾಷೆ ರಾಷ್ಟ್ರ ನುಡಿಯ ದೇಶ
ಭಾಷೆಯರಿತು ಸುಕೃತಿಯರಿತು
ವೇಷ ಹೊಸದು ಧರಿಸುತಲ್ಲಿ ನಲಿಯುತಿದ್ದರು ||೫೧೪||

ನೇತರೆಲ್ಲ ಬಂದು ಬಾಪು
ಪ್ರೀತನನ್ನು ನೋಡಿ ಸಲಹೆ
ಯಾತುರದಲಿ ಪಡೆದು ತೆರಳು ತಿದ್ದಪರಿಯನು||
ಏತರದಲಿ ವರ್ಣಿಸಲ್ಕೆ
ಮಾತು ಸಾಲದಹುದುಯೆನಲು
ಸಾತಿಶಯದ ವಾರ್ಧ ಸೇವ ಶ್ರಮವು ಧರೆಯೊಳು ||೫೧೫||

ಭ್ರಾತೃವರ್ಗ ಭಗಿನಿವರ್ಗ
ದರ್ಥ ಶಾಸ್ತ್ರಿವರ್ಗ ಗ್ರಾಮ
ವೃತ್ತಿ ಕುಶಲ ವರ್ಗಕಲ್ಲಿ ನೆಲೆಯುಯಿದ್ದಿತು||
ವ್ಯರ್ಥವಲ್ಲರ ಝುದ ಪಟೇಲ
ಸ್ಫೂರ್ತನೆಹರು ಸರೋಜದೇವಿ
ಯರ್ತಿಯಿಂದ ಮೀರಬೆಹನ್‌ರೆಲ್ಲ ಸೇರುತ ||೫೧೬||

ಬಾಪುವಿಂದ ಸಲಹೆ ಪಡೆದು
ನೈಪುಣತೆಯ ರಾಜ್ಯಕಟ್ಟೆ
ತಾಪ ರಹಿತ ಶುದ್ಧ ಹೃದಯ ಮನವ ಪಡೆಯುತ॥
ಶಾಪದಿಂದ ತಪಿಪ ರಾಷ್ಟ್ರ
ದೀಪವನ್ನು ಬೆಳಗಿಸಲ್ಕೆ
ಬಾಪು ಸಮರ ಯೋಧರಾಗಿ ಸಿಡಿದುನಿಂದರು ॥೫೧೭॥

೫. ಭಾರತ ಸ್ವಾತಂತ್ರ್ಯ

ಕುಟಿಲ ಬ್ರಿಟಿಷ ನೀತಿಯಿಂದ
ಮೊಟಕ ಗೊಳಲು ದೇಶ ಪ್ರಗತಿ
ಕುಟುಕಿದಂತದಾಯ್ತು ದೈಕ್ಯ ಭದ್ರ ದೇಶಕೆ॥
ದಿಟದಿ ಹಿಂದು ಪ್ರಬಲವಿರುವ
ಪಟದಿ ಮುಸ್ಲಿಂ ಹೆಚ್ಚುಯಿರುವ
ಸ್ಫುಟದಯೆರಡು ರಾಷ್ಟ್ರವೆಂದು ಜಿನ್ನ ಘೋಷಿಸೆ ॥೫೧೮॥

ಹಿಂದು ಮುಸಲ ಭೇದ ಭಾವ
ದಿಂದ ಹಗೆಯ ಕಿಡಿಯು ಹೊತ್ತಿ
ನಂದಿಸಲ್ಕ ಸಾಧ್ಯ ದುರಿತ ನಡೆದು ಹೋಯಿತು॥
ನಿಂದು ಕ್ರೌರ್ಯ ನಿಲಿಸೆ ಗಾಂಧಿ
ಬೆಂದ ಜೀವದಿಂದ ತಪಿಸಿ
ರುಂದ್ರ ಹಿಂಸೆ ತಡೆಯೆ ನಿರಶವ್ರತವ ಕೊಂಡನು ॥೫೧೯॥

ನೇತರೆಲ್ಲ ಜೈಲಿನಿಂದ
ನೀತರಾಗಿ ಹೊರಗೆ ಬರಲು
ಭೀತಿಯಿಂದ ಬ್ರಿಟಿಷ ಪ್ರಭವು ಸೂತ್ರ ಕಳುಹಿಸಿ॥
ನೀತಿ ಸತ್ಯ ಶಾಂತಿ ಧುರಕೆ
ಕೀರ್ತಿ ತರುವ ತೆರೆದೊಳಾಂಗ್ಲ
ಭ್ರಾತೃವರ್ಗಕಳಿಸಲಾಗ ರಾಜಕೀಯದ ॥೫೨೦॥

ಮಾರ್ಗವಂದು ರೂಪುಗೊಂಡು
ದಿಗ್ಗಜಗಳ ನಾಯಕತ್ವ
ದಗ್ಗಳಿಕೆಯ ಸುಸ್ವತಂತ್ರ ಭಾನುವುದಿಸಲು
ದಿಗ್ದೆಶೆಗಳು ವಿಭ್ರಮಿಸಲು
ಸಗ್ಗಲೋಕ ಧರೆಗಿಳಿಯಲು
ಹೆಗ್ಗಳಿಕೆಯ ಸುಸ್ವತಂತ್ರ ಮಂದ ಮಾರುತ ॥೫೨೧॥

ಬೀಸತೊಡಗೆ ಚೇತನದಲಿ
ಹಾಸು ಹೊಕ್ಕ ಕೋಟಿಜನತೆ
ದೂಸರಗಳ ಹೊಡೆದು ಮೆಟ್ಟಿ ಸುಸ್ವತಂತ್ರದ||
ದಾಸ್ಯರಹಿತ ಹೊಸತು ಬಾಳ್ವೆ
ಯಾಶೆ ಹೊತ್ತು ಕುಣಿದು ನಲಿದು
ಬೇಸರಿಲ್ಲದೊಂದು ನವ್ಯ ಕನಸ ಕಂಡರು ||೫೨೨||

ಐವತ್ತರ ವರ್ಷಹಿಂದೆ
ಸೌವರ್ಣದ ಪುಣ್ಯಗಳಿಗೆ
ದೇವದತ್ತ ಪಾಂಚಜನ್ಯ ಮೊಳಗೆನಭದಲಿ ||
ದಿವ್ಯ ಕಹಳೆನಾದಗೈಯೆ
ಭವ್ಯ ಭರತ ಖಂಡ ರಮ್ಯ
ಸುವ್ಯವಸ್ಥೆ ಸುಸ್ವತಂತ್ರ ಪಡೆದು ಮೆರೆಯಲು ||೫೨೩||

ಜವಹರಲಾ(ಲ್) ನೆಹರು ನೇತ
ಭುವನ ಮೋಹ ಸುತ್ರಿವರ್ಣ
ನಿವಹ ಪೂಜೆ ಗೈದ ಝಂಡ ಕೆಂಪು ಕೋಟೆಯ||
ಧವಳದಲ್ಲಿ ಹಾರಿ ಸಲ್ಕೆ
ರವಿಯ ತೇಜ ಹೊಳಪಿನಲ್ಲಿ
ಕವಿಯು ಹೊಗಳಿ ಝಂಡ ಮೆರೆಯೆ ನಭದತಲದಲಿ ||೫೨೪||

ಶತಕದಿಂದ ಹಾರಿದಂಥ
ಪಥದ ದೂರದಾಂಗ್ಲ ಝಂಡ
ವಿತತಿಮಧ್ಯೆ ಮೌಂಟ್‌ಬೇಟನ್ ಕೆಳಗೆಯಿಳಿಸಲು||
ಅತಿಶಯಲಿ ಮಂದಮರುತ
ಕೃತಿಯ ಹಾಡೆ ಪುಷ್ಪವೃಷ್ಟಿ
ತತಿಯಲೊಂದು ಚೇತನವನು ಹೊಡೆದುಯೆಬ್ಬಿಸೆ ||೫೨೫||

ತಳಿರಿನಿಂದ ಹಸಿರಿನಿಂದ
ಪುಳಕದಿಂದ ಥಳಕದಿಂದ
ನಳನಳಿಸುವ ತೋರಣಗಳು ಹಬ್ಬದುತ್ಸವ||
ಕಳೆಯು ಕಾಂತಿ ಶಾಂತಿ ಸುಹೃತಿ
ಹೊಳೆಯುತಿರಲು ದಿಕ್ಕು ದೆಶೆಯು
ಇಳೆಯಲೊಂದು ಸಗ್ಗಲೋಕ ಮೂಡಿ ಬಂದಿತು ||೫೨೬||

ನೆಹರು ಪ್ರಪ್ರಧಾನಿ ಮತ್ತೆ
ಸುಹೃದ ಪಟೆಲ ರಜದರೆಲ್ಲ
ಮಹಿಯ ಪೊರೆವ ಭಾರಹೊತ್ತರಗ್ರ ಗಣ್ಯರು||
ಸಹನಶೀಲರಲ್ಲಿ ಶಿಸ್ತು
ವಿಹರಿಸುತಿರೆ ಶೀಲ ಸತ್ಯ
ಭುವಿಯ ಸುಂದರಾಂಗದೇಶ ಭರತವರ್ಷವು || ೫೨೭||

ನಲಿಯುತಿರಲು ಮೋದದಿಂದ
ವೊಲಿದ ರಾಜತಂತ್ರದಿಂದ
ಇಳೆಯಲೆಲ್ಲ ದಿವ್ಯನಾದ ಮೊಳಗಿ ಹೋಯಿತು ||
ಭಳಿರೆಯೆನಲು ಲೋಕವೆಲ್ಲ
ವುಳಿದು ದೇಹ ಸೊಗವ ಬಾಪು
ಸುಳಿದು ಜೀವ ಹತ್ಯಕಾಂಡ ರಕ್ತ ಪಾತದ ||೫೨೮||

ನವದ ಖೋಲಿಯಲ್ಲಿ ಮತದ
ದ್ರವಿತ ಭ್ರಾಂತಿಯಿಂದ ಮಡಿವ
ಬುವಿಯ ಬಂದು ಭಗಿನಿಯರ್ಗೆ ಮುದದೆ ಸಾಂತ್ವನ||
ಸವಿಯ ನೀಡಲಿಕ್ಕೆ ತೆರಳಿ
ಕವಿದು ಬರಲಿ ಕಂಧಕಾರ
ದವನಿಯೊಳಗೆಯು ಭಯ ಬಣಕೆ ಅಭಯ ನೀಡಿದ ||೫೨೯||

ತಲೆಯ ಮೇಲಿನಂಗವಸ್ತ್ರ
ಜ್ವಲಿಸುವಂಥ ಬಿಸಿಲ ಝಳದೆ
ವಿಲಯಕಾರಿ ಕೋಮು ಧಗೆಯ ಸುಳಿಯಮ ಧ್ಯದಿ||
ಮಲಯ ಮರುತದಂತೆ ಹೊಕ್ಕು
ಫಲವಕಂಡ ಶಾಂತಿದೂತ
ನುಳಿವ ಹಾದಿ ಯುಭಯ ಬಣಕೆ ಕಲಿಸಿ ಮರೆದನು ||೫೩೦||

ಮೈಯಲರ್ಧ ಬಟ್ಟೆ ಧರಿಸಿ
ಮೈಯ ಮೇಲೆ ಶಾಲು ಧರಿಸಿ
ಕೈಯಲೊಂದು ಪತ್ರ ಧರಿಸಿ ಸರಲ ಬಾಪುವು||
ಕಾಯಕದ ಕೈಲಾಸ ಕಂಡು
ಹೇಯ ಕೃತ್ಯ ಮಾಡುವರ್ಗೆ
ನ್ಯಾಯ ನೀತಿ ಮಾರ್ಗ ತೋರಿ ಕೀರ್ತಿಗಳಿಸಿದ ||೫೩೧||

೬. ಯುಗ ಪ್ರಳಯ

ಧರೆಯು ದಿಗಿಲು ಗೊಳುತಲಿತ್ತು
ಉರಿಯು ಹತ್ತಿ ಕೊರೆಯುತಿತ್ತು
ನರಿಯು ನಾಯಿ ಕಾಗೆ ಗೂಗೆವಿರಸ ಕೂಗಲಿ ||
ಪಿರಿದು ಶಬ್ಧ ಮಾಡುತಿತ್ತು
ದುರಿತ ಧೂಮಕೇತು ಯುಲ್ಕೆ
ಕೊರೆದು ನಭವ ಪತನಗೊಂಡು ಧರೆಗೆ ಬಿದ್ದವು ||೫೩೨||

ರಕ್ತ ಮಳೆಯು ಸುರಿಯುತಿತ್ತು
ದಿಕ್ತಟದಲಿ ರಕ್ತ ಛಾಯೆ
ಯುಕ್ತವಲ್ಲ ಹಗಲು ತಾರೆ ಮಿನುಗುತಿದ್ದಿತು||
ರಿಕ್ತ ನಭದ ಲಪಶ ಕುನದಿ
ಮುಕ್ತಗೊಳದೆ ತಿರೆಯುನಡುಗಿ
ಕರ್ಕರೆಯಲಿ ಕಂಪಗೊಳುವ ರವವು ಗುಡುಗಿತು ||೫೩೩||

ಕ್ರೈಸ್ತನಂದು ಶಿಲುಬೆ ಮೇಲೆ
ವಿಸ್ತರದಲಿ ಕೈಯ ಚಾಚಿ
ಮಸ್ತಕದಲಿ ಮುಳ್ಳು ಕಿರಿಟ ಧರಿಸಿ ಕೈಗಳ||
ಹಸ್ತಕದಲಿ ರುಧಿರ ಸುರಿಯೆ
ಸ್ವಸ್ತಿಯೆಂದು ದೇವನಾಮ
ವಸ್ತುವನ್ನು ಭಜಿಸುತಿರಲು ಸಂತನಾದನು ||೫೩೪||

ಮಿಗಿಲುಯೆಂಬುದನ್ನು ಮರೆತು
ಯುಗಪುರುಷನ ಹತ್ಯೆಗೈಯೆ
ಹಗಲುಯಿರುಳು ಸಂಚು ನಡಿಸಿ ವಿಫಲರಾದರು||
ನೊಗಕೆ ಹೆಗಲನೊಡ್ಡಿದೆತ್ತು
ನೊಗದ ಭಾರ ಹೊರುವ ತೆರದಿ
ಬಗೆದು ಸಂತನನ್ನು ಕೊಲುವ ಸಂಚು ನಡೆಸಿತು ||೫೩೫||

ಬಿರ್ಲ ಭವನದಲ್ಲಿ ಬಾಪು
ಯೆಲ್ಲ ದಿನದ ತೆರದೆ ದೇವ
ನುಲ್ಲಸಿತದ ಪ್ರಾರ್ಥನೆಯನು ಮಾಡಲೋಸಗ||
ಬಲ್ಲರೊಡನೆ ಬಾಲರೊಡನೆ
ಮೆಲ್ಲ ನಡಿಯನಿಡುತಲಿರಲು
ಘುಲ್ಲುಯೆದ್ದು ಬಾಂಬು ಸಿಡಿಯೆ ದಿಗಿಲುಗೊಳ್ಳುತ ||೫೩೬||

ಜನತೆ ಚದುರೆ ಬಾಪುವ ಭಯ
ತನದೆ ಮತ್ತೆ ಜನರ ಕರೆದು
ಮನದ ಬಯಕೆಯನ್ನು ದೇವದೇವಗೊಪ್ಪಿಸೆ॥
ಘನದ ಸರ್ವದರ್ಮ ರೀತಿ
ಯನಿತು ಮಂತ್ರಗಳಲಿಹರಿಯ
ವಿನಯದಿಂದ ಪ್ರಾರ್ಥಿಸಿದನು ಜನ ಸಮೂಹದಿ ॥೫೩೭॥

ಶುಕ್ರವಾರ ಸಂಜೆಯಂದು
ಭಕ್ತಿಯಿಂದ ಸಭೆಗೆ ತೆರಳಿ
ಮುಕ್ತಿ ಪಥಕೆ ದೇವಪಾದ ನುತಿಸಲೆಳಸುತ॥
ತಕ್ಕ ರೀತಿಯಲ್ಲಿ ತೆರಳ
ಲಿಕ್ಕೆ ಕಾದು ನಿಂತಯಮನ
ಶಕ್ತದೂತನೇಳು ಬಾರಿ ಗುಂಡು ಹಾರಿಸೆ ॥೫೩೮॥

ಬಾಪುಯೆದೆಗೆ ಗುಂಡಿನೇಟು
ವೈಪರೀತ್ಯ ಹೇಳಲಾರೆ
ಶಾಪ ಭರತ ಧರೆಗೆ ತಗಲೆ ರಾಮನಾಮದ॥
ತಾಪಹಾರ ಮಂತ್ರವನ್ನು
ಸೋಪಚಾರದಿಂದ ಪಠಿಸಿ
ಬಾಪು ಪ್ರಾಣ ತೆತ್ತ ರಕ್ತ ಮಡುವುಮಧ್ಯದಿ ॥೫೩೯॥

ಧರೆಯು ಕಂಪಿಸುತಲಿ ಶೋಕ
ದುರುಬೆಯಿಂದ ಲಶ್ರುಧಾರೆ
ಸುರಿಯುತಿತ್ತು ಚಂಡಮರುತ ಬೀಸತೊಡಗಿತು॥
ಉರಿದು ಹೋಯ್ತು ವಿಶ್ವ ಹೃದಯ
ಕರಗಿ ಹೋಯ್ತು ಭರತ ವರ್ಷ
ಮೆರೆದ ಸುಸ್ವತಂತ್ರ ಭಾನು ಮುಳುಗಿ ಹೋಗಲು ॥೫೪೦॥

ದೇಶ ದೇಶ ಕೈದೆ ವಾರ್ತೆ
ಕ್ಲೇಶದಿಂದ ನೊಂದ ಜನರು
ದೋಷ ಹೊತ್ತು ದುಗುಡದಿಂದ ಪುಣ್ಯ ನದಿಯಲಿ॥
ಪಾಶಮುಕ್ತರಾಗೆ ಮುಳುಗಿ
ದೇಶ ಭಕ್ತನಿಂಗೆ ಜಲದ
ರಾಶಿಯಿಂದ ತರ್ಪಣಗಳ ಕೊಟ್ಟು ದುಃಖದಿ ॥೫೪೧॥

ಮಾತ್ಮ ಗಾಂಧಿಯ ಮರನಾಗೆ
ಮಾತು ಬಾರದಾದ ಜನರು
ಭೀತರಾಗಿ ರಾಷ್ಟ್ರಪಿತಗೆ ಯಶ್ರು ಕರ್ಪಣ||
ಪ್ರೀತಿಯಿಂದ ಬಿಡುತ ಪುಣ್ಯ
ತಾತನಿಂಗೆ ಮುಕ್ತಿ ದೊರೆಯ
ಲಾತುರದಲಿ ದೇವನಲ್ಲಿ ಮೊರೆಯ ನಿಟ್ಟರು ||೫೪೧||

೭. ರಾಜಘಾಟ್

ಪಾರ್ಥಿವಾಶರೀರ ತೊರೆದು
ಪೃಥ್ವಿ ಪುತ್ರ ನಮರ ಬಾಪು
ಸ್ವಾರ್ಥ ರಹಿತ ಜೀವನದಲಿ ರಾಷ್ಟ್ರದೇವಿಯ||
ಸುತ್ತಿ ಸುಳಿದ ದಾಸ್ಯಬಂಧ
ಮತ್ತೆ ಕಳಚುವಂತೆ ಮಾಡಿ
ಸತ್ವ ಪೂರ್ಣ ಸುಸ್ವತಂತ್ರಗಳಿಸಿಕೊಡುತಲಿ ||೫೪೨||

ರಾಷ್ಟ್ರಪಿತನ ಹೆಸರಿನಲ್ಲಿ
ದೃಷ್ಟ ಮಹಿಮ ಹೆಸನರಿಲ್ಲಿ
ಸ್ಪಷ್ಟ ಮಾತ್ಮ ಹೆಸರಿನಿಂದ ನಮರನಾದನು||
ದುಷ್ಟ ಶಕ್ತಿ ಗೆಲ್ಲೆ ಸೋಲು
ಶಿಷ್ಟ ಶಕ್ತಿಗಿಹುದು ಕ್ಷಣಿಕ
ಸ್ಪಷ್ಟವಾಗಿ ಶಿಷ್ಟ ಶಕ್ತಿಯೊಂದೆ ಶಾಶ್ವತ ||೫೪೪||

ಗೆಲುವು ಸಾಧ್ಯವೆನಲು ಬಾಪು
ಪ್ರಳಯದಲ್ಲಿ ವಿಲಯ ಗೊಳಲು
ಕಳೆಯ ಗೂಡಿ ಮೆರೆದುದಂದು ಪುಣ್ಯ ನದಿಗಳು||
ಒಲಿದ ಬಾಪುಚಿತೆಯ ಭಸ್ಮ
ಸಲಿಲಗಳಲಿವೊಂದು ಗೂಡಿ
ನಲವಿನಾತ್ಮ ಶಕ್ತಿ ನಿತ್ಯ ವಮರವಾಯಿತು ||೫೪೩||

ಜನವರಿ 30 ಹುತಾತ್ಮರ ದಿನ- ಸರ್ವೋದಯ ದಿನ

1948ನೇ ಜನವರಿ 30 ರಂದು ಸಂಜೆ 5.30 ಗಂಟೆಗೆ ಪ್ರಾರ್ಥನಾ ಸಭೆಗೆ ತೆರಳುತ್ತಿದ್ದ ಮಹಾತ್ಮ ಗಾಂಧಿಯವರು ಹಂತಕನ ಗುಂಡಿ ನೇಟಿಗಿ ಬಲಿಯಾಗಿ ಹುತಾತ್ಮರಾದರು.

ರಾಜಘಾಟಿನಲ್ಲಿ ನಿತ್ಯ
ದೋಜೆಯಿಂದ ಪವಡಿಸಿರುವ
ಭ್ರಾಜಮಾನ ಶಕ್ತ ನಿತ್ಯ ವಂದ್ಯ ಬಾಪುವು||
ತೇಜದಲ್ಲಿ ದಿವ್ಯ ಜೋತಿ
ನೈಜ ಪ್ರಖರ ಕಾಂತಿಯಿಂದ
ಸೋಜಿಗದಲಿಯುರಿಯುತಿಹುದು ನಿತ್ಯ ಮಂಗಳ ||೫೪೭||

ವಿಶ್ವ ಮಾನ್ಯರೆಲ್ಲ ಬಂದು
ಶಾಶ್ವತನಿಗೆ ಪುಷ್ಪಮಾಲೆ
ವಿಶ್ವಸನದ ಲರ್ಪಿಸುತ್ತ ಶಾಂತಿ ಪಡೆವರು||
ನಶ್ವರದಲಿ ಶಾಶ್ವತನಿಗೆ
ವಿಶ್ವಮಾನ್ಯರೆಲ್ಲ ಮಣಿದು
ಉಶ್ವಸಿಸುತ ಚೇತನವನು ಪಿತಗೆ ಮಣಿವರು ||೫೪೮||

ಗಿಡವ ನಡುವರಲ್ಲಿ ಕೆಲರು
ಗಿಡಕೆ ನೀರು ಹೋಯ್ವರಲ್ಲಿ
ಬುಡಕೆ ಸಾರದಂಶ ಕೊಟ್ಟು ಗಿಡವ ಬೆಳೆವರು||
ಸುಡುವ ಬಿಸಿಲು ಮಳೆಯುಯೆನದೆ
ಬಡವ ಬಲಿದರೆನದೆ ಬಂದು
ವೊಡಲ ದುಃಖ ತೋಡಿ ಕೊಂಡು ಶಾಂತಿ ಪಡೆವರು ||೫೪೯||

ಇದುವೆ ಬಾಪು ಪರಮ ಕಥೆಯು
ಇದುವೆ ಮಹತು ಪುಣ್ಯ ಕಥೆಯು
ಇದನು ವೋದೆ ದೇಶ ಪ್ರೇಮ ಬೆಳೆದು ಬರುವುದು||
ಮುದದೊಳಾನು ಸುಸ್ವತಂತ್ರ
ವೊದಗಿ ಬಂದ ಹೊನ್ನದಿನದೆ
ಸದಮಲಾಂಗ ಬಾಪುವಿಂಗೆ ಕೃತಿಯನರ್ಪಿಸಿ ||೫೫೦||

ಧನ್ಯನಹೆನು ರಾಮಕೃಷ್ಣ
ಧನ್ಯನಾನು ಗಾಂಧಿ ಭಕ್ತ
ಧನ್ಯತೆಯನು ಸೂಸುತಿಹೆನು ಬಾಪುಪಾದದೆ||
ಅನ್ಯವಿಲ್ಲವೆಂಬ ತೆರದಿ
ಮಾನ್ಯನಿಂಗೆ ಮನವ ಮುಡಿಪು
ಸನ್ಮತಿಯಲಿ ಮಾಡಿ ಭಜಿಪೆ ಬಾಪು ಪದವನು ||೫೫೧||

ಬಾಪುವಿಂಗೆ ಶಕ್ತಿ ಭಕ್ತಿ
ಬಾಪುವಿಂಗೆ ನಿತ್ಯ ಸೂಕ್ತಿ
ಬಾಪುನಾಮದೊಸಗೆಯಿಂದ ಭರತ ಖಂಡದ॥
ಶಾಪಹರಿದು ಸುಸ್ವತಂತ್ರ
ದೀಪವುರಿದು ಧರೆಗೆ ವರ್ಣ
ಚಾಪವನ್ನು ಬೀರುತಿಹುದು ನಮಿಪೆ ಬಾಪುಗೆ ||೫೫೨||

ಗ್ರಂಥಯಣ:

1. An Autobiography or the story of My Experiments with Truth by M.K. Gandhi
2. The discovery of India by Jawaharlal Nehru
3. & Other books

ಶುದ್ಧಾಶುದ್ಧ ಸೂಚಕ

ಪುಟ	ಪದ್ಯ	ಅಶುದ್ಧ	ಶುದ್ಧ
2	5	ಒಂಭತ್ತನೆಯ	ಒಂಬ ತನೆಯ
2	7	ಬರೆಯ	ಬರೆಯೆ
7	28	ಸವೆಯಕಾಲ	ಸವೆಯೆ ಕಾಲ
8	37	ಕಾಲೇಜ್	ಕಾಲೆಜ್
10	45	ಕೂದು ತಾಡು	ಕೂಡುತಾಡಂ
10	46	ಅರಿದುಮಾತೆ	ನಂದುಮಾತೆ
14	63	ಮೆಟ್ರಿಕ್ ಪಡೆಯ	ಮೆಟ್ರಿಕ್ ಪಡೆಯೆ
19	88	ಮತ್ತಗುತಲಿ	ಮತ್ತಗುತ್ತಲಿ
22	99	ತಿಲುಹಲು	ತಿಳುಹಲು
22	100	ಎನಿತೋ	ಎನಿತೊ
24	107	ಮೊದಗೊಂಡನು	ಮೋದಗೊಂಡನು
25	111	ಶಿತಿಲ ಗೊಂಡು	ಶಿಥಿಲಗೊಂಡು
26	117	ಅಣ್ಣನಿಗೆ	ಅಣ್ಣನಿಂಗೆ
28	128	ತಿಳಿಯುತ್ತಿದ್ದ	ತಿಳಿಯುತಿದ್ದ
29	131	ಆತರದಲ್ಲಿ	ಆತುರದಲಿ
30	137	ಪಯಣಿಸುತಿಹ	ಪಯಣಿಸುತಿಹೆ
31	-	ಪ್ರಿಯಟೋರಿಯ	ಪ್ರಿಟೋರಿಯ
36	166	ಅಗಲದೇಹ	ಅಗಲಿದೇಹ
39	175	ತೆಲರೊಡನೆ	ತೆಲ್ಲರೊಡನೆ
43	194	ಹೊಟಕಿಚ್ಚ	ಹೊಟ್ಟೆಕಿಚ್ಚ
53	243	ಬಂದ	ಬಂಧ
54	247	ತೊಡಗಿ	ತೊಡಗ
57	259	ಯುಡಿನ	ಯುಡೀನ
58	264	ಫ್ಲೋಸೆ	ಫೋಸ್ಲೆ
64	297	ಚಿಕಿತ್ಸೆ	ಚಿಕಿಸೆ
64	297	ಪುಸ್ತಕೋಜುತ	ಪುಸ್ತಕೋದುತ

ಪುಟ	ಪದ್ಯ	ಅಶುದ್ಧ	ಶುದ್ಧ
66	307	ಪಶ್ಚಾತಾಪ	ಪಶ್ಚಾತ್ತಾಪ
73	339	ಕಾಯ ಕೆಲ	ಕಾಯಕೆಲ್ಲ
81	380	ಶಾಂತಿ ನೀಕೇತನ	ಶಾಂತಿ ನಿಕೇತನ
89	421	ಹುಡುತಿದ್ದ	ಹೊಡುತಿದ್ದ
91	430	ಲಾಗವೆತ ಸರಾಯ	ಲಾಗವೈ ಸರಾಯಿ
95	450	ಸುತ್ತುನಂತೆ	ಸುತ್ತುವಂತೆ
98	463	ವರಿಯತೋರ್ದು	ಪರಿಯತೋರ್ದು
100	475	ಜನಮನದಲಿ	ಜನರಮನದಲಿ
101	481	ದುಡಿಯಲಿಲ್ಲ	ದುಡಿಯದಲ್ಲಿ
100	475	ಮಣ್ಣುಗೂಜಿಸಲ್ಕೆ	ಮಣ್ಣುಗೂಡಿಸಲ್ಕೆ
105	499	ಸುಗುಣರೆಲ	ಸುಗುಣರೆಲ್ಲ
105	503	ತರುಣ	ತರುಣಿ
ಆವರಣ ಪುಟ ಕೊನೆ		ಸಾಹಸರತ್ನ	ಸಾಹಿತ್ಯರತ್ನ

ಶ್ರೀ ಎ.ಎಸ್. ರಾಮಕೃಷ್ಣರವರ ಇತರ ಕೃತಿಗಳು

1. ದಿವ್ಯಜ್ಯೋತಿ : ಮಹಾ ಪುರುಷರ ಜೀವನ ಚರಿತ್ರೆಗಳು - 1953
2. ಲಕ್ಷ್ಮೀಶನ ಮಹಾ ಕಾವ್ಯ: (ಜೈಮಿನಿ ಭಾರತ ಕಥಾ ಸಾರಾ) - 1954
3. ಏಶಿಯದ ಬೆಳಕು (ಎಡ್ವಿನ್ ಆರ್ನಾಲ್ಡರ 'Light of Asia' ಅನುವಾದ)- 1955 (ಮೇಲಿನ ಮೂರು ಪುಸ್ತಕಗಳು ಕೊಡಗು ಶಾಲೆಗಳಲ್ಲಿ ಉಪ ಪಠ್ಯ ಪುಸ್ತಕಗಳಾಗಿದ್ದುವು)
4. ವ್ಯವಸಾಯ ವಿಜ್ಞಾನ -(ನಾಲ್ಕು ಭಾಗಗಳಲ್ಲಿ) ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವೃತ್ತಿ ಶಿಕ್ಷಣ ಪಠ್ಯ ಪುಸ್ತಕ - 1952
5. ಶ್ರೀ ರಾಘವೇಂದ್ರ ವಿಜಯ (ವಾರ್ಧಕ ಷಟ್ಪದೀ ಕಾವ್ಯ) -1963
6. ಶ್ರೀ ಕಾವೇರಿ ವಿಜಯ (ವಾರ್ಧಕ ಷಟ್ಪದೀ ಕಾವ್ಯ) -1963
7. ಮೂಲ ಶಿಕ್ಷಣದ ಪಂಚ ತತ್ವಗಳ) (The Five C's of Basic Education)
8 " ಬೆಡಗಿನ ಕೊಡಗು" -1981
9 ಶ್ರೀ ಸದ್ಗುರು ಅಪ್ಪಯ್ಯ ಸ್ವಾಮಿ ವಿಜಯ (ವಾರ್ಧಕ ಷಟ್ಪದೀ ಕಾವ್ಯ) -1964
10 ಶ್ರೀ ರಾಮ ಚರಿತಾಮೃತಂ ಮಹಾಕಾವ್ಯ(ಕುಶಲ ರಾಮಾಯಣ)-1984- 2500 ವಾರ್ಧಕ ಷ್ಟಪದೀ ಪದ್ಯಗಳನ್ನು ಒಳಗೊಂಡಿದೆ.

ಕೊಡವತಕ್ಕರ ಭಾಮಿನಿ ಷಟ್ಪದೀ ಕಾವ್ಯ

11 ಶ್ರೀ ಕಾವೇರಿ ಮಹಾತ್ಮೆ -1983
12 ಶ್ರೀ ಶನಿದೇವಡ ಮಹಾತ್ಮೆ-1984
13 ಶ್ರೀ ಸದ್ಗುರು ಅಪ್ಪಯ್ಯಸ್ವಾಮಿ ಮಹಾತ್ಮೆ -1985
14 ಕೊಡಗ್‌ರ ಬೀರಂಗಲ್ಲ್, ದೇವಕಾಡ್, ಪನ್ನ ಭೂಮಿ (ಕೊಡವ ಸಾಹಿತ್ಯ ಅಕಾಡೆಮಿ ಪ್ರಕಾಶಿತ) -1997

ಕನ್ನಡ ಮುಂದುವರೆದದ್ದು.

15 ನಾಟಕ : ಅಭಿನಯ ಯೋಗ್ಯನಾಟಕಗಳು -1988
16 ಮಧುರ ಸಂಗಮ (ಕವನ ಸಂಗ್ರಹ) - 1990
17 ಸನಾತನ ಧರ್ಮ ಮತ್ತು ತೀರ್ಥ ಕ್ಷೇತ್ರಗಳು :(ಸನಾತನ ಧರ್ಮ ಸಂಸ್ಥೆಯಿಂದ ಪ್ರಕಾಶಿತ)
18 ಗಾಯತ್ರೀ ಮಹಾಮಂತ್ರ (ಜಪವಿಧಾನ,' ಮಹಿಮೆ ಇತ್ಯಾದಿ) ಕೊಡಗು ವಿಪ್ರ ಯುವ ಸಂಘದ ಪ್ರಕಟಣೆ -1999
19 ಪ್ರಸ್ತುತ ಕಾವ್ಯ: ಭೋಗಷಟ್ಪದೀ
ಸ್ವತಂತ್ರ ಭಾನು: ಮಹಾತ್ಮ ಗಾಂಧಿಯವರ ಜೀವನ ದರ್ಶನ - 2002

ಇಂಗ್ಲೀಷು:

1. Divine Life of Sri Sadguru Appaiah Swami Founder Sri Cauvery Ashram Virajpet, (Yet to be published)
2. Teacher Par Excellence and Educational Revolutionary : B.S. Kushalappa (Yet to be published.)

ಲೇಖಕರ ಪರಿಚಯ



ಶ್ರೀ ವಿ.ಎಸ್. ರಾಮಕೃಷ್ಣರವರು ಕೊಡಗಿನ ಗೋಣಿಕೊಪ್ಪಲು ಪೊನ್ನಂಪೇಟೆ ಮತ್ತು ವಿರಾಜಪೇಟೆಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಪ್ರೌಢ ಶಿಕ್ಷಣಗಳನ್ನು ಕ್ರಮಾನುಗತವಾಗಿ ಮುಗಿಸಿ 1944ರಲ್ಲಿ ಮೈಸೂರ ಇಂಟರ್ ಮೀಡಿಯೆಟ್ ಕಾಲೇಜಿನಿಂದ ಇಂಟರ್ ಮೀಡಿಯೆಟ್ ತೇರ್ಗಡೆಯಾದರು. 1942ರಲ್ಲಿ ಮೈಸೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗ 'ಕ್ವಿಟ್ ಇಂಡಿಯ' ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆಯ ವಾಸವನ್ನು ಅನುಭವಿಸಿದರು. 1947ನೇ ಇಸವಿಯಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎಸ್ಸಿ. (ಆನರ್ಸ್) ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ 1948ರಲ್ಲಿ ಮೈಸೂರಿನ ಟೀಚರ್ಸ್ ಕಾಲೇಜಿನಿಂದ 'ಬಿ.ಟಿ.' ಪದವಿ ಪಡೆದರು. 1972ರಲ್ಲಿ ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ. ಪದವಿಗಳಿಸಿದರು. 1956ರಲ್ಲಿ ದೊಡ್ಡ ಬಳ್ಳಾಪುರದಿಂದ 'ಬೇಸಿಕ್ ಎಜ್ಯುಕೇಷನ್ ಡಿಪ್ಲೋಮ' ಮತ್ತು 1966 ಬೆಂಗಳೂರಿನ ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಇಂಗ್ಲೀಷ್ ನಿಂದ 'ಸರ್ಟಿಫಿಕೇಟ್ ಇನ್ ಟೀಚಿಂಗ್ ಆಫ್ ಇಂಗ್ಲೀಷ್ ಪ್ರಶಸ್ತಿಗಳನ್ನು ಪಡೆದರು.

1948ರಿಂದ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲು ಮತ್ತು ಜೂನಿಯರ್ ಕಾಲೇಜುಗಳಲ್ಲಿ ಅಧ್ಯಾಪಕರಾಗಿಯೂ, 1956ರಿಂದ ಕೂಡಿಗೆ ಮೂಲ ಶಿಕ್ಷಣ ತರಬೇತು ಕಾಲೇಜಿನಲ್ಲಿ ಉಪನ್ಯಾಸಕರಾಗಿಯೂ ಮಡಿಕೇರಿ, ವಿರಾಜಪೇಟೆ, ನಂಜನಗೂಡು ತಾಲೋಕುಗಳಲ್ಲಿ ಶಾಲಾ ಪರಿಶೀಲನಾಧಿಕಾರಿಗಳಾಗಿಯೂ (Inspector) ಸೇವೆ ಸಲ್ಲಿಸಿದರು. ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಬಿ.ಟಿ.ಐ. ಸೂಪರಿಂಟೆಂಡೆಂಟ್ ಹಾಗೂ ಧಾರವಾಡದ ಇಂಗ್ಲೀಷ್ ಭಾಷಾ ತರಬೇತು ಕೇಂದ್ರ (ELTC)ದ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದರು. ಕೂಡಿಗೆ (ಕೊಡಗು)ಯ ಬೇಸಿಕ್ ಟ್ರೈನಿಂಗ್ ಕಾಲೇಜಿನಲ್ಲಿ 1970ರಿಂದ 1977ರವರೆಗೆ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ಸರಕಾರಿ ಸೇವೆಯಿಂದ ನಿವೃತ್ತರಾದರು.

ಕನ್ನಡ ಸಾಹಿತ್ಯ ಸೇವೆಯ ವಿಶೇಷ ಹಂಬಲದಿಂದ ಪ್ರದೀಪ್ತರಾಗಿ 1952ರಿಂದ ಇದುವರೆಗೆ ಇವರು ಬರೆದು ಪ್ರಕಟಿಸಿರುವ ಪುಸ್ತಕಗಳಯಾದಿಯನ್ನು ಇದರ ಜೊತೆ ಪ್ರಕಟಿಸಲಾಗಿದೆ. 'ಶ್ರೀ ರಾಮ ಚರಿತಾಮೃತಂ. (ಕುಶಲರಾಮಾಯಣ) ಇವರು ಬರೆದು ಪ್ರಕಟಿಸಿರುವ ಬೃಹತ್ ವಾರ್ಧಕ ಷಟ್ಪದೀ ಮಹಾಕಾವ್ಯ. ಇವರು ಕೊಡವ ಭಾಷೆಯಲ್ಲಿ ಮೂರು ಭಾಮಿನೀ ಷಟ್ಪದೀ ಕಾವ್ಯಗಳನ್ನು ಒಂದು ಗದ್ಯ ಪುಸ್ತಕವನ್ನು ಬರೆದು ಪ್ರಕಟಿಸಿರುವರು. ಕನ್ನಡ, ಕೊಡವ, ಇಂಗ್ಲೀಷ್ ಭಾಷೆಗಳಲ್ಲಿ ಇವರ ಲೇಖನಗಳು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ.

ಪ್ರಸ್ತುತ ಇವರ ಕಾವ್ಯ ಭೋಗಷಟ್ಪದಿಯ 'ಸ್ವತಂತ್ರ ಭಾನು' (ಮಹಾತ್ಮಗಾಂಧೀ ಜೀವನ ದರ್ಶನ) ಕನ್ನಡಿಗರ ಕರಗತವಾಗಿದೆ. ಜನತಾರೂಪಿ ಜನಾರ್ದನ ಸೇವೆಯೇ ಇವರ ಬಾಳಿನ ಗುರಿ. ಇತ್ತೀಚೆಗೆ ಇವರಿಗೆ ತ್ರಿಭಾಷಾ ಸಾಹಸರತ್ನ ಪ್ರಶಸ್ತಿ ಪ್ರಾಪ್ತವಾಗಿದೆ. [ಬೆಂಗಳೂರು ಕನ್ನಡ ಅಭಿವೃದ್ಧಿ ಬಳಗದಿಂದ.]

ಪ್ರಕಾಶಕರು.